ಸೋಮವಾರ, ಮೇ 23, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 142 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಯಾವುದೇ ಕೋರ್ಸ್ ಆಯ್ಕೆಯ ಮುನ್ನ ವಿದ್ಯಾರ್ಥಿಗಳು ವೃತ್ತಿಯೋಜನೆ ಮಾಡಿಕೊಳ್ಳಬೇಕು. ಯೋಜನೆಗೆ ತಕ್ಕಂತೆ ಕೋರ್ಸ್ ಆಯ್ಕೆ ಮಾಡಿಕೊಳ್ಳುವುದನ್ನು ಎಸ್ಸೆಸ್ಸೆಲ್ಸಿಯಿಂದಲೇ ಆರಂಭಿಸಬೇಕು.



ಭೂ ಪರಿವರ್ತನೆಯೇ ಭ್ರಷ್ಟರಿಗೆ ಆದಾಯದ ಮೂಲ: ಜನರಿಗೆ ಲಂಚಾವತಾರದ ಶೂಲ

‘ಸಂದಾಯ’ವಾದರೆ ಸುಲಲಿತ ‘ಕಂದಾಯ’

• ವಿ.ಎಸ್. ಸುಬ್ರಹ್ಮಣ್ಯ



ಭ್ರಷ್ಟಾಚಾರ ಜನರಿಗೆ ಪ್ರಹಾರ

ಬೆಂಗಳೂರು: ಆದಾಯ, ಜಾತಿ ಪ್ರಮಾಣಪತ್ರ, ಪಿಂಚಣಿ, ಜನನ ಮತ್ತು ಮರಣ ನೋಂದಣಿಗೆಲ್ಲ ಸಾವಿರದ ಲೆಕ್ಕ. ಖಾತೆ ಬದಲಾವಣೆ, ಭೂ ಪರಿವರ್ತನೆ, ಪಕ್ಕಾ ಪೋಡಿ, ಜಮೀನು ಮಂಜೂರಾತಿಯಂತಹ ಕೆಲಸಗಳಿಗೆ ಲಕ್ಷದಿಂದ ಕೋಟಿಯವರೆಗೂ ಕೈ ಸುಡುವುದು ಖಚಿತ. ಕೈಬಿಸಿ ಮಾಡದೇ ಇಲ್ಲಿ ಯಾವುದೂ ಆಗುವುದಿಲ್ಲ ಉಚಿತ.... ಇದು ಕಂದಾಯ ಇಲಾಖೆಯ ‘ಕಾಂಚಾಣ ವೈಭವ’.

ಕಂದಾಯ ಇಲಾಖೆಯ ರೆಂಬೆ ಕೊಂಬೆಗಳಂತೆ ಇರುವ ನೋಂದಣಿ ಮತ್ತು ಮುದ್ರಾಂಕ, ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆಗಳ ನರನಾಡಿಗಳಲ್ಲಿಯೂ ಭ್ರಷ್ಟಾಚಾರ ಎಗ್ಗಿಲ್ಲದೇ ನಡೆಯುತ್ತಿದೆ. ಪಿಂಚಣಿಗಾಗಿ ಕಚೇರಿಗೆ ಎಡತಾಕುವ ಬಡಬಗ್ಗರೋ, ಬಡಾವಣೆ, ಅಪಾರ್ಟ್‌ಮೆಂಟ್ ನಿರ್ಮಿಸಿ, ಮಾರಾಟ ಮಾಡಿ ಕೋಟ್ಯಂತರ ರೂಪಾಯಿ ವಹಿವಾಟು ನಡೆಸುವ ರಿಯಲ್ ಎಸ್ಟೇಟ್ ಉದ್ಯಮಿಯೋ ‘ಕಪ್ಪ’ ಸಲ್ಲಿಸದೇ ಕಂದಾಯ ಇಲಾಖೆಯ ಸೇವೆ ಪಡೆಯಲು ಅಸಾಧ್ಯ ಎಂಬ ಮಾತು ರಾಜ್ಯದ ಉದ್ದಗಲಕ್ಕೆ ಕೇಳಿಬರುತ್ತಿದೆ.

ಸಾಮಾಜಿಕ ಪಿಂಚಣಿ ಮಂಜೂರಾತಿ, ಜಾತಿ ಮತ್ತು ಆದಾಯ ಪ್ರಮಾಣಪತ್ರ ಸೇರಿದಂತೆ ಸಣ್ಣ ಕೆಲಸಗಳಿಗೆ ಗ್ರಾಮ ಲೆಕ್ಕಿಗರಿಂದ ಕಂದಾಯ ನಿರೀಕ್ಷಕರವರೆಗಿನ ಅಧಿಕಾರಿಗಳನ್ನು ಚೆನ್ನಾಗಿ ನೋಡಿಕೊಂಡರೆ ಸಾಕು. ಕೆಲವೊಮ್ಮೆ ವಿಶೇಷ ಸಂದರ್ಭಗಳಲ್ಲಿ ತಹಶೀಲ್ದಾರರವರೆಗೂ ಈ ವ್ಯಾಪ್ತಿ ವಿಸ್ತರಣೆಯಾಗುತ್ತಿದೆ. ರಾಜ್ಯದ ಬಹುತೇಕ ಎಲ್ಲ ತಾಲ್ಲೂಕು ಕಚೇರಿಗಳಲ್ಲೂ ಈ ಕೆಲಸ ಮಾಡುವುದಕ್ಕಾಗಿಯೇ ಮಧ್ಯವರ್ತಿಗಳಿದ್ದಾರೆ. ಅರ್ಜಿಯ ಮೇಲೆ ಸಹಿಹಾಕಿ, ಅವರು ಹೇಳಿದಷ್ಟು ಮೊತ್ತವನ್ನು ಕೈಗಿತ್ತರೆ ಕೆಲಸ ಸಲೀಸು.

ಪಕ್ಕಾಪೋಡಿಯೇ ‘ಹುಲ್ಲುಗಾವಲು’: ಪಕ್ಕಾ ಪೋಡಿ ಅರ್ಜಿ ಸಲ್ಲಿಸುವುದು ತೀರಾ ದುಬಾರಿ. ಬೆಂಗಳೂರು ಸೇರಿದಂತೆ ರಿಯಲ್ ಎಸ್ಟೇಟ್ ಉದ್ಯಮದ ಚಟುವಟಿಕೆಗಳು ಹೆಚ್ಚಾಗಿರುವ ಪ್ರದೇಶಗಳಲ್ಲಿ ಪಕ್ಕಾ ಪೋಡಿಗೆ ಅರ್ಜಿ ಸಲ್ಲಿಸುವವರು ಜಮೀನಿನ ಮೌಲ್ಯದ ಒಂದು ಭಾಗವನ್ನೇ ಲಂಚಕ್ಕಾಗಿ ತೆಗೆದಿರಿಸಬೇಕಾದ ಸ್ಥಿತಿ ಇದೆ. ಬೆಂಗಳೂರು ಮತ್ತು ಸುತ್ತಮುತ್ತ ಪಕ್ಕಾಪೋಡಿ ಪ್ಯಾಕೇಜ್ ‘ದರ’ ಪ್ರತಿ ಎಕರೆಗೆ ₹ 50 ಲಕ್ಷದವರೆಗೂ ಇದೆ. ಇತರ ನಗರಗಳು, ಜಿಲ್ಲಾ ಕೇಂದ್ರಗಳಲ್ಲೂ ಪೋಡಿಗೆ ಲಕ್ಷಗಟ್ಟಲೆ ಖರ್ಚು ಮಾಡಬೇಕಾದ ಸ್ಥಿತಿ ಇದೆ ಎನ್ನುತ್ತಾರೆ ರಿಯಲ್ ಎಸ್ಟೇಟ್ ಉದ್ಯಮಿಗಳು.

‘ಪಕ್ಕಾಪೋಡಿ ಪ್ರಕ್ರಿಯೆ ಗ್ರಾಮ ಲೆಕ್ಕಿಗ, ಕಂದಾಯ ನಿರೀಕ್ಷಕ, ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಹಾಗೂ ಭೂದಾಖಲೆಗಳು ಮತ್ತು ಭೂ ಮಾಪನ ಇಲಾಖೆಯ ಅಧಿಕಾರಿಗಳ ವ್ಯಾಪ್ತಿಗೆ ಬರುತ್ತದೆ. ಎಲ್ಲರಿಗೂ ಸೇರಿ ‘ಪ್ಯಾಕೇಜ್’ ನಿಗದಿ ಮಾಡುವ ವ್ಯವಸ್ಥೆ ಈಗ ಚಾಲ್ತಿಯಲ್ಲಿದೆ. ಪ್ರತಿ ತಾಲ್ಲೂಕು, ಜಿಲ್ಲೆ, ನಗರಗಳಿಗೆ ಅನುಗುಣವಾಗಿ ಪ್ಯಾಕೇಜ್ ನಿಗದಿಯಾಗಿದೆ’ ಎನ್ನುತ್ತಾರೆ ಅವರು.

ರಾಜ್ಯದಲ್ಲೀಗ ಆರು ಲಕ್ಷಕ್ಕೂ ಹೆಚ್ಚು ಪೋಡಿ ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. ಕೆಲವು ಅರ್ಜಿಗಳು ಮೂರು ವರ್ಷಕ್ಕೂ ಹೆಚ್ಚು ಕಾಲದಿಂದ ಬಾಕಿ ಉಳಿದಿವೆ. ಜ್ಯೇಷ್ಠತೆ ಆಧಾರದಲ್ಲಿ ಅರ್ಜಿ ವಿಲೇವಾರಿ ಆಗಬಹುದು ಎಂದು ಲಕ್ಷಾಂತರ ಮಂದಿ ಕಾಯುತ್ತಲೇ ಇದ್ದಾರೆ. ಅಧಿಕಾರಿಗಳ ‘ಬೇಡಿಕೆ’ ಪೂರೈಸಿದವರ ಅರ್ಜಿಗಳು ಬೇಗ ಮುಂದಕ್ಕೆ ಸಾಗಿ ಪಕ್ಕಾಪೋಡಿ ಮುಗಿಸಿ, ಹೊಸ ನಕ್ಷೆ ಮತ್ತು ಸರ್ವೆ ಸಂಖ್ಯೆ ಪಡೆಯುತ್ತಿವೆ.

‘ಸರ್ಕಾರದಿಂದ ಮಂಜೂರಾದ ಜಮೀನುಗಳ ಪಕ್ಕಾಪೋಡಿ ಪ್ರಕ್ರಿಯೆ ಬೆಂಗಳೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಅಧಿಕಾರಿಗಳ ಪಾಲಿಗೆ ಹುಲ್ಲುಗಾವಲು ಇದ್ದಂತೆ. ನಾಪತ್ತೆಯಾದ ದಾಖಲೆಗಳ ದೃಢೀಕರಣ ಸಮಿತಿ, ಭೂ ದಾಖಲೆಗಳ ಇಲಾಖೆಯ ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು, ತಹಶೀಲ್ದಾರ್, ಉಪ ವಿಭಾಗಾಧಿಕಾರಿ, ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಎಲ್ಲ ಹಂತಗಳಲ್ಲೂ ‘ಗಂಟು’ ತಲುಪಿಸಿದರಷ್ಟೇ ಪೋಡಿ ಕಡತ ಕೊನೆಯ ಹಂತ ತಲುಪುವುದು’ ಎಂದು ಕಂದಾಯ ಇಲಾಖೆಯೊಳಗಿನ ಭ್ರಷ್ಟಾಚಾರದ ವಿವರ ನೀಡುತ್ತಾರೆ ಅದೇ ಇಲಾಖೆಯೊಳಗಿರುವ ಅಧಿಕಾರಿಗಳು.

ಭೂ ಪರಿವರ್ತನೆಯಲ್ಲೂ ‘ಸುಗ್ಗಿ’: ವಿವಿಧ ವಲಯಗಳಲ್ಲಿ ಗುರುತಿಸಿರುವ ಜಮೀನುಗಳನ್ನು ಅನ್ಯ ಉದ್ದೇಶಕ್ಕೆ ಬಳಸುವ ಮುನ್ನ ಭೂ ಪರಿವರ್ತನೆ ಆದೇಶ ಕೋರಿ ಅರ್ಜಿ ಸಲ್ಲಿಸುವವರು ದೊಡ್ಡ ಗಾತ್ರದ ಹಣದ ಥೈಲಿ ಹಿಡಿದಿದ್ದರಷ್ಟೇ ಕೆಲಸ ಸಲೀಸು. ಬೆಂಗಳೂರು ಮತ್ತು ಸುತ್ತಮುತ್ತ ಪ್ರತಿ ಎಕರೆಗೆ ಹತ್ತು ಲಕ್ಷಗಳವರೆಗೂ ಕೈ ಬದಲಾವಣೆ ಆದರಷ್ಟೇ ಭೂ ಪರಿವರ್ತನೆ ಆದೇಶ ಪಡೆಯಲು ಸಾಧ್ಯ ಎಂಬ ಸ್ಥಿತಿ ಇದೆ.

ರಾಜ್ಯದ ಎರಡನೇ ಹಂತದ ನಗರಗಳು, ಜಿಲ್ಲಾ ಕೇಂದ್ರಗಳು, ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ತಾಲ್ಲೂಕು ಕೇಂದ್ರಗಳು ಮತ್ತು ಸಣ್ಣ ನಗರ ಹಾಗೂ ಪಟ್ಟಣಗಳ ವ್ಯಾಪ್ತಿಯಲ್ಲಿ ನಿವೇಶನ, ಮನೆಗಳಿಗೆ ಬೇಡಿಕೆ ಹೆಚ್ಚಿದಂತೆ ಭೂ ಪರಿವರ್ತನೆ ಆದೇಶ ಕೋರಿದ ಅರ್ಜಿಗಳೂ ಹೆಚ್ಚುತ್ತಿವೆ. ಎಲ್ಲ ಕಡೆಗಳಲ್ಲೂ ಭೂ ಪರಿವರ್ತನೆ ಆದೇಶಕ್ಕೆ ಎಕರೆ ಲೆಕ್ಕದಲ್ಲಿ ಅಘೋಷಿತ ದರ ಪಟ್ಟಿಗಳಿವೆ ಎಂಬುದನ್ನು ಕಂದಾಯ ಇಲಾಖೆ ವಿವಿಧ ವಿಭಾಗಗಳ ಗೋಡೆ, ಮೇಜು–ಕುರ್ಚಿಗಳೇ ಪಿಸುಗುಡುತ್ತವೆ. ನೇರವಾಗಿಯೋ, ದಲ್ಲಾಳಿಗಳ ಮೂಲಕವೋ ಆದೇಶವನ್ನು ‘ಖರೀದಿ’ ಮಾಡಲೇಬೇಕು.

‘ಭೂ ಪರಿವರ್ತನೆ ಅರ್ಜಿಗಳನ್ನು ಹಣ ನೀಡದೇ ವಿಲೇವಾರಿ ಮಾಡುವುದೇ ಇಲ್ಲ ಎಂಬಷ್ಟರ ಮಟ್ಟಿಗೆ ಕಂದಾಯ ಇಲಾಖೆಯ ಕಾರ್ಯವೈಖರಿ ಹದಗೆಟ್ಟಿದೆ. ಗ್ರಾಮ ಲೆಕ್ಕಿಗನಿಂದ ಜಿಲ್ಲಾಧಿಕಾರಿಗಳವರೆಗೆ ಎಲ್ಲರೂ ಇದರಲ್ಲಿ ಪಾಲು ಪಡೆಯುತ್ತಿದ್ದಾರೆ. ಹಣ ಕೊಟ್ಟವರಿಗೆ ಯಾವ ಪರಿಶೀಲನೆ, ನಿರ್ಬಂಧಗಳೂ ಇಲ್ಲದೆ ಆದೇಶ ಸಿಗುತ್ತದೆ. ಹಣ ಕೊಡದ ವ್ಯಕ್ತಿ ವರ್ಷಗಟ್ಟಲೆ ಕಚೇರಿಯಿಂದ ಕಚೇರಿಗೆ ಅಲೆದಾಡಿದರೂ ಕೆಲಸ ಆಗುವುದಿಲ್ಲ’ ಎನ್ನುತ್ತಾರೆ ಕಂದಾಯ ಇಲಾಖೆಯ ಒಳ–ಹೊರಗನ್ನು ಅಧಿಕೃತವಾಗಿ ತಿಳಿದಿರುವ ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

ಭ್ರಷ್ಟಾಚಾರ ತಡೆಗೆ ಪ್ರಯತ್ನ: ಸಚಿವ ಅಶೋಕ



ಬೆಂಗಳೂರು: ‘ಕಂದಾಯ ಇಲಾಖೆಯಲ್ಲಿ ಭೂ ಮಂಜೂರಾತಿ, ಭೂ ಪರಿವರ್ತನೆ, ಪಕ್ಕಾ ಪೋಡಿ, ವ್ಯಾಜ್ಯಗಳ ವಿಚಾರಣೆ ಮತ್ತಿತರ ಕೆಲಸಗಳಲ್ಲಿ ದೊಡ್ಡಮಟ್ಟದ ಭ್ರಷ್ಟಾಚಾರ ಇರುವುದು ನಿಜ. ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಂಡು ಭ್ರಷ್ಟಾಚಾರ ನಿಗ್ರಹಿಸುವ ಪ್ರಯತ್ನ ಮಾಡುತ್ತಿದ್ದೇನೆ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

‘ಭೂ ಸುಧಾರಣಾ ಕಾಯ್ದೆಯ ಸೆಕ್ಷನ್ 79 ಎ ಮತ್ತು 79 ಬಿ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯಲ್ಲಿ ದೊಡ್ಡ ಭ್ರಷ್ಟಾಚಾರ ನಡೆಯುತ್ತಿತ್ತು. ಆ ಸೆಕ್ಷನ್‌ಗಳನ್ನೇ ರದ್ದು ಮಾಡಿದ್ದೇವೆ. ಪೋಡಿ ಪ್ರಕ್ರಿಯೆಯಲ್ಲಿ ಲಂಚದ ಹಾವಳಿ ತಡೆಗೆ ಸ್ವಯಂ ಪೋಡಿ ವ್ಯವಸ್ಥೆ ಜಾರಿಗೆ ತರಲಾಗಿದೆ. ಪಿಂಚಣಿ ಮಂಜೂರಾತಿಯಲ್ಲೂ ಮಧ್ಯವರ್ತಿಗಳ ಹಾವಳಿ ತಡೆಗೆ ಸಹಾಯವಾಣಿ ಆರಂಭಿಸಲಾಗಿದೆ’ ಎಂದರು. ‘ನೋಂದಣಿ ಇಲಾಖೆಯಲ್ಲಿನ ಭ್ರಷ್ಟಾಚಾರ ತಡೆಯುವುದಕ್ಕೆ ಭೂ ದಾಖಲೆಗಳ ಡಿಜಿಟಲೀಕರಣ ಮಾಡಲಾಗುವುದು. ನೋಂದಣಿಯಾದ ಮರುದಿನವೇ ಖಾತೆ ಬದಲಾವಣೆ ಆಗುವಂತಹ ವ್ಯವಸ್ಥೆಯನ್ನು ಜಾರಿಗೊಳಿಸುತ್ತೇವೆ. ಕಂದಾಯ ಇಲಾಖೆಯಲ್ಲಿ ಭ್ರಷ್ಟಾಚಾರಕ್ಕೆ ಸಂಪೂರ್ಣವಾಗಿ ಕಡಿವಾಣ ಹಾಕುವುದು ನನ್ನ ಗುರಿ’ ಎಂದು ಪ್ರತಿಕ್ರಿಯಿಸಿದರು.

ಮೇಲ್ಮನೆ: ಅಭ್ಯರ್ಥಿ ಆಯ್ಕೆ ಕಗ್ಗಂಟು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಾಮಪತ್ರ ಸಲ್ಲಿಕೆಗೆ ನಾಳೆ ಕೊನೆಯ ದಿನ
- ಮೂರೂ ಪಕ್ಷಗಳಲ್ಲೂ ಟಿಕೆಟ್‌ಗಾಗಿ ಪೈಪೋಟಿ
- ಇಂದು ಪಟ್ಟಿ ಹೊರಬೀಳುವ ಸಾಧ್ಯತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್‌ನ ಏಳು ಸ್ಥಾನಗಳಿಗೆ ಜೂನ್ 3ರಂದು ನಡೆಯುವ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಮೂರೂ ಪಕ್ಷಗಳಿಗೆ ಕಗ್ಗಂಟಾಗಿ ಪರಿಣಮಿಸಿದೆ.

ವಿಧಾನಸಭೆಯ ಬಲಾಬಲದ ಪ್ರಕಾರ ಏಳು ಸ್ಥಾನಗಳ ಪೈಕಿ ಬಿಜೆಪಿ 4, ಕಾಂಗ್ರೆಸ್ 2 ಮತ್ತು ಜೆಡಿಎಸ್ ಒಂದು ಸ್ಥಾನದಲ್ಲಿ ಗೆಲುವು ಸಾಧಿಸಲಿವೆ. ಅಭ್ಯರ್ಥಿಗಳಾಗಲು ಮೂರು ಪಕ್ಷಗಳಲ್ಲೂ ಆಕಾಂಕ್ಷಿಗಳು ಭಾರೀ ಪೈಪೋಟಿ ನಡೆಸಿದ್ದಾರೆ. ನಾಮಪತ್ರ ಸಲ್ಲಿಕೆಗೆ ಎರಡೇ ದಿನ ಬಾಕಿ ಇರುವುದರಿಂದ ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಯಾವುದೇ ಕ್ಷಣದಲ್ಲಾದರೂ ಅಭ್ಯರ್ಥಿಗಳ ಪಟ್ಟಿ ಹೊರ ಬೀಳಬಹುದು ಎಂದು ಮೂಲಗಳು ತಿಳಿಸಿವೆ.

ಜೆಡಿಎಸ್‌ನ ಒಂದು ಸ್ಥಾನಕ್ಕೂ ಭಾರೀ ಪೈಪೋಟಿ ಏರ್ಪಟ್ಟಿದ್ದು, ಕೊನೇ ಕ್ಷಣದಲ್ಲಿ ಅಭ್ಯರ್ಥಿ ಹೆಸರು ಅಂತಿಮಗೊಳ್ಳಬಹುದು ಎಂದು ಆ ಪಕ್ಷದ ಮೂಲಗಳು ಹೇಳಿವೆ. ‘ನಾಮಪತ್ರ ಸಲ್ಲಿಕೆಗೆ ಅಧಿಸೂಚನೆ ಹೊರಡಿಸಿದ ನಂತರ ಈವರೆಗೆ ಒಂದೇ ಒಂದು ನಾಮಪತ್ರ ಸಲ್ಲಿಕೆಯಾಗಿಲ್ಲ’ ಎಂದು ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ.

ಬಿಜೆಪಿಯಲ್ಲಿ ಬಿ.ವೈ.ವಿಜಯೇಂದ್ರ, ನಿರ್ಮಲ್ ಕುಮಾರ್ ಸುರಾನ, ಛಲವಾದಿ ನಾರಾಯಣಸ್ವಾಮಿ, ಮಹಾಂತೇಶ ಕವಟಗಿಮಠ, ಕೇಶವಪ್ರಸಾದ್, ಅಶ್ವತ್ಥನಾರಾಯಣಗೌಡ, ಭಾನುಪ್ರಕಾಶ್ ಮುಂತಾದವರ ಹೆಸರುಗಳು ಪಟ್ಟಿಯಲ್ಲಿ ಸೇರಿವೆ ಎಂದು ಹೇಳಲಾಗಿದೆ. ವಿಜಯೇಂದ್ರ ಸೇರಿ ಕೆಲವು ಆಕಾಂಕ್ಷಿಗಳು ಇತ್ತೀಚೆಗೆ ದೆಹಲಿಗೆ ಹೋಗಿ ಬಂದಿದ್ದರು. ಆದರೆ, ಬಿಜೆಪಿಯಲ್ಲಿ ಎಲ್ಲರ ನಿರೀಕ್ಷೆಯನ್ನು ಹುಸಿಗೊಳಿಸಿ, ಅಚ್ಚರಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ನಿದರ್ಶನಗಳೂ ಈ ಹಿಂದೆ ಇವೆ. ಹೀಗಾಗಿ ಪಟ್ಟಿ ಹೊರ ಬೀಳುವವರೆಗೂ ಇಂತಹವರೇ ಅಭ್ಯರ್ಥಿಗಳಾಗುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಸೋಮವಾರ ಪಟ್ಟಿ ಹೊರಬೀಳುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್‌ನಲ್ಲೂ ಅಭ್ಯರ್ಥಿಗಳ ಆಯ್ಕೆ ಬಗ್ಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಮಧ್ಯೆ ತಿಕ್ಕಾಟ ಇರುವುದರಿಂದ ಅಂತಿಮ ನಿರ್ಣಯವನ್ನು ಪಕ್ಷದ ಹೈಕಮಾಂಡ್‌ಗೆ ಬಿಡಲಾಗಿದೆ. ಕಾಂಗ್ರೆಸ್‌ನಿಂದ ಆರ್. ಬಿ.ತಿಮ್ಮಾಪುರ, ವೀಣಾ ಅಚ್ಚಯ್ಯ, ಅಲ್ಲಂ ವೀರಭದ್ರಪ್ಪ, ಎಸ್.ಆರ್.ಪಾಟೀಲ, ಐವನ್ ಡಿಸೋಜ ಅವರ ಹೆಸರುಗಳು ಚಾಲ್ತಿಗೆ ಬಂದಿವೆ. ಜೆಡಿಎಸ್‌ನಲ್ಲಿ ಟಿ.ಎ.ಶರವಣ, ಕುಪೇಂದ್ರ ರೆಡ್ಡಿ ಸೇರಿ ಇನ್ನೂ ಕೆಲವರು ಪ್ರಯತ್ನ ನಡೆಸಿದ್ದಾರೆ.

ಕ್ಯಾಪಿಟೇಷನ್ ಶುಲ್ಕ: ವೆಬ್ ಪೋರ್ಟಲ್ ಸ್ಥಾಪಿಸಲು ಆದೇಶ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಖಾಸಗಿ ವೈದ್ಯಕೀಯ ಕಾಲೇಜುಗಳು ಕ್ಯಾಪಿಟೇಷನ್ ಶುಲ್ಕ ವಿಧಿಸುವ ಬಗ್ಗೆ ವಿದ್ಯಾರ್ಥಿಗಳಿಗೆ ಮತ್ತು ಇತರರಿಗೆ ಮಾಹಿತಿ ನೀಡಲು ತನ್ನದೇ ಅಧೀನದಲ್ಲಿ ವೆಬ್ ಪೋರ್ಟಲ್ ಸ್ಥಾಪಿಸಲು ಸುಪ್ರೀಂ ಕೋರ್ಟ್ ಆದೇಶಿಸಿದೆ.

ಕ್ಯಾಪಿಟೇಷನ್ ಶುಲ್ಕ ವಿಧಿಸುವುದನ್ನು ರಾಜ್ಯ ಸರ್ಕಾರಗಳು ನಿಷೇಧಿಸಿದ್ದರೂ ಮತ್ತು ಇದು ಅಪರಾಧವಾಗಿದ್ದರೂ ವೈದ್ಯಕೀಯ ಕಾಲೇಜು ಪ್ರವೇಶಕ್ಕಾಗಿ ಈ ಶುಲ್ಕವನ್ನು ವಿಧಿಸಲಾಗುತ್ತಿದೆ ಎಂಬುದು ಕಟು ವಾಸ್ತವ ಎಂದು ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಬಿ.ಆರ್. ಗವಾಯಿ ಅವರಿದ್ದ ನ್ಯಾಯಪೀಠವು ಅಭಿಪ್ರಾಯಪಟ್ಟಿದೆ.

ನ್ಯಾಷನಲ್ ಇನ್ಫಾರ್ಮೆಟಿಕ್ಸ್ ಸೆಂಟರ್ (ಎನ್‌ಐಸಿ) ಮೂಲಕ ವೆಬ್‌ಪೋರ್ಟಲ್ ಅನ್ನು ನಿರ್ವಹಣೆ ಮಾಡುವಂತೆಯೂ ನ್ಯಾಯಾಲಯ ಆದೇಶಿಸಿದೆ. ಕಾಲೇಜು ಪ್ರವೇಶದ ಸಮಯದಲ್ಲಿ ಅದರ ಬಗ್ಗೆ ವಿವರಗಳನ್ನು ಇಂಗ್ಲಿಷ್ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸುವಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ.

ಕ್ಯಾಪಿಟೇಷನ್ ಶುಲ್ಕ ತಡೆಗೆ ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ರಾಜ್ಯಗಳು ಈಗಾಗಲೇ ಕಾನೂನನ್ನು ತಂದಿವೆ.

ರಾಜ್ಯದಲ್ಲೂ ಪೆಟ್ರೋಲ್, ಡೀಸೆಲ್ ತೆರಿಗೆ ಇಳಿಸಲು ಒತ್ತಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ತೆರಿಗೆ ಕಡಿಮೆ ಮಾಡಬೇಕು ಎಂಬ ವ್ಯಾಪಕ ಆಗ್ರಹ ಕೇಳಿಬಂದ ಬೆನ್ನಲ್ಲೇ, ತೆರಿಗೆ ಇಳಿಕೆ ಮಾಡುವ ಬಗ್ಗೆ ಪರಿಶೀಲನೆ ನಡೆಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ.

ಕೆಲವು ರಾಜ್ಯಗಳಲ್ಲಿ ತೆರಿಗೆ ಕಡಿಮೆ ಮಾಡಿ ಸಾರ್ವಜನಿಕರ ಮೇಲಿನ ಹೊರೆ ಕಡಿಮೆ ಮಾಡಿರುವುದನ್ನು ಪ್ರಸ್ತಾಪಿಸಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮತ್ತು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಅವರು ಇಲ್ಲೂ ತೆರಿಗೆ ಕಡಿಮೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ದಾವೋಸ್‌ಗೆ ತೆರಳುವ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ, ‘ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಇಳಿಕೆ ಮಾಡಿದೆ. ರಾಜ್ಯದಲ್ಲಿಯೂ ತೆರಿಗೆ ಕಡಿತ ಮಾಡುವ ಬಗ್ಗೆ ಪರಿಶೀಲನೆ ನಡೆಸುತ್ತೇನೆ. ಈ ಹಿಂದೆಯೂ ಕೇಂದ್ರ ಸರ್ಕಾರ ತೈಲದ ಮೇಲೆ ಸುಂಕ ಕಡಿಮೆ ಮಾಡಿದಾಗ, ರಾಜ್ಯ ಸರ್ಕಾರವೂ ತೆರಿಗೆ ಇಳಿಸಿತ್ತು. ಹಣಕಾಸು ಇಲಾಖೆ ಜತೆ ಚರ್ಚೆ ನಡೆಸಿ ಕ್ರಮ ತೆಗೆದುಕೊಳ್ಳುತ್ತೇನೆ’ ಎಂದರು.

ಮೀನಮೇಷ ಸರಿಯಲ್ಲ: ‘ಜನಾಕ್ರೋಶಕ್ಕೆ ಕೊನೆಗೂ ಮಣಿದಿರುವ ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕ ಇಳಿಕೆ ಮಾಡಿದೆ. ಹೀಗಾಗಿ ತೈಲ ಬೆಲೆಗಳು ದೇಶದಾದ್ಯಂತ ಕಡಿಮೆಯಾಗುತ್ತಿವೆ. ಆದರೆ, ಕರ್ನಾಟಕದಲ್ಲಿ ಬಿಜೆಪಿಯದ್ದೇ ಸರ್ಕಾರ ಸುಂಕ ಕಡಿತಕ್ಕೆ ಮೀನಮೇಷ ಎಣಿಸುತ್ತಿರುವುದು ಸರಿಯಲ್ಲ’ ಎಂದು ಎಚ್.ಡಿ.ಕುಮಾರಸ್ವಾಮಿ ಟ್ವೀಟ್ ಮಾಡಿದ್ದಾರೆ.

‘ನೆರೆಯ ಕೇರಳದಲ್ಲಿ ಈಗಾಗಲೇ ಸುಂಕ ಕಡಿತ ಮಾಡಲಾಗಿದೆ. ಆದರೆ, ರಾಜ್ಯದ ಬಿಜೆಪಿ ಸರ್ಕಾರವು ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಎನ್ನುವ ವ್ಯಾಪಾರಿ ಬುದ್ಧಿಯ ಜಾಣ ನಡೆ ಅನುಸರಿಸುತ್ತಿದೆ. ತೆರಿಗೆ ಕಡಿತದ ಬಗ್ಗೆ ಪರಿಶೀಲನೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿರುವುದು ಒಪ್ಪುವ ಮಾತಲ್ಲ’ ಎಂದು ಅವರು ಹೇಳಿದರು.

ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಹೇಳಿಕೆ ನೀಡಿ, ‘ಪೆಟ್ರೋಲ್ ದರವನ್ನು ₹115 ಕ್ಕೆ ಏರಿಸಿ, ಬಳಿಕ ₹9 ಇಳಿಸಿದರೆ ಜನರ ಸಂಕಷ್ಟ ಕಡಿಮೆ ಆಗುವುದಿಲ್ಲ. ಈ ಸಂದರ್ಭದಲ್ಲಿ ಏನೋ ಮಹಾ ಜವಾಬ್ದಾರಿಯಿಂದ ಆಡಳಿತ ನಡೆಸುತ್ತಿರುವಂತೆ ಪ್ರಧಾನಿಯವರು ಮಾತನಾಡಿರುವುದು ಹಾಸ್ಯಾಸ್ಪದ ಸಂಗತಿ’ ಎಂದು ತಿಳಿಸಿದ್ದಾರೆ.

‘ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ಬೆಲೆಯು ಕಡಿಮೆಯೇ ಇರುವಾಗ ತೈಲ ಬೆಲೆಯನ್ನು ವಿಪರೀತವಾಗಿ ಹೆಚ್ಚು ಮಾಡಿರುವ ಬಿಜೆಪಿ ಸರ್ಕಾರ ಲೂಟಿಯಲ್ಲಿ ಮುಳುಗಿದೆ’ ಎಂದು ಹೇಳಿದ್ದಾರೆ.

ತೆರಿಗೆ ಪ್ರಮಾಣ ತಗ್ಗಿಸಲು ಬಿಎಸ್‌ವೈ ಸಲಹೆ

ರಾಜ್ಯ ಸರ್ಕಾರವೂ ಪೆಟ್ರೋಲ್ ಮತ್ತು ಡೀಸೆಲ್ ಸುಂಕ ಕಡಿತ ಮಾಡಿದರೆ ಜನತೆಗೆ ಹೆಚ್ಚು ಸಹಾಯಕವಾಗಲಿದೆ. ಈ ಬಗ್ಗೆ ಆಲೋಚನೆ ಮಾಡಬೇಕು ಎಂದು ಶಾಸಕ ಬಿ.ಎಸ್.ಯಡಿಯೂರಪ್ಪ ಸಲಹೆ ನೀಡಿದ್ದಾರೆ. ಬೆಲೆ ಏರಿಕೆಯ ಸಂಕಷ್ಟದಲ್ಲಿ ದೇಶದ ಜನತೆ ಇದ್ದಾಗ ಪ್ರಧಾನಿಯವರು ದೊಡ್ಡ ಮನಸ್ಸು ಮಾಡಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸುಂಕವನ್ನು ಕಡಿತ ಮಾಡಿರುವುದು ಜನಪರ ಕ್ರಮ. ರಾಜ್ಯವೂ ಇದೇ ಮಾದರಿ ಅನುಸರಿಸಬೇಕು ಎಂದು ಅವರು ಹೇಳಿದ್ದಾರೆ.

ಜಪಾನ್‌ಗೆ ತೆರಳಿದ ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ಪ್ರಭಾವಿ ಗುಂಪುಗಳ ಸದಸ್ಯ ರಾಷ್ಟ್ರಗಳ ನಡುವಣ ಸಹಕಾರವನ್ನು ಮತ್ತಷ್ಟು ಹೆಚ್ಚಿಸುವ ಮತ್ತು ಇಂಡೋ–ಪೆಸಿಫಿಕ್ ಪ್ರದೇಶದ ಬೆಳವಣಿಗೆಗಳ ಕುರಿತು ಚರ್ಚಿಸುವ ಉದ್ದೇಶದಿಂದ ಕ್ವಾಡ್ ನಾಯಕರ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಸಂಜೆ ಜಪಾನ್‌ಗೆ ತೆರಳಿದರು.

ಇನ್ನಷ್ಟು ಸುದ್ದಿಗಳು 11

ಮಳೆ ಹಾನಿ ನಿರ್ವಹಣೆ ವಲಯವಾರು ಕಾರ್ಯಪಡೆ ರಚನೆ

ಬೆಂಗಳೂರು: ನಗರದಲ್ಲಿ ಮಳೆಯಿಂದ ಆಗುತ್ತಿರುವ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ವಿವಿಧ ವಲಯಗಳಿಗೆ ನಗರದ ಸಚಿವರ ನೇತೃತ್ವದಲ್ಲಿ ಕಾರ್ಯಪಡೆಗಳನ್ನು ರಚಿಸಲಾಗಿದೆ.

ಈ ಕಾರ್ಯಪಡೆಗಳಲ್ಲಿ ಸಂಬಂಧಪಟ್ಟ ವಲಯಗಳ ಶಾಸಕರು, ಸಂಸದರು ಮತ್ತು ಬಿಬಿಎಂಪಿ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ವಲಯಗಳ ಜಂಟಿ ಆಯುಕ್ತರು ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಾರೆ. ಇತ್ತೀಚೆಗೆ ಬಿದ್ದ ಮಳೆಯಿಂದ ನಗರದಲ್ಲಿ ಸಾರ್ವಜನಿಕರಿಗೆ ತೀವ್ರ ಸಮಸ್ಯೆ ಆಗಿದ್ದರಿಂದ ಮುಖ್ಯಮಂತ್ರಿ ಆಕ್ರೋಶ ಎದುರಿಸಬೇಕಾಯಿತು.

ವಿವರ 2

ರಸಗೊಬ್ಬರ: ಕೇಂದ್ರ ಸರ್ಕಾರದಿಂದ ಹೆಚ್ಚುವರಿಯಾಗಿ ₹ 1.10 ಲಕ್ಷ ಕೋಟಿ ಸಬ್ಸಿಡಿ

ನವದೆಹಲಿ (ಪಿಟಿಐ): ಜಾಗತಿಕ ಮಾರುಕಟ್ಟೆಯಲ್ಲಿ ರಸಗೊಬ್ಬರ ದರ ಭಾರಿ ಏರಿಕೆ ಕಂಡಿರುವ ಬೆನ್ನಲ್ಲೇ ಕೇಂದ್ರ ಸರ್ಕಾರವು ಹೆಚ್ಚುವರಿಯಾಗಿ ₹ 1.10 ಲಕ್ಷ ಕೋಟಿ ಮೊತ್ತವನ್ನು ರಸಗೊಬ್ಬರ ಸಬ್ಸಿಡಿಗೆ ನೀಡುವುದಾಗಿ ಹೇಳಿದೆ.

ಈ ನಿರ್ಧಾರದಿಂದಾಗಿ 2022–23ನೇ ಹಣಕಾಸು ವರ್ಷಕ್ಕೆ ರಸಗೊಬ್ಬರಕ್ಕೆ ನೀಡುವ ಒಟ್ಟಾರೆ ಸಬ್ಸಿಡಿಯು ₹ 2.15 ಲಕ್ಷ ಕೋಟಿಗೆ ತಲುಪುವ ಅಂದಾಜು ಮಾಡಲಾಗಿದೆ.

ಜಾಗತಿಕ ಮಟ್ಟದಲ್ಲಿ ಆಗಿರುವ ಬೆಲೆ ಏರಿಕೆಯ ದುಷ್ಪರಿಣಾಮದಿಂದ ರೈತರನ್ನು ರಸಗೊಬ್ಬರ ಸಬ್ಸಿಡಿ ದರ ಏರಿಕೆಯ ಮೂಲಕ ರಕ್ಷಿಸಲಾಗಿದೆ. ಬಜೆಟ್‌ನಲ್ಲಿ ₹ 1.05 ಲಕ್ಷ ಕೋಟಿ ಸಬ್ಸಿಡಿ ನಿಗದಿಪಡಿಸಿದ್ದು, ಅದಲ್ಲದೆ ಹೆಚ್ಚುವರಿಯಾಗಿ ₹ 1.10 ಲಕ್ಷ ಕೋಟಿಯನ್ನು ನೀಡಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

2021–22ನೇ ಹಣಕಾಸು ವರ್ಷದಲ್ಲಿ ರಸಗೊಬ್ಬರ ಸಬ್ಸಿಡಿಗೆ ₹ 1.62 ಲಕ್ಷ ಕೋಟಿ ಮೊತ್ತ ನೀಡಲಾಗಿತ್ತು.

ಉಕ್ಕಿನ ಕೆಲವು ಕಚ್ಚಾ ಸಾಮಗ್ರಿಗಳ ಮೇಲಿನ ಆಮದು ಸುಂಕವನ್ನು ಕೈಬಿಡಲಾಗಿದೆ. ಇದರಿಂದಾಗಿ ಉಕ್ಕು ಉತ್ಪನ್ನಗಳ ದರ ಕಡಿಮೆ ಆಗಲಿದೆ. ಇದರ ಜೊತೆಗೆ ಕಬ್ಬಿಣದ ಅದಿರಿನ ಲಭ್ಯತೆ ಸುಧಾರಿಸುವ ನಿಟ್ಟಿನಲ್ಲಿ ರಫ್ತು ಸುಂಕವನ್ನು ಶೇ 30ರಿಂದ ಶೇ 50ಕ್ಕೆ ಹೆಚ್ಚಿಸಲಾಗಿದೆ. ಭಾನುವಾರದಿಂದ ಈ ಬದಲಾವಣೆಗಳು ಜಾರಿಗೆ ಬಂದಿವೆ.

ಪ್ಲಾಸ್ಟಿಕ್ ಉದ್ಯಮದಲ್ಲಿ ಬಳಸುವ ಕಚ್ಚಾ ಸಾಮಗ್ರಿಗಳ ಮೇಲಿನ ಆಮದು ಸುಂಕವನ್ನು ಕಡಿಮೆ ಮಾಡಲಾಗಿದೆ. ಸಿಮೆಂಟ್ ಲಭ್ಯತೆಯನ್ನು ಸುಧಾರಿಸಲು ಮತ್ತು ಸಿಮೆಂಟ್ ಬೆಲೆ ಕಡಿಮೆ ಮಾಡಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ನಿರ್ಮಲಾ ತಿಳಿಸಿದ್ದಾರೆ.

ಟ್ವಿಟರ್ ಅಭಿಯಾನಕ್ಕೆ ವ್ಯಾಪಕ ಪ್ರತಿಕ್ರಿಯೆ: ಸಚಿವ ನಾಗೇಶ್ ರಾಜೀನಾಮೆಗೆ ಒತ್ತಾಯ

‘ಬ್ರಾಹ್ಮಣ್ಯ’ ಪಠ್ಯ ತಿರಸ್ಕರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್‌ಎಸ್‌ಎಸ್ ಪ್ರೇರಿತ ಬ್ರಾಹ್ಮಣ್ಯ ಪಠ್ಯ ತಿರಸ್ಕರಿಸಬೇಕು ಮತ್ತು ಶಿಕ್ಷಣ ಸಚಿವ ನಾಗೇಶ್ ರಾಜೀನಾಮೆ ನೀಡಬೇಕು’ ಎಂದು ಒತ್ತಾಯಿಸಿ ಭಾನುವಾರ ಸಂಜೆ ನಡೆದ ಟ್ವಿಟರ್ ಅಭಿಯಾನಕ್ಕೆ ವ್ಯಾಪಕ ಪ್ರತಿಕ್ರಿಯೆ ವ್ಯಕ್ತವಾಗಿದೆ.

#rejectbrahmintextbooks ಮತ್ತು #rejectrsstextbooks ಹೆಸರಿನಲ್ಲಿ ನಡೆದ ಅಭಿಯಾನ ರಾಷ್ಟ್ರದ ಗಮನ ಸೆಳೆಯಿತು. ಅಭಿಯಾನ ಉತ್ತುಂಗದಲ್ಲಿದ್ದಾಗ, ಈ ಎರಡೂ ಹ್ಯಾಷ್ ಟ್ಯಾಗ್‌ಗಳು ಭಾರತ ಮಟ್ಟದಲ್ಲಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿದ್ದವು. ಬೆಂಗಳೂರು ಟ್ರೆಂಡಿಂಗ್‌ನಲ್ಲಿ ಈ ಹ್ಯಾಷ್ ಟ್ಯಾಗ್ ಮೊದಲ ಸ್ಥಾನ ಕಾಯ್ದುಕೊಂಡಿತ್ತು.

‘ಪಠ್ಯಪುಸ್ತಕ ಪರಿಷ್ಕರಣೆಗೆ ಅನರ್ಹ ಸಮಿತಿ ರಚಿಸಿ ಮಕ್ಕಳ ಭವಿಷ್ಯ ಹಾಳು ಮಾಡಲಾಗುತ್ತಿದೆ. ಪಠ್ಯಪುಸ್ತಕಗಳಲ್ಲಿ ಒಂದು ಜಾತಿಯ ಲೇಖಕರ ವಿಜೃಂಭಣೆ ಮಾಡಲಾಗಿದೆ ಮತ್ತು ಕೇಸರೀಕರಣಗೊಳಿಸಲಾಗಿದೆ. ಬ್ರಹ್ಮಶ್ರೀ ನಾರಾಯಣ ಗುರು, ವಿಚಾರವಾದಿ ಪೆರಿಯಾರ್ ಸೇರಿದಂತೆ ಭಾರತದ ಸಮಾಜ ಸುಧಾರಕರ ಕುರಿತಾದ ವಿವರಣಾತ್ಮಕ ಪಾಠಗಳನ್ನು ತೆಗೆದುಹಾಕಲಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಕರ್ನಾಟಕಕ್ಕೆ ಆಧುನಿಕ ಶಿಕ್ಷಣ ತಂದುಕೊಟ್ಟವರು ಕ್ರಿಶ್ಚಿಯನ್ನರು. ಕರ್ನಾಟಕವನ್ನು ಜಾಗತಿಕ ಭೂಪಟಕ್ಕೆ ಸೇರಿಸಿದವರು ಮುಸ್ಲಿಮರು. ಕರ್ನಾಟಕದ ಮೂಲನಿವಾಸಿಗಳು ದಲಿತರು. ಪಠ್ಯಪುಸ್ತಕ ರಚನೆ ಮಾಡುವಾಗ ಸಮಿತಿಯಲ್ಲಿ ಇವರು ಇರಬೇಕಾದ್ದು ಅಗತ್ಯ. ಮಕ್ಕಳಿಗೆ ಜನಾಂಗ ದ್ವೇಷ ಕಲಿಸಬಾರದು. ನಮ್ಮ ಮಕ್ಕಳು ಹೆಡಗೇವಾರರನ್ನು ಓದುವ ಮೊದಲು ಬಸವಣ್ಣ ಮತ್ತು ನಾರಾಯಣಗುರುಗಳನ್ನು ಚೆನ್ನಾಗಿ ಓದಿ ಅರ್ಥ ಮಾಡಿಕೊಳ್ಳಬೇಕು ಅಷ್ಟೆ. ನೆಲದಲ್ಲಿ ಆಳವಾಗಿ ಬೇರು ಬಿಡದೆ ಆಕಾಶದಲ್ಲಿ ಹೂ ಚೆಲ್ಲಬಹುದೇ?’ ಎಂದು ಲೇಖಕ ಪುರುಷೋತ್ತಮ ಬಿಳಿಮಲೆ ಟ್ವೀಟ್ ಮಾಡಿದ್ದಾರೆ.

‘ಹೆಡಗೇವಾರ್ ತಮ್ಮ ಬರಹಗಳಲ್ಲಿ ಧ್ವಜ ಎಂದರೆ ಭಗವಾಧ್ವಜ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ ಹೆಡಗೇವಾರ್ ಪಾಠದಿಂದ ಮಕ್ಕಳು ಕಲಿಯುವಂಥದ್ದೇನಿದೆ? ಶಿಕ್ಷಣವನ್ನು ಬ್ರಾಹ್ಮಣೀಕರಣಗೊಳಿಸುತ್ತಿದ್ದಾರೆ. ಬ್ರಾಹ್ಮಣ್ಯದ ಶಿಕ್ಷಣವನ್ನು ಬಹಿಷ್ಕರಿಸಿರಿ’ ಎಂದು ಅಫ್ತಾಬ್ ಎನ್ನುವವರು ಟ್ವೀಟ್ ಮಾಡಿದ್ದಾರೆ.

‘ಯುವ ಸಮುದಾಯದಲ್ಲಿ ಕೋಮುವಾದ ವಿಷಬೀಜ ಬಿತ್ತುವುದನ್ನು ನಿಲ್ಲಿಸಿ. ಸಂಘಿಗಳ ದ್ವೇಷದ ಸಿದ್ಧಾಂತವನ್ನು ಹೇರಬೇಡಿ. ನಿಮ್ಮ ಶಾಖೆಗಳಲ್ಲಿ ನಿಮ್ಮ ಸಿದ್ಧಾಂತವನ್ನು ಇರಿಸಿಕೊಳ್ಳಿ. ಶಾಲೆಗೆ ವಿಸ್ತರಿಸಬೇಡಿ’ ಎಂದು ಶ್ರೀನಿವಾಸ್ ಕಾರ್ಕಳ ಪ್ರತಿಕ್ರಿಯಿಸಿದ್ದಾರೆ.

‘ಪ್ರಸ್ತುತ ಕರ್ನಾಟಕ ಶಿಕ್ಷಣ ಮಂಡಳಿಯ ಪಠ್ಯಪುಸ್ತಕವು ಬ್ರಾಹ್ಮಣರಿಂದ, ಬ್ರಾಹ್ಮಣರಿಗಾಗಿ, ಬ್ರಾಹ್ಮಣರಿಗೋಸ್ಕರ ರಚಿಸಲಾಗಿದೆ’ ಎಂದು ಪ್ರತಿಕ್ರಿಯಿಸಿರುವ ಮೊಹಮ್ಮದ್ ಇರ್ಷಾದ್, ‘ಪರಿಷ್ಕರಣಾ ಸಮಿತಿಯ ಏಳು ಮಂದಿಯಲ್ಲಿ ಆರು ಮಂದಿ ಬ್ರಾಹ್ಮಣರು ಇದ್ದಾರೆ. ಪಠ್ಯದಲ್ಲಿನ 10 ಅಧ್ಯಾಯಗಳಲ್ಲಿನ 9 ಅಧ್ಯಾಯಗಳು ಬ್ರಾಹ್ಮಣ ಸಮುದಾಯದ ಲೇಖಕರಿಗೆ ಸೇರಿವೆ. ಎಲ್. ಬಸವರಾಜು, ಪಿ. ಲಂಕೇಶ್, ಅರವಿಂದ ಮಾಲಗತ್ತಿ, ಸಾರಾ ಅಬೂಬಕ್ಕರ್, ಕೆ. ನೀಲಾ ಮತ್ತು ಬಿ.ಟಿ. ಲಲಿತಾ ನಾಯಕ್ ಅವರನ್ನು ಬಿಜೆಪಿ ಸರ್ಕಾರ ನಿರ್ಲಕ್ಷಿಸಿದೆ. ಇವರೆಲ್ಲರೂ ಬ್ರಾಹ್ಮಣೇತರರು ಮತ್ತು ಪರಿಶಿಷ್ಟರು ಹಾಗೂ ಹಿಂದುಳಿದ ಸಮುದಾಯಕ್ಕೆ ಸೇರಿದವರು’ ಎನ್ನುವ ವಿವರ ಇರುವ ಚಿತ್ರವನ್ನು ಲಗತ್ತಿಸಿದ್ದಾರೆ. ಈ ಚಿತ್ರವನ್ನು ಹಲವರು ಟ್ವೀಟ್ ಮಾಡಿದ್ದಾರೆ.

ಕೆಲವರ ಆಕ್ಷೇಪ: ಕೆಲವರು ಅಭಿಯಾನಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮೊಘಲರ ಆಡಳಿತವನ್ನು ವೈಭವೀಕರಣ ಮಾಡಲಾಗಿದೆ ಎಂದು ಕಿಡಿಕಾರಿದ್ದಾರೆ.

‘ಕಾಂಗ್ರೆಸ್ ಮದರಸಾಗಳನ್ನು ಸಬಲೀಕರಣಕ್ಕೆ ಆದ್ಯತೆ ನೀಡುವ ಮೂಲಕ ಹಿಂದೂ ಗುರುಕುಲಗಳನ್ನು ನಾಶಗೊಳಿಸಲಾಯಿತು ಮತ್ತು ಭಾರತೀಯ ಇತಿಹಾಸವನ್ನು ತಿರುಚಲಾಯಿತು’ ಎಂದು ‘ಲಾಸ್ಟ್ ಪೇಜ್’ ಹೆಸರಿನಲ್ಲಿ ಹಲವು ಟ್ವೀಟ್‌ಗಳನ್ನು ಮಾಡಲಾಗಿದೆ.

> ವಿದ್ಯಾರ್ಥಿಗಳು ಕಲಿಯುವ ಇತಿಹಾಸದ ಪಠ್ಯಪುಸ್ತಕಗಳು ನಾಡಿನ ಭವಿಷ್ಯತ್ತಿಗೆ ಮಾರಕವಾಗಬಾರದು, ಪೂರಕವಾಗಿರಬೇಕು. ಹಿಂಸೆ, ದ್ವೇಷ, ಅಸೂಯೆಗಳನ್ನು ಪುಷ್ಟೀಕರಿಸುವ ವೈದೀಕರಣವನ್ನು ಖಂಡಿಸಬೇಕಿದೆ. ಕನ್ನಡದ ಅಸ್ಮಿತೆಗೆ ಧಕ್ಕೆ ತರುವ, ಸ್ವಾತಂತ್ರ್ಯ ಹೋರಾಟಗಾರರಿಗೆ ಅವಮಾನ ಮಾಡಿರುವ ಪಠ್ಯಪುಸ್ತಕ ಪರಿಷ್ಕರಣೆಗೆ ಸರ್ಕಾರ ತಡೆ ನೀಡಬೇಕು
>
> **ಬಿ.ಕೆ. ಹರಿಪ್ರಸಾದ್,** ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

> ಆರ್‌ಎಸ್‌ಎಸ್ ಮತ್ತು ನಕಲಿ ದೇಶಪ್ರೇಮಿಗಳನ್ನು ಪಠ್ಯದೊಳಗೆ ಸೇರಿಸಿ ಅವರ ವಿಷಕಾರಿ ನೀತಿಗಳನ್ನು ಮಕ್ಕಳ ತಲೆಗೆ ತುಂಬಲು ಹೊರಟಿರುವ ಸರ್ಕಾರಕ್ಕೆ ಯಾವುದರ ಬಗ್ಗೆಯೂ ಸ್ಪಷ್ಟತೆ ತಿಳಿವಳಿಕೆ ಇಲ್ಲ. ಇಂತಹ ಅಪದ್ಧಗಳಿಗೆ ಕಾರಣವಾಗಿರುವ ಸಚಿವ ಬಿ.ಸಿ. ನಾಗೇಶ್ ಅಸಮರ್ಥರಾಗಿದ್ದು, ಸಮಾಜ ವಿರೋಧಿ ಶಕ್ತಿಗಳನ್ನು ಉತ್ತೇಜಿಸುತ್ತಿದ್ದಾರೆ **ಎಚ್.ಸಿ. ಮಹದೇವಪ್ಪ,** ಕಾಂಗ್ರೆಸ್ ಮುಖಂಡ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸುಪ್ರೀಂ ಕೋರ್ಟ್ ಆದೇಶ ಉಲ್ಲೇಖ • ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನಗರಾಭಿವೃದ್ಧಿ ಇಲಾಖೆ ಸೂಚನೆ

ವಾರ್ಡ್ ಮರು ವಿಂಗಡಣೆ: ತಕ್ಷಣ ವರದಿ ಸಲ್ಲಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಾರ್ಡ್‌ಗಳ ಪುನರ್ ವಿಂಗಡಣೆ ಸಮಿತಿಯ ವರದಿಯನ್ನು ತಕ್ಷಣವೇ ಕಳುಹಿಸುವಂತೆ ನಗರಾಭಿವೃದ್ಧಿ ಇಲಾಖೆಯು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚಿಸಿದೆ.

ಸುಪ್ರೀಂ ಕೋರ್ಟ್‌ನ ಆದೇಶದಂತೆ ಅಗತ್ಯ ಕ್ರಮಕೈಗೊಳ್ಳಲು ಈ ವರದಿ ಸಲ್ಲಿಸಬೇಕು ಎಂದು ಪುನರ್‌ವಿಂಗಡಣಾ ಸಮಿತಿ ಅಧ್ಯಕ್ಷರಾಗಿರುವ ಮುಖ್ಯ ಆಯುಕ್ತರಿಗೆ ತಿಳಿಸಿದೆ. ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ರಾಕೇಶ್ ಸಿಂಗ್ ಈ ಬಗ್ಗೆ ಅವರು ಶನಿವಾರ ಪತ್ರ ಬರೆದಿದ್ದಾರೆ.

2020ರ ಜನವರಿಯಲ್ಲಿ ಜಾರಿಗೊಳಿಸಲಾದ ಬಿಬಿಎಂಪಿ ಹೊಸ ಕಾಯ್ದೆ ಅನ್ವಯ ಈಗಿರುವ 198 ವಾರ್ಡ್‌ಗಳನ್ನು 243ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿತ್ತು. ಈ ಕಾರ್ಯಕ್ಕೆ ರಚಿಸಿದ್ದ ಪುನರ್ ವಿಂಗಡಣಾ ಸಮಿತಿ ಒಂದೂವರೆ ವರ್ಷದಲ್ಲಿ ಮೂರು ಬಾರಿ ವಿಸ್ತರಣೆ ಕೋರಿತ್ತು.



'ವಾರ್ಡ್‌ಗಳ ಪುನರ್ ವಿಂಗಡಣೆಗಾಗಿ ರಚಿಸಿದ್ದ ಸಮಿತಿಗೆ ಆರು ತಿಂಗಳ ಅವಧಿಯನ್ನು ನಿಗದಿಪಡಿಸಲಾಗಿತ್ತು. ಈ ಸಮಿತಿಯ ಅವಧಿಯನ್ನು 2021ರ ಜುಲೈ 28ರಿಂದ ಜಾರಿಗೆ ಬರುವಂತೆ ಆರು ತಿಂಗಳ ಅವಧಿಗೆ ಮುಂದುವರಿಸಿ ಆದೇಶಿಸಲಾಗಿತ್ತು. ಈ ಅವಧಿಯು 2022ರ ಜನವರಿ 28ಕ್ಕೆ ಮುಕ್ತಾಯವಾಗಿದೆ. ಆದರೆ, ಸಮಿತಿಯು ಇದುವರೆಗೂ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿಲ್ಲ' ಎಂದು ಉಲ್ಲೇಖಿಸಲಾಗಿದೆ.

ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ದಾಖಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಬಿಬಿಎಂಪಿ ವಾರ್ಡ್ ವಿಂಗಡಣೆ, ಮೀಸಲಾತಿ ಪೂರ್ಣಗೊಳಿಸಲು ಸರ್ಕಾರಕ್ಕೆ ಎಂಟು ವಾರ ಸಮಯ ನೀಡಿದೆ ಎಂದು ಪತ್ರದಲ್ಲಿ ನೆನಪಿಸಲಾಗಿದೆ.

ಪುನರ್ ವಿಂಗಡಣೆ ಮತ್ತು ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಚುನಾವಣಾ ಆಯೋಗದ ಬರೆದಿದ್ದ ಪತ್ರವನ್ನು ಸಹ ಉಲ್ಲೇಖಿಸಲಾಗಿದೆ. ಇದರಿಂದ, ಆಯೋಗವು ಚುನಾವಣೆ ನಡೆಸಲು ಸಿದ್ಧತೆ ಕೈಗೊಳ್ಳಲು ಅನುಕೂಲವಾಗಲಿದೆ ಎಂದು ಹೇಳಿತ್ತು.

ಸರ್ಕಾರವು ಪುನರ್ ವಿಂಗಡಣೆ ವರದಿಯನ್ನು ಸಾರ್ವಜನಿಕರ ಅವಗಾಹನೆಗೆ ತರುವ ನಿರೀಕ್ಷೆ ಇದೆ. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು, ಕರಡು ಪ್ರತಿ ಸಿದ್ಧವಾಗಿದೆ ಎಂದು ಕಳೆದ ವಾರ ತಿಳಿಸಿದ್ದರು.

ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿನ ಹೊರವಲಯದ ವಾರ್ಡ್‌ಗಳ ಸಂಖ್ಯೆ ಹೆಚ್ಚುವ ನಿರೀಕ್ಷೆ ಇದೆ. ಮತದಾರರ ಸಂಖ್ಯೆ ಕಡಿಮೆ ಇರುವ ನಗರದ ಕೇಂದ್ರ ಭಾಗದ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ವಾರ್ಡ್‌ಗಳ ಸಂಖ್ಯೆ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

'ಹಿಂದುಳಿದ ವರ್ಗ: ಶೇ 32 ರಷ್ಟು ಮೀಸಲಾತಿ ನೀಡಿ'

ಬೆಂಗಳೂರು: 'ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಶೇ 18 ರಷ್ಟು ಮೀಸಲಾತಿ ನೀಡಿ, ಉಳಿದ ಶೇ 32ರಷ್ಟು ಮೀಸಲಾತಿಯನ್ನು ಹಿಂದುಳಿದ ವರ್ಗಗಳಿಗೆ ನೀಡಬೇಕು' ಎಂದು ವಿಧಾನಪರಿಷತ್ ಸದಸ್ಯ ಪಿ.ಆರ್.ರಮೇಶ್ ಕೋರಿದ್ದಾರೆ.

ಈ ಬಗ್ಗೆ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ. '8 ವಾರದೊಳಗೆ ವಾರ್ಡ್‌ಗಳ ಪುನರ್ ವಿಂಗಡಣೆ, ಮೀಸಲಾತಿ ನಿಗದಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ರಾಜ್ಯದಲ್ಲಿ ಜಾರಿಯಲ್ಲಿರುವ ರಾಜಕೀಯ ಮೀಸಲಾತಿ ಅನ್ವಯ, ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿಗೆ ಶೇ 15, ಪಂಗಡಗಳಿಗೆ ಶೇ 3ರಷ್ಟು ಮೀಸಲಾತಿ ನೀಡಬೇಕು. ಈಚೆಗೆ ಸಚಿವಾಲಯದಿಂದ ಶಾಸಕರಿಗೆ ಒದಗಿಸಿರುವ ಮಾಹಿತಿ ಪ್ರಕಾರ ರಾಜ್ಯದ ಜನಸಂಖ್ಯೆಯಲ್ಲಿ ಶೇ 53 ರಷ್ಟು ಜನರು ಹಿಂದುಳಿದ ವರ್ಗದವರಾಗಿದ್ದಾರೆ' ಎಂದು ತಿಳಿಸಿದ್ದಾರೆ.

'ಬಿಬಿಎಂಪಿ ಆಡಳಿತ ಪ್ರದೇಶದಲ್ಲೂ ಶೇ 50ಕ್ಕಿಂತ ಅಧಿಕ ಜನರು ಹಿಂದುಳಿದವರೆಂದು ಅಂದಾಜಿಸಲಾಗಿದೆ. ಒಟ್ಟು ಮೀಸಲಾತಿ ಶೇ 50 ರಷ್ಟು ಮೀರಲು ಅವಕಾಶವಿಲ್ಲ. ಹೀಗಾಗಿ, ಪ.ಜಾತಿ ಮತ್ತು ಪ.ಪಂಗಡಗಳಿಗೆ ಶೇ 18 ರಷ್ಟು ಮೀಸಲಾತಿ ನೀಡಿ, ಉಳಿದ ಮೀಸಲಾತಿಯನ್ನು ಹಿಂದುಳಿದ ವರ್ಗಗಳಿಗೆ ನೀಡಬಹುದಾಗಿದೆ. ಮಧ್ಯಪ್ರದೇಶಕ್ಕೆ ಸುಪ್ರೀಂ ಕೋರ್ಟ್ ಇದೇ ರೀತಿ ನಿರ್ದೇಶನ ನೀಡಿದೆ' ಎಂದು ಉಲ್ಲೇಖಿಸಿದ್ದಾರೆ.



ಕ್ಷೇಮ ಆರೋಗ್ಯಧಾಮದ ವಸಂತ್ ಗೌಡ ಹಾಗೂ ಅನಸೂಯ ವಸಂತ್ ಗೌಡ ಅವರು ರಾಕ್‌ಲೈನ್ ವೆಂಕಟೇಶ್ ಅವರಿಗೆ ಸ್ಮರಣಿಕೆ ನೀಡಿ ಗೌರವಿಸಿದರು

ಕ್ಷೇಮ ಆರೋಗ್ಯಧಾಮಕ್ಕೆ ಚಾಲನೆ

ಬೆಂಗಳೂರು: ಒಂದೇ ಸೂರಿನಡಿ ಹೋಮಿಯೋಪಥಿ, ನ್ಯಾಚುರೋಪಥಿ ಹಾಗೂ ಆಯುರ್ವೇದ ಚಿಕಿತ್ಸೆ ಒದಗಿಸಲು ರಾಜಾಜಿನಗರದ 1ನೇ ಹಂತದಲ್ಲಿ ಆರಂಭಿಸಿರುವ ಕ್ಷೇಮ ಆರೋಗ್ಯಧಾಮಕ್ಕೆ ಅಬಕಾರಿ ಸಚಿವ ಕೆ.ಗೋಪಾಲಯ್ಯ ಭಾನುವಾರ ಚಾಲನೆ ನೀಡಿದರು.

'ಪ್ರತಿಯೊಬ್ಬರು ಆರೋಗ್ಯಯುತ ಜೀವನ ನಡೆಸಲು ಒತ್ತು ನೀಡಬೇಕು. ಗುಣಮಟ್ಟದ ಚಿಕಿತ್ಸೆ ಒದಗಿಸಲು ಆರೋಗ್ಯಧಾಮ ಆರಂಭಿಸಲಾಗಿದೆ. ಎಲ್ಲಾ ವಯೋಮಾನದ ರೋಗಿಗಳಿಗೂ ಇದರಿಂದ ಅನುಕೂಲವಾಗಲಿದೆ' ಎಂದು ಗೋಪಾಲಯ್ಯ ತಿಳಿಸಿದರು.

ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, 'ವಸಂತ್ ಗೌಡ ಅವರು ಜನರಿಗೆ ಕೈಗೆಟಕುವ ದರದಲ್ಲಿ ಚಿಕಿತ್ಸೆ ಒದಗಿಸುವ ಗುರಿಯೊಂದಿಗೆ ಆರೋಗ್ಯಧಾಮ ಆರಂಭಿಸಿದ್ದಾರೆ' ಎಂದರು.

ಮಳೆ ಹಾನಿ ನಿರ್ವಹಣೆಗೆ ಸಚಿವರ ಕಾರ್ಯಪಡೆ

ಬೆಂಗಳೂರು: ನಗರದಲ್ಲಿ ಮಳೆಯಿಂದ ಆಗುತ್ತಿರುವ ಸಮಸ್ಯೆಗಳನ್ನು ನಿಭಾಯಿಸಲು ವಿವಿಧ ವಲಯಗಳಿಗೆ ಸಚಿವರ ನೇತೃತ್ವದಲ್ಲಿ ಕಾರ್ಯಪಡೆಗಳನ್ನು ರಚಿಸಲಾಗಿದೆ. ಅದರ ವಿವರ ಹೀಗಿದೆ.

ಯಾವ ವಲಯಕ್ಕೆ ಯಾರು?

- ಆರ್.ಅಶೋಕ ▸ ದಕ್ಷಿಣ ವಲಯ
- ಡಾ.ಸಿ.ಎನ್.ಅಶ್ವತ್ಥನಾರಾಯಣ ▸ ಪೂರ್ವ ವಲಯ
- ವಿ.ಸೋಮಣ್ಣ ▸ ಪಶ್ಚಿಮವಲಯ
- ಎಸ್.ಟಿ.ಸೋಮಶೇಖರ್ ▸ ಆರ್.ಆರ್.ನಗರ ವಲಯ
- ಬೈರತಿ ಬಸವರಾಜ್ ▸ ಮಹದೇವಪುರ ವಲಯ
- ಗೋಪಾಲಯ್ಯ ▸ ಬೊಮ್ಮನಹಳ್ಳಿ ವಲಯ
- ಮುನಿರತ್ನ ▸ ಯಲಹಂಕ ಮತ್ತು ದಾಸರಹಳ್ಳಿ ವಲಯ

ಆರ್.ಆರ್.ನಗರ ಕ್ಷೇತ್ರದಲ್ಲಿ ₹118 ಕೋಟಿ ಅಕ್ರಮ

ಟಿವಿಸಿಸಿಯಿಂದ ದೊಡ್ಡಯ್ಯ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ₹118 ಕೋಟಿ ಅಕ್ರಮದಲ್ಲಿ ಭಾಗಿಯಾದ ಆರೋಪವಿದ್ದ ಬಿಬಿಎಂಪಿ ಆಯುಕ್ತರ ತಾಂತ್ರಿಕ ಮತ್ತು ಜಾಗೃತ ಕೋಶದ (ಟಿವಿಸಿಸಿ) ಮುಖ್ಯ ಎಂಜಿನಿಯರ್ ದೊಡ್ಡಯ್ಯ ಎ.ಬಿ.ಅವರನ್ನು ಬಿಬಿಎಂಪಿ ಶನಿವಾರ ವರ್ಗಾಯಿಸಿದೆ.

ಕಳೆದ ವಾರವಷ್ಟೇ ಅವರಿಗೆ ಪಶ್ಚಿಮ ವಲಯದ ಮುಖ್ಯ ಎಂಜಿನಿಯರ್ ಹುದ್ದೆಯ ಪ್ರಭಾರಿಯನ್ನು ವಹಿಸಲಾಗಿತ್ತು. ಇದಕ್ಕೆ ಅಧಿಕಾರಿಗಳ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿತ್ತು.

ಮುಖ್ಯಮಂತ್ರಿಯ ನವ ನಗರೋತ್ಥಾನ ಯೋಜನೆಯಡಿ ರಾಜರಾಜೇಶ್ವರಿನಗರ ಕ್ಷೇತ್ರದಲ್ಲಿ ಮಂಜೂರಾಗಿದ್ದ ಕಾಮಗಾರಿಗಳನ್ನು ನಿರ್ವಹಿಸದೆ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ನಕಲಿ ಬಿಲ್ ಪಾವತಿಸಿ ಬೊಕ್ಕಸಕ್ಕೆ ₹118.26 ಕೋಟಿ ನಷ್ಟ ಉಂಟು ಮಾಡಿರುವುದು ಲೋಕಾಯುಕ್ತ ತನಿಖೆಯಿಂದ ಬಹಿರಂಗವಾಗಿತ್ತು.

'ಹಣಕಾಸು ಹಗರಣ, ಅವ್ಯವಹಾರಗಳನ್ನು ಪತ್ತೆ ಹಚ್ಚಲು ಬಿಬಿಎಂಪಿಯಲ್ಲಿ ಮುಖ್ಯ ಆಯುಕ್ತರ ತಾಂತ್ರಿಕ ಮತ್ತು ಜಾಗೃತ ಕೋಶ (ಟಿವಿಸಿಸಿ) ಸ್ಥಾಪಿಸಲಾಗಿದೆ. 'ಕಾಮಗಾರಿಗಳನ್ನು ಅನುಷ್ಠಾನವೇ ಮಾಡದಿದ್ದರೂ, ಅವು ಅನುಷ್ಠಾನ ಆಗಿವೆ' ಎಂದು ಟಿವಿಸಿಸಿ ಅಧಿಕಾರಿಗಳು ವರದಿ ನೀಡುವ ಮೂಲಕ ಬಿಲ್ ಪಾವತಿಗೆ ಸಹಕರಿಸಿರುವುದು ಲೋಕಾಯುಕ್ತ ತನಿಖೆಯಲ್ಲಿ ಗೊತ್ತಾಗಿತ್ತು.

ಪಾಲಿಕೆಯ ಮುಖ್ಯ ಎಂಜಿನಿಯರ್ (ಯೋಜನೆ–ಕೇಂದ್ರ) ಎಂ.ಲೋಕೇಶ್ ಅವರಿಗೆ ಹೆಚ್ಚುವರಿಯಾಗಿ ರಾಜಕಾಲುವೆ ವಿಭಾಗದ ಹೊಣೆ ವಹಿಸಲಾಗಿದೆ. ರಾಜಕಾಲುವೆ ವಿಭಾಗದ ಸುಗುಣಾ ಅವರನ್ನು ಕೆರೆಗಳು ವಿಭಾಗದ ಮುಖ್ಯ ಎಂಜಿನಿಯರ್ ಆಗಿ ನಿಯೋಜಿಸಲಾಗಿದೆ. ವಿಜಯಕುಮಾರ್ ಹರಿದಾಸ್ ಅವರನ್ನು ಟಿವಿಸಿಸಿ ಮುಖ್ಯ ಎಂಜಿನಿಯರ್ ಆಗಿ ನೇಮಿಸಲಾಗಿದೆ.

ಕಳೆದ ವಾರ ಎರಡು ಗಂಟೆ ಸುರಿದಿದ್ದ ಮಳೆಗೆ ಹಲವು ಪ್ರದೇಶಗಳಲ್ಲಿ ಸಮಸ್ಯೆ ಉಂಟಾಗಿತ್ತು. ಇದಕ್ಕೆ ರಾಜಕಾಲುವೆ ನಿರ್ವಹಣೆಯ ಲೋಪವೇ ಕಾರಣ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಸಮಾಧಾನ ವ್ಯಕ್ತ ಪಡಿಸಿದ್ದರು. ಅದರ ಬೆನ್ನಲ್ಲೇ ಸುಗುಣಾ ಅವರನ್ನು ವರ್ಗಾವಣೆ ಮಾಡಲಾಗಿದೆ.

ಸುದ್ದಿ 2 ನಿಮಿಷ

'ಮಿಲಿಟರಿ ಇರುವಾಗ ಆರ್‌ಎಸ್‌ಎಸ್ ದೇಶ ಕಾಯಬೇಕೆ?'

ಕುಮಟಾ (ಉತ್ತರ ಕನ್ನಡ): 'ಮಿಲಿಟರಿ ಪಡೆ ಇರುವಾಗ ಖಾಕಿ ಚೆಡ್ಡಿ, ಕರಿ ಟೋಪಿ, ಕೈಯಲ್ಲಿ ದೊಣ್ಣೆ ಹಿಡಿದವರು ದೇಶ ಕಾಯುವ ಅಗತ್ಯವಿದೆಯೇ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಪ್ರಶ್ನಿಸಿದರು



ಜಿಲ್ಲೆಯ ಬಿ.ಕೆ.ಹರಿಪ್ರಸಾದ್ ಅಭಿನಂದನಾ ಸಮಿತಿ ವತಿಯಿಂದ ಭಾನುವಾರ ಕುಮಟಾದಲ್ಲಿ ನೀಡಿದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, 'ಗಾಂಧಿ ಕೊಂದ ಸಂಘ ಪರಿವಾರದವರಿಗೆ ಅವರ ಆದರ್ಶವನ್ನು ಕೊಲ್ಲಲು ಮಾತ್ರ ಸಾಧ್ಯವಾಗಿಲ್ಲ' ಎಂದು ಟೀಕಿಸಿದರು.

'ಈ ದೇಶದಲ್ಲಿ ಉಳುವವನೇ ಹೊಲದೊಡೆಯ ಯೋಜನೆಯ ಲಾಭ ಪಡೆದವರು ದೇಶಭಕ್ತರಾಗಲು ಹೊರಟಿರುವುದು ವಿಷಾದಕರ. ಅವರ ಹಿಂದೆ ಇರುವವರು ಅವರ ಕೈಗೆ ಆಯುಧ ಕೊಟ್ಟು ತಮ್ಮ ಮಕ್ಕಳನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕೆ ವಿದೇಶಕ್ಕೆ ಕಳಿಸುತ್ತಿದ್ದಾರೆ' ಎಂದು ಲೇವಡಿ ಮಾಡಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಹತ್ತನೇ ತರಗತಿಯಲ್ಲಿ ಕನ್ನಡ ಪಠ್ಯವನ್ನು ಪ್ರಥಮ ಭಾಷೆಯಾಗಿ ಅಧ್ಯಯನ ಮಾಡಿ, 2022ರ ಏಪ್ರಿಲ್ ತಿಂಗಳಲ್ಲಿ ನಡೆದ ಪರೀಕ್ಷೆಯಲ್ಲಿ 125ಕ್ಕೆ 125 ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕಾಗಿ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅರ್ಜಿ ಆಹ್ವಾನಿಸಿದೆ.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವ್ಯಾಪ್ತಿಯ, ಆನೇಕಲ್ ಒಳಗೊಂಡಂತೆ ಎಲ್ಲ ಇಪ್ಪತ್ತೆಂಟು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ ಸರ್ಕಾರಿ ಹಾಗೂ ಪಾಲಿಕೆಯ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಕನ್ನಡ ಮಾತೃಭಾಷೆಯಾಗಿರುವ 25 ವಿದ್ಯಾರ್ಥಿಗಳಿಗೆ ಹಾಗೂ ಕನ್ನಡೇತರ ಮಾತೃಭಾಷೆಯಾಗಿರುವ 25 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ಅಧ್ಯಕ್ಷ ಎಂ.ಪ್ರಕಾಶಮೂರ್ತಿ ತಿಳಿಸಿದ್ದಾರೆ.

ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ, ಆಧಾರ್ ಗುರುತಿನ ಚೀಟಿಗಳ ದೃಢೀಕೃತ ನಕಲು ಪ್ರತಿಗಳು ಮತ್ತು ಎರಡು ಭಾವಚಿತ್ರಗಳ ಸಹಿತ ಸ್ವಂತ ಕೈಬರವಣಿಗೆಯ ಅರ್ಜಿಯನ್ನು 'ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಶ್ರೀ ಕೃಷ್ಣರಾಜ ಪರಿಷನ್ಮಂದಿರದ ಕಟ್ಟಡ, ಪುಸ್ತಕ ಮಾರಾಟ ಮಳಿಗೆಯ ಪಕ್ಕದ ಕೊಠಡಿ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018' ಇಲ್ಲಿಗೆ ಜೂನ್ 15ರ ಒಳಗೆ ಕಳುಹಿಸಬೇಕು ಎಂದು ತಿಳಿಸಿದ್ದಾರೆ. ಮಾಹಿತಿಗೆ: 9448709651, 7829404063, 8904483376

ಕೆರೆ ನುಂಗಿರುವುದೇ ಸಮಸ್ಯೆಗೆ ಕಾರಣ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಧಾನಿಯ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸದೇ ಕೆರೆಗಳನ್ನು ನುಂಗಲು ಆಸ್ಥೆ ವಹಿಸಿದ್ದೇ ಇಂದಿನ ಸಮಸ್ಯೆಗಳಿಗೆ ಕಾರಣ' ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಮಳೆಹಾನಿಗೆ ತುತ್ತಾಗಿರುವ ರಾಜರಾಜೇಶ್ವರಿ ನಗರ, ಮಹಾಲಕ್ಷ್ಮಿ ಲೇಔಟ್, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಕೆಲವೆಡೆ, ಹೆಚ್ಚು ಹಾನಿಯಾಗಿರುವ ಹೊರಮಾವು ಪ್ರದೇಶಕ್ಕೆ ಭಾನುವಾರ ಭೇಟಿ ನೀಡಿ ಪರಿಶೀಲಿಸಿದ ಅವರು ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

'ಕೆರೆ ನುಂಗಿರುವುದು ದೊಡ್ಡ ತಪ್ಪು. ರಾಜಕಾಲುವೆ ನಿರ್ವಹಣೆ ಸರಿಯಾಗಿ ಆಗಿಲ್ಲ. ಒಳಚರಂಡಿ ಸ್ಥಳಗಳನ್ನು ಒತ್ತುವರಿ ಮಾಡಲಾಗಿದೆ. ತ್ಯಾಜ್ಯ ಸುರಿದು ಕೆರೆ ಮುಚ್ಚಿಸುತ್ತಿದ್ದಾರೆ. ಇದು ಸಮಸ್ಯೆಗಳಿಗೆ ಕಾರಣ ಎಂದರು.

ನಗರದ ಪ್ರಮುಖ ರಸ್ತೆಗಳಲ್ಲಿ ಕಂಡುಬರುವ ಚಿತ್ರಣವೇ ಬೇರೆ, ಒಳಹೊಕ್ಕು ನೋಡಿ ಚಿತ್ರಣವೇ ಬೇರೆ ಇದೆ. ಅಲಕ್ಷ್ಯಕ್ಕೀಡಾಗಿರುವ ಕಡೆ ಮೂಲಸೌಕರ್ಯಗಳ ಸಮಸ್ಯೆ ಇದೆ. ಮಳೆ ಬಂದಾಗ ಪರಿಹಾರ ಕೊಡುವುದು ಬಿಟ್ಟರೆ ಶಾಶ್ವತ ಪರಿಹಾರ ಆಗಿಲ್ಲ' ಎಂದು ಹೇಳಿದರು.

'ನನ್ನ ಅವಧಿಯಲ್ಲಿ ಹೊರವಲಯದ ಪೆರಿಫೆರಲ್ ರಿಂಗ್ ರಸ್ತೆಗೆ ಒಂದು ಸಾವಿರ ಕೋಟಿ ಮೀಸಲಿಟ್ಟಿದ್ದೆ. ಇದುವರೆಗೂ ಒಂದೇ ಒಂದು ಕಿ.ಮೀ ರಸ್ತೆ ಅಭಿವೃದ್ಧಿಯು ಮುಂದಕ್ಕೆ ಹೋಗಿಲ್ಲ. ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದರೆ ಮಾದರಿ ನಗರವನ್ನಾಗಿ ಮಾಡುತ್ತೇವೆ' ಎಂದು ಅವರು ತಿಳಿಸಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

'ಪಾದಚಾರಿ ಮಾರ್ಗ ದುರಸ್ತಿಗೊಳಿಸಿ'



'ಮಹಾಲಕ್ಷ್ಮಿ ಲೇಔಟ್‌ನ ಹಾಸ್ಯ ಚಕ್ರವರ್ತಿ ನರಸಿಂಹರಾಜು ರಸ್ತೆಯ ಬಳಿಯ ಪಾದಚಾರಿ ಮಾರ್ಗ ಸಂಪೂರ್ಣವಾಗಿ ಹಾಳಾಗಿದೆ. ಇದರಿಂದ ಮಕ್ಕಳು, ವೃದ್ಧರು ಈ ಹಾದಿಯಲ್ಲಿ ಸಾಗುವುದೇ ಕಷ್ಟವಾಗಿದೆ'.

'ಕೇಬಲ್ ಅಳವಡಿಸುವ ಸಲುವಾಗಿ ಬೆಸ್ಕಾಂ ಸಿಬ್ಬಂದಿ, ಕೆಲ ತಿಂಗಳ ಹಿಂದೆ ರಸ್ತೆಯ ಒಂದು ಬದಿಯನ್ನು ಅಗೆದಿದ್ದರು. ಬಳಿಕ ಆ ಜಾಗದಲ್ಲಿ ಮಣ್ಣು ಹಾಕಿ ಹೋಗಿದ್ದರು. ನಿರಂತರವಾಗಿ ಸುರಿದ ಮಳೆಯಿಂದಾಗಿ ಮಣ್ಣು ಕೊಚ್ಚಿಕೊಂಡು ಹೋಗಿದೆ. ವಾಹನಗಳು ಅತಿ ವೇಗವಾಗಿ ಸಂಚರಿಸುವುದರಿಂದ ರಸ್ತೆ ಅಂಚಿನಲ್ಲಿ ಓಡಾಡುವುದಕ್ಕೂ ಭಯಪಡಬೇಕಾದ ಪರಿಸ್ಥಿತಿ ಇದೆ. ಬಿಬಿಎಂಪಿ ಹಾಗೂ ಬೆಸ್ಕಾಂ ಸಿಬ್ಬಂದಿ ತುರ್ತಾಗಿ ದುರಸ್ತಿ ಕಾರ್ಯ ಕೈಗೊಂಡು ನಾಗರಿಕರಿಗೆ ಆಗುತ್ತಿರುವ ಸಮಸ್ಯೆ ಪರಿಹರಿಸಬೇಕು'.

ಎಂ.ಕೆ.ನರಸಿಂಹ ಮೂರ್ತಿ, ಮಹಾಲಕ್ಷ್ಮಿ ಲೇಔಟ್ 3ನೇ ಅಡ್ಡರಸ್ತೆ

'ಹಳ್ಳದಂತಾದ ರಸ್ತೆಯಲ್ಲಿ ಸಂಚರಿಸುವುದು ಹೇಗೆ'

'ಧರ್ಮರಾಯಸ್ವಾಮಿ ದೇವಸ್ಥಾನ ಹಾಗೂ ಸುಧಾಮನಗರ ವಾರ್ಡ್ ವ್ಯಾಪ್ತಿಯ ಶ್ರೀ ಮರಿಸ್ವಾಮಿ ಮಠದ ಮುಂಭಾಗದ ಮುಖ್ಯರಸ್ತೆ ಹಳ್ಳಮಯವಾಗಿದ್ದು, ಇದರಿಂದ ನಾಗರಿಕರು ಪರದಾಡುವಂತಾಗಿದೆ. ರಸ್ತೆ ದುರಸ್ತಿಗೊಳಿಸುವಂತೆ ಹಲವು ಬಾರಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ'.

'ಒಳಚರಂಡಿ ದುರಸ್ತಿ ಕಾಮಗಾರಿ ವೇಳೆ ಸುಸ್ಥಿತಿಯಲ್ಲಿದ್ದ ರಸ್ತೆಯನ್ನೇ ಅಗೆಯಲಾಗಿದೆ. ಬಳಿಕ ಆ ಜಾಗದಲ್ಲಿ ಡಾಂಬರು ಹಾಕುವ ಕೆಲಸ ಆಗಿಲ್ಲ. ನಗರದಲ್ಲಿ ನಿರಂತರವಾಗಿ ಸುರಿದ ಮಳೆಯಿಂದಾಗಿ ಆ ಜಾಗದಲ್ಲಿನ ಮಣ್ಣೆಲ್ಲಾ ಕೊಚ್ಚಿಕೊಂಡು ಹೋಗಿ ಹಳ್ಳ ನಿರ್ಮಾಣವಾಗಿದೆ. ಸದಾ ಜನದಟ್ಟಣೆಯಿಂದ ಕೂಡಿರುವ ಈ ರಸ್ತೆಯಲ್ಲೇ ಹೀಗಾಗಿರುವುದರಿಂದ ದ್ವಿಚಕ್ರ, ಲಘು ಹಾಗೂ ಸರಕು ಸಾಗಾಣೆ ವಾಹನಗಳ ಸಂಚಾರಕ್ಕೆ ತೊಡಕಾಗಿದೆ. ಪಾದಚಾರಿಗಳೂ ಪರದಾಡುವಂತಾಗಿದೆ'.

'8 ತಿಂಗಳಿಂದಲೂ ಈ ಸಮಸ್ಯೆ ಇದೆ. ರಸ್ತೆ ಗುಂಡಿಯಿಂದಾಗಿ ಅಪಘಾತಗಳೂ ಸಂಭವಿಸುತ್ತಿವೆ. ಅಧಿಕಾರಿಗಳು ಈಗಲಾದರೂ ಎಚ್ಚೆತ್ತುಕೊಳ್ಳಲಿ. ರಸ್ತೆ ಸರಿಪಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಿ'.

ರಾಮು, ಶ್ರೀ ಮರಿಸ್ವಾಮಿ ಮಠ ರಸ್ತೆ, ಕಲಾಸಿಪಾಳ್ಯ



'ರಸ್ತೆಗಳಿಗೆ ಡಾಂಬರು ಭಾಗ್ಯ ದಯಪಾಲಿಸಿ'



'ಅಂದ್ರಹಳ್ಳಿ ಸಮೀಪ ಇರುವ ಕಾಳಿಕಾನಗರದ ರಸ್ತೆಗಳು ಇನ್ನೂ ಡಾಂಬರು ಭಾಗ್ಯ ಕಂಡಿಲ್ಲ. ಮಳೆಗಾಲದಲ್ಲಿ ರಸ್ತೆಗಳು ಕೆಸರಿನ ರಾಡಿಯಿಂದ ತುಂಬಿಹೋಗಿರುತ್ತವೆ. ಕಾಲಿಟ್ಟರೆ ಜಾರಿ ಬೀಳುವ ಅಪಾಯವಿದೆ. ಬೈಕ್ ಸವಾರರು ಕೆಸರಿನಿಂದಾಗಿ ಆಯತಪ್ಪಿ ಬಿದ್ದ ಉದಾಹರಣೆಗಳೂ ಇವೆ'.

'ರಸ್ತೆಗಳು ಹೊಂಡಮಯವಾಗಿವೆ. ಅವುಗಳಲ್ಲಿ ನೀರು ತುಂಬಿಕೊಂಡಿವೆ. ಮಳೆಗಾಲದಲ್ಲಿ ಈ ರಸ್ತೆಗಳ ಸ್ಥಿತಿ ಮತ್ತಷ್ಟು ಶೋಚನೀಯವಾಗುತ್ತವೆ. ಹೀಗಾಗಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಎಚ್ಚೆತ್ತುಕೊಂಡು ಈ ರಸ್ತೆಗೆ ಡಾಂಬರು ಹಾಕಿಸುವ ಕೆಲಸವನ್ನು ತುರ್ತಾಗಿ ಮಾಡಲಿ'.

ಸಿ.ಮಂಜುನಾಥ
ಕಾಳಿಕಾನಗರ, ಅಂದ್ರಹಳ್ಳಿ ಮುಖ್ಯರಸ್ತೆ

'ರಸ್ತೆ ಬದಿ ಬಸ್ ನಿಲುಗಡೆ ತಪ್ಪಿಸಿ'



'ಬಸವನಗುಡಿಯ ನಾಗಸಂದ್ರ ವೃತ್ತದ (ಡಿವಿಜಿ ರಸ್ತೆ) ಬಳಿ ಖಾಸಗಿ ವಾಹನಗಳನ್ನು ನಿಲುಗಡೆ ಮಾಡಲಾಗಿರುತ್ತದೆ. ಇದರಿಂದ ನಾಗರಿಕರ ಓಡಾಟಕ್ಕೆ ತೊಂದರೆಯಾಗುತ್ತಿದೆ. ವಾಹನಗಳ ಸುಲಭ ಸಂಚಾರಕ್ಕೂ ಇದು ತೊಡಕಾಗಿ ಪರಿಣಮಿಸಿದೆ'.

'ಈ ಸ್ಥಳದಲ್ಲಿ ಎರಡರಿಂದ ಮೂರು ಬಸ್ ಯಾವಾಗಲೂ ನಿಂತಿರುತ್ತವೆ. ಬಸ್ ನಿಲುಗಡೆ ಮಾಡದಂತೆ ಸೂಚಿಸಿದರೆ ನಾಗರಿಕರ ಮೇಲೆ ಚಾಲಕರು ದಬ್ಬಾಳಿಕೆ ನಡೆಸುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಶೀಘ್ರವೇ ಪರಿಹರಿಸಿದರೆ ಅನುಕೂಲವಾಗುತ್ತದೆ'.

ಮೋಹನ್, ನಾಗಸಂದ್ರ ನಿವಾಸಿ

'ಸೋರುತಿಹುದು ಗ್ರಂಥಾಲಯದ ಮಾಳಿಗೆ'

'ಉತ್ತರಹಳ್ಳಿ ವಿಭಾಗದ ಗ್ರಂಥಾಲಯವೊಂದು ಶೋಚನೀಯ ಸ್ಥಿತಿಯಲ್ಲಿದೆ. ಮಳೆಗಾಲದಲ್ಲಿ ಮಾಳಿಗೆಯು ಸೋರುತ್ತದೆ. ನೀರಿನ ಹನಿಗಳು ಉದುರುವುದರಿಂದ ವಿದ್ಯಾರ್ಥಿಗಳು ಹಾಗೂ ನಾಗರಿಕರಿಗೆ ಕಿರಿಕಿರಿ ಉಂಟಾಗುತ್ತಿದೆ'.

'ಮಾಳಿಗೆಯ ಮೇಲ್ಪದರಗಳು ಕಿತ್ತುಹೋಗಿದ್ದು, ಮಳೆಯಿಂದಾಗಿ ಪಾಚಿ ಕೂಡ ಬೆಳೆದಿದೆ. ಅಲ್ಲಲ್ಲಿ ಒಡೆದ ಗಾಜಿನ ಚೂರುಗಳು ಬಿದ್ದಿವೆ. ಗೋಡೆಯ ಮೇಲೆ ನೇತು ಹಾಕಿರುವ ಗಣ್ಯರ ಭಾವಚಿತ್ರಗಳೂ ಹಾಳಾಗಿವೆ. ಹೀಗಿದ್ದರೂ ಅಧಿಕಾರಿಗಳು ಇದನ್ನು ಸರಿಪಡಿಸುವ ಕೆಲಸ ಮಾಡಿಲ್ಲ. ಇದರಿಂದ ಪತ್ರಿಕೆ ಹಾಗೂ ಪುಸ್ತಕಗಳನ್ನು ಓದುವ ಸಲುವಾಗಿ ಗ್ರಂಥಾಲಯಕ್ಕೆ ಬರುವವರಿಗೆ ಸಮಸ್ಯೆಯಾಗುತ್ತಿದೆ. ಅಧಿಕಾರಿಗಳು ಸಮಸ್ಯೆಗೆ ಶೀಘ್ರವೇ ಮುಕ್ತಿ ನೀಡಬೇಕು'.

ಜೆ.ವಿನೋದ್ ಕುಮಾರ್, ಉತ್ತರಹಳ್ಳಿ ನಿವಾಸಿ



ದಾನಕ್ಕೆ ಹಿಂದೇಟು • ಎದೆಹಾಲು ಬ್ಯಾಂಕಿನಲ್ಲಿ ಸದ್ಯ 6 ಲೀಟರ್ ಅಷ್ಟೇ ಸಂಗ್ರಹ

ವಾಣಿವಿಲಾಸ: 'ಅಮೃತಧಾರೆ'ಗೆ ಬೇಡಿಕೆ

• ವರುಣ ಹೆಗಡೆ


ವಾಣಿವಿಲಾಸ ಆಸ್ಪತ್ರೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಇಲ್ಲಿನ ವಾಣಿವಿಲಾಸ ಆಸ್ಪತ್ರೆಯ 'ಅಮೃತಧಾರೆ' ಎದೆಹಾಲು ಬ್ಯಾಂಕಿಗೆ ನಗರದ ಖಾಸಗಿ ಆಸ್ಪತ್ರೆಗಳೂ ಎದೆಹಾಲಿಗೆ ಬೇಡಿಕೆ ಸಲ್ಲಿಸುತ್ತಿವೆ. ಆದರೆ, ದಾನಿಗಳ ಕೊರತೆಯಿಂದಾಗಿ ಬ್ಯಾಂಕಿನಲ್ಲಿ ಸದ್ಯ 6 ಲೀಟರ್ ಹಾಲು ಮಾತ್ರ ಲಭ್ಯವಿದೆ.

ಆಸ್ಪತ್ರೆಯಲ್ಲಿ ಹೆರಿಗೆ ಆದವರು ಹಾಗೂ ಸ್ವಇಚ್ಛೆಯಿಂದ ಹೊರಗಿನಿಂದ ಬರುವ ತಾಯಂದಿರಿಂದ ಎದೆ ಹಾಲು ಸಂಗ್ರಹಿಸಲಾಗುತ್ತಿದೆ. ಬ್ಯಾಂಕ್‌ನಲ್ಲಿ ಈವರೆಗೆ 45 ಲೀಟರ್ ಹಾಲನ್ನು ಶೇಖರಣೆ ಮಾಡಲಾಗಿದೆ. ಅದರಲ್ಲಿ 30 ಲೀಟರ್‌ನಷ್ಟು ಎದೆಹಾಲನ್ನು 120 ಶಿಶುಗಳಿಗೆ ಒದಗಿಸಲಾಗಿದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿಯಂತೆ ಆರು ತಿಂಗಳೊಳಗಿನ ಶೇ 46 ರಷ್ಟು ಶಿಶುಗಳಿಗೆ ಸ್ತನ್ಯಪಾನ ಸಮರ್ಪಕವಾಗಿ ಆಗುತ್ತಿಲ್ಲ. ಈ ಕೊರತೆ ನೀಗಿಸಲು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿ (ಬಿಎಂಸಿಆರ್‌ಐ) ಕಾರ್ಯ ನಿರ್ವಹಿಸುತ್ತಿರುವ ವಾಣಿ ವಿಲಾಸ ಆಸ್ಪತ್ರೆಯಲ್ಲಿ ₹ 1 ಕೋಟಿ ವೆಚ್ಚದಲ್ಲಿ ತಾಯಂದಿರ ಎದೆ ಹಾಲಿನ ಬ್ಯಾಂಕ್ ನಿರ್ಮಿಸಲಾಗಿದೆ.

ಕಳೆದ ಮಾರ್ಚ್ ತಿಂಗಳಿನಲ್ಲಿ ಈ ಬ್ಯಾಂಕಿಗೆ ಚಾಲನೆ ದೊರೆತಿದ್ದು, ರಾಜ್ಯದ ಸರ್ಕಾರಿ ಆಸ್ಪತ್ರೆಯೊಂದರಲ್ಲಿ ಸ್ಥಾಪಿಸಲಾದ ತಾಯಂದಿರ ಎದೆ ಹಾಲಿನ ಮೊದಲ ಬ್ಯಾಂಕ್ ಎಂಬ ಹಿರಿಮೆಗೂ ಇದು ಪಾತ್ರವಾಗಿದೆ.

ವಾಣಿವಿಲಾಸ ಆಸ್ಪತ್ರೆಯಲ್ಲಿ ಜನಿಸಿದ ಶಿಶುಗಳಿಗೆ ಅಲ್ಲಿನ ವೈದ್ಯರು ಪರಿಶೀಲಿಸಿ, ಎದೆಹಾಲು ಪೂರೈಕೆಗೆ ಬ್ಯಾಂಕ್‌ಗೆ ಶಿಫಾರಸು ಸಲ್ಲಿಸುತ್ತಿದ್ದಾರೆ. ನವಜಾತ ತೀವ್ರ ನಿಗಾ ಘಟಕದಲ್ಲಿ ಇರುವ ಶಿಶುಗಳು ಸೇರಿದಂತೆ ಎದೆಹಾಲಿನಿಂದ ವಂಚಿತರಾಗಿರುವ ಶಿಶುಗಳಿಗೆ ಎದೆಹಾಲು ಪೂರೈಸಲು ಖಾಸಗಿ ಆಸ್ಪತ್ರೆಗಳು ಮನವಿ ಸಲ್ಲಿಸುತ್ತಿವೆ.

ಜಾಗೃತಿ ಕೊರತೆ: 'ಅಗತ್ಯ ಪರೀಕ್ಷೆ ನಡೆಸಿ ಆರೋಗ್ಯವಂತ ತಾಯಿಯಿಂದ ಎದೆಹಾಲು ಪಡೆಯಲಾಗುತ್ತದೆ. ಈ ಬಗ್ಗೆ ಇನ್ನಷ್ಟು ಜಾಗೃತಿ ಅಗತ್ಯ. ಸುಶಿಕ್ಷಿತ ತಾಯಂದಿರಷ್ಟೇ ಈಗ ಎದೆಹಾಲು ದಾನಕ್ಕೆ ಮುಂದೆ ಬರುತ್ತಿದ್ದಾರೆ' ಎಂದು ಸ್ಥಾನಿಕ ವೈದ್ಯಾಧಿಕಾರಿ ಡಾ. ಸಂತೋಷ್ ತಿಳಿಸಿದರು.

'ಖಾಸಗಿ ಆಸ್ಪತ್ರೆಗಳೂ ಬೇಡಿಕೆ ಸಲ್ಲಿಸು ತ್ತಿವೆ. ಆದರೆ, ನಮ್ಮ ಆಸ್ಪತ್ರೆಯಲ್ಲಿಯೇ ಕೆಲ ಶಿಶುಗಳಿಗೆ ಅಗತ್ಯವಿರುವುದರಿಂದ ಬೇಡಿಕೆ ಪೂರೈಸುವುದು ಕಷ್ಟ. ಶೇಖರಣೆ ಸಾಮರ್ಥ್ಯವನ್ನೂ ವಿಸ್ತರಣೆ ಮಾಡಲಾಗುತ್ತಿದೆ' ಎಂದು ಆಸ್ಪತ್ರೆ ಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಮಲ್ಲೇಶ್ ಕೆ. ಹೇಳಿದರು.

ಯಾವ ಶಿಶುಗಳಿಗೆ ಹಾಲು ಪೂರೈಕೆ?

ಅವಧಿ ಪೂರ್ವದಲ್ಲಿ ಜನಿಸಿದ ಶಿಶುಗಳು, ಅಸ್ವಸ್ಥ ಶಿಶುಗಳು, ಅನಾಥ ಶಿಶುಗಳು, ಮೃತಪಟ್ಟ ತಾಯಂದಿರ ಶಿಶುಗಳು, ರೋಗಗ್ರಸ್ತ ಬಾಣಂತಿಯರ ಶಿಶುಗಳು, ಎದೆಹಾಲು ಉತ್ಪಾದನೆಯಾಗದ ಬಾಣಂತಿಯರ ಶಿಶುಗಳಿಗೆ ಕೇಂದ್ರದಿಂದ ಎದೆಹಾಲು ದಾನ ಮಾಡಲಾಗುತ್ತಿದೆ.

'6 ತಿಂಗಳು ಶೇಖರಣೆ ಸಾಧ್ಯ'

'ಬ್ಯಾಂಕ್‌ನಲ್ಲಿ ಸಂಗ್ರಹಿಸಿದ ಹಾಲನ್ನು ಪ್ಯಾಶ್ಚರೀಕರಿಸಿದ ಬಳಿಕ ಪ್ಯಾಕ್ ಮಾಡಿ, ಸಂರಕ್ಷಿಸಲಾಗುತ್ತದೆ. ಶಿಶುವಿಗೆ ನೀಡುವಾಗ ಸಾಮಾನ್ಯ ಉಷ್ಣಾಂಶಕ್ಕೆ ತರಲಾಗುತ್ತದೆ. ಇದನ್ನು ಆರು ತಿಂಗಳು ಶೇಖರಿಸಿಡಬಹುದು. ಖಾಸಗಿ ಎದೆಹಾಲು ಬ್ಯಾಂಕ್‌ಗಳಲ್ಲಿ 150 ಮಿ.ಲೀ. ಹಾಲಿಗೆ ₹ 6,500ರಿಂದ ₹ 8,000 ಪಾವತಿಸಬೇಕು. ಅಗತ್ಯವಿರುವ ಶಿಶುಗಳಿಗೆ ಇಲ್ಲಿ ಎದೆಹಾಲು ಉಚಿತವಾಗಿ ಒದಗಿಸಲಾಗುತ್ತಿದೆ' ಎಂದು ವಾಣಿವಿಲಾಸ ಆಸ್ಪತ್ರೆ ವೈದ್ಯರು ತಿಳಿಸಿದರು.


ದಲಿತ ಸಂಘರ್ಷ ಸಮಿತಿ ಭಾನುವಾರ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಸುಭಾಷ್ ಭರಣಿ ಅವರು ಪೌರಕಾರ್ಮಿಕರಿಗೆ 'ಜಲಗಾರಶ್ರೀ' ಪ್ರಶಸ್ತಿ ನೀಡಿದರು. ಸಮಿತಿಯ ಗೌರವಾಧ್ಯಕ್ಷ ಎಂ.ಅರಸಪ್ಪ, ಅಧ್ಯಕ್ಷ ಎಂ.ಮಲ್ಲೇಶ್, ಬಿಬಿಎಂಪಿ ಮಾಜಿ ಸದಸ್ಯ ಎಸ್.ರಾಜು, ವೈದ್ಯ ಡಾ ಟಿ.ಎಚ್.ಆಂಜನಪ್ಪ, ರಾಜ್ಯ ಘಟಕದ ಅಧ್ಯಕ್ಷ ಡಿ.ಮುನಿರಾಜು, ಲೇಖಕ ಡಾ.ರಾಜಪ್ಪ ದಳವಾಯಿ, ಸಮಿತಿ ಪದಾಧಿಕಾರಿಗಳಿದ್ದಾರೆ – ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಯುನೊಯಿಯ–2022 ಉತ್ಸವಕ್ಕೆ ಚಾಲನೆ: ಆಯೋಜನೆ–ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಸ್ಕೂಲ್ ಆಫ್ ಕಾಮರ್ಸ್ ಮತ್ತು ಎಆರ್‌ಇಟಿಇ, ಸ್ಥಳ–ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ರಾಜಾನುಕುಂಟೆ, ಯಲಹಂಕ–ಬೆಳಿಗ್ಗೆ 9.30.

ನವೀಕರಣಗೊಂಡ 6 ಅಂಗನವಾಡಿ ಕೇಂದ್ರಗಳ ಉದ್ಘಾಟನೆ: ಮುಖ್ಯ ಅತಿಥಿ–ಗಿರೀಶ್ ಕೌಸಗಿ, ಆಯೋಜನೆ–ರೋಟರಿ ಬೆಂಗಳೂರು ಇಂದಿರಾನಗರ, ಸ್ಥಳ–ರೋಟರಿ ಬೆಂಗಳೂರು ಇಂದಿರಾ ನಗರ ಹಿರಿಯ ಪ್ರಾಥಮಿಕ ಶಾಲೆ, ಬೆನ್ನಿಗಾನಹಳ್ಳಿ–ಬೆಳಿಗ್ಗೆ 10.

'ದೇಸಿ ದರ್ಶನ ಮಾಲೆ' ಪುಸ್ತಕಗಳ ಬಿಡುಗಡೆ ಮತ್ತು ವಿಚಾರ ಸಂಕಿರಣ: ಉದ್ಘಾಟನೆ ಮತ್ತು ಪುಸ್ತಕ ಬಿಡುಗಡೆ–ಎಚ್.ಎಸ್. ವೆಂಕಟೇಶಮೂರ್ತಿ, ಮುಖ್ಯ ಅತಿಥಿ–ಮಲ್ಲೇಪುರಂ ಜಿ.ವೆಂಕಟೇಶ್, ಉಪಸ್ಥಿತಿ–ಎನ್.ಕರಿಯಪ್ಪ, ಅಧ್ಯಕ್ಷತೆ–ಬಿ.ವಿ.ವಸಂತಕುಮಾರ್, ಆಯೋಜನೆ–ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ–ಬೆಳಿಗ್ಗೆ 11.

ಕೇಸರಿ ಪಠ್ಯಕ್ರಮ ಹಾಗೂ ಶಿಕ್ಷಣದ ಕೋಮುವಾದೀಕರಣ ವಿರೋಧಿಸಿ ಸಮಾಲೋಚನಾ ಸಭೆ: ಆಯೋಜನೆ–ವಿವಿಧ ವಿದ್ಯಾರ್ಥಿ ಸಂಘಟನೆಗಳು, ಸ್ಥಳ–ಅಲುಮ್ನಿ ಅಸೋಸಿಯೇಷನ್ ಹಾಲ್, ಕೆ.ಆರ್.ಸರ್ಕಲ್ ಹತ್ತಿರ–ಬೆಳಿಗ್ಗೆ 11.

ಮಾವು ಮತ್ತು ಹಲಸು ಮಾರಾಟ ಮೇಳ–2022: ಉದ್ಘಾಟನೆ–ಮುನಿರತ್ನ, ವಿಶೇಷ ಆಹ್ವಾನಿತರು–ತೇಜಸ್ವಿ ಸೂರ್ಯ, ರಾಮಲಿಂಗಾರೆಡ್ಡಿ, ಅಧ್ಯಕ್ಷತೆ–ಉದಯ ಗರುಡಾಚಾರ್, ಆಯೋಜನೆ–ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ ನಿಯಮಿತ, ಸ್ಥಳ–ಪ್ರಧಾನ ಕಚೇರಿ, ಹಾಪ್‌ಕಾಮ್ಸ್ ಆವರಣ, ಲಾಲ್‌ಬಾಗ್–ಬೆಳಿಗ್ಗೆ 11.30.

ಆಕಾಶ್ ಬೈಜುಸ್ ನೂತನ ಶಾಖೆ ಉದ್ಘಾಟನೆ: ಉದ್ಘಾಟನೆ–ಧೀರಜ್‌ಕುಮಾರ್ ಮಿಶ್ರಾ, ಆಯೋಜನೆ–ಆಕಾಶ್ ಬೈಜುಸ್, ಸ್ಥಳ–ಗ್ರೀನ್ ಫೀಲ್ಡ್ ಹಬ್, ವೈಟ್‌ಫೀಲ್ಡ್–ಹೊಸಕೋಟೆ ಮುಖ್ಯರಸ್ತೆ, ಸೀಗೆಹಳ್ಳಿ–ಮಧ್ಯಾಹ್ನ 12.

20ನೇ ವಾರ್ಷಿಕೋತ್ಸವ, ಆಂಗಿಕ **ನೃತ್ಯೋತ್ಸವ ಹಾಗೂ ಆಜಾದಿ ಕಾ ಅಮೃತ ಮಹೋತ್ಸವ:** ಉದ್ಘಾಟನೆ–ದಿನೇಶ್ ಗುಂಡೂರಾವ್, ಅತಿಥಿ–ಬಲವಂತರಾವ್ ಪಾಟೀಲ್, ಬನಶಂಕರಿ ವಿ.ಅಂಗಡಿ, ವೈ.ಕೆ. ಸಂಧ್ಯಾ ಶರ್ಮ, ಆಯೋಜನೆ–ಶ್ರೀ ಲಲಿತ ಕಲಾನಿಕೇತನ, ಸ್ಥಳ–ರವೀಂದ್ರ ಕಲಾ ಕ್ಷೇತ್ರ, ಜೆ.ಸಿ.ರಸ್ತೆ–ಮಧ್ಯಾಹ್ನ 3.

'ಶೋಷಿತರನ್ನು ಮುಖ್ಯವಾಹಿನಿಗೆ ತನ್ನಿ'

ಬಂಜಾರ ಸಂಘಗಳಿಂದ ಬಿ.ಆರ್. ಅಂಬೇಡ್ಕರ್ ಜಯಂತಿ

ಪ್ರಜಾವಾಣಿ ವಾರ್ತೆ


ಭಾನುವಾರ ನಡೆದ ಡಾ.ಬಿ.ಆರ್. ಜಯಂತಿ ಕಾರ್ಯಕ್ರಮದಲ್ಲಿ (ಎಡದಿಂದ) ಸಂಘ ಸಂಸ್ಥೆಗಳ ಮಹಾ ಒಕ್ಕೂಟದ ಸಂಚಾಲಕ ಎ.ಆರ್. ಗೋವಿಂದಸ್ವಾಮಿ, ಎಐಬಿಎಸ್‌ಎಸ್ ರಾಜ್ಯ ಅಧ್ಯಕ್ಷ ಪಾಂಡುರಂಗ ಪಮ್ಮಾರ, ತಾಂಡಾ ಅಭಿವೃದ್ಧಿ ನಿಗಮ ಅಧ್ಯಕ್ಷ ಪಿ. ರಾಜೀವ್, ಡಿ. ರಾಮಾ ನಾಯಕ್, ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ ಪ್ರಧಾನ ಕಾರ್ಯದರ್ಶಿ ಎಚ್.ಬಿ. ಸಿದ್ಯಾ ನಾಯಕ್, ಬಂಜಾರ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಲೇಖಕಿ ಬಿ.ಟಿ. ಲಲಿತಾ ನಾಯಕ್ ಮತ್ತು ಎಐಬಿಎಸ್‌ಎಸ್ ಬೆಂಗಳೂರು ಮೇಘಾಸಿಟಿ ಘಟಕದ ಅಧ್ಯಕ್ಷ ಎಸ್.ಆರ್. ರಾಜಾ ನಾಯಕ್ ಅವರು ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸೇವಾಲಾಲ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ದಮನಿತರು, ಶೋಷಿತರನ್ನು ಸಮಾಜದ ಮುಖ್ಯವಾಹಿನಿಗೆ ಸೇರಿಸುವ ಕಾರ್ಯಗಳನ್ನು ಪ್ರತಿಯೊಬ್ಬರು ಕೈಗೊಳ್ಳಬೇಕು' ಎಂದು ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ.ರಾಜೀವ್ ಸಲಹೆ ನೀಡಿದರು.

ಆಲ್ ಇಂಡಿಯಾ ಬಂಜಾರ ಸೇವಾ ಸಂಘ, ಬೆಂಗಳೂರು ಮೇಘಾ ಸಿಟಿ ಘಟಕ, ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ, ಬಂಜಾರ ನೌಕರರ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ಹಾಗೂ ಬಂಜಾರ ಸಂಘ–ಸಂಸ್ಥೆಗಳ ಒಕ್ಕೂಟ ಸಂಯುಕ್ತವಾಗಿ ಏರ್ಪಡಿಸಿದ್ದ 'ಡಾ. ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಲಂಬಾಣಿ ಸಮಾಜ ಸಂಘಟಿತವಾಗಿಲ್ಲ. ಸ್ವಸಾಮರ್ಥ್ಯದಿಂದ ಪ್ರಗತಿ ಸಾಧಿಸಿದವರೇ ಹೆಚ್ಚು. ಆದರೂ ನಾವು ಪ್ರತಿನಿಧಿಸುವ ಸಮಾಜದ ಋಣ ತೀರಿಸುವ ಪ್ರಯತ್ನ ಮಾಡಬೇಕು. ಸಮಾಜಮುಖಿಯಾಗಿ ಆಲೋಚಿಸಿ ನಿರ್ಲಕ್ಷ್ಯಕ್ಕೆ ಒಳಗಾಗಿರುವವರಿಗೆ ನೆರವಿನ ಹಸ್ತ ಚಾಚಬೇಕು' ಎಂದರು.

ಲೇಖಕಿ ಬಿ.ಟಿ.ಲಲಿತಾ ನಾಯಕ್ ಅವರು, 'ಇಂದು ಜಾತಿವಾದ, ಮತೀಯತೆ ಹೆಚ್ಚಾಗುತ್ತಿದೆ. ಪ್ರಗತಿಯನ್ನು ಕಡೆಗಣಿಸಲಾಗುತ್ತಿದೆ. ಬಂಜಾರ ಸಮುದಾಯ ಹಿಂದುಳಿದಿದೆ. ಸಮುದಾಯ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಸರ್ಕಾರ ರೂಪಿಸಬೇಕು' ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಡಿ.ರಾಮಾ ನಾಯಕ್, ರಾಜ್ಯೋತ್ಸವ ಪುರಸ್ಕೃತ ರತನ್ ಸಿಂಗ್ ನಾಯಕ್, ಕರ್ನಾಟಕ ಟ್ರೇಡ್‌ವಿಂಗ್ ಪ್ರೆಸಿಡೆಂಟ್‌ ಪ್ರಶಸ್ತಿ ಪುರಸ್ಕೃತ ಡಾ.ಸತೀಶ್ ಬಾಲ್ಯ ಶಾಮ ನಾಯಕ್ ಅವರನ್ನು ಸನ್ಮಾನಿಸಲಾಯಿತು.

'ಆಶಾ' ಕಾರ್ಯಕರ್ತೆಯರ ಸೇವೆ ವಿಶ್ವ ಆರೋಗ್ಯ ಸಂಸ್ಥೆಯ ಗೌರವ

ವಿಶ್ವಸಂಸ್ಥೆ/ಜಿನೀವಾ (ಪಿಟಿಐ): ಭಾರತದ ಹತ್ತು ಲಕ್ಷ 'ಆಶಾ' ಕಾರ್ಯಕರ್ತೆಯರಿಗೆ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಭಾನುವಾರ ಗೌರವ ಸಲ್ಲಿಸಿದೆ.

ಗ್ರಾಮೀಣ ಪ್ರದೇಶಗಳಿಗೆ ಆರೋಗ್ಯ ಸೌಲಭ್ಯ ತಲುಪಿಸಲು ನೇರ ಸಂಪರ್ಕ ಒದಗಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿರುವುದು ಹಾಗೂ ದೇಶದಲ್ಲಿ ಕೋವಿಡ್–19 ಸಾಂಕ್ರಾಮಿಕ ಸಂದರ್ಭದಲ್ಲಿ ಅವರು ಸಲ್ಲಿಸಿದ ಅವಿರತ ಸೇವೆಗಾಗಿ ಈ ಗೌರವ ಸಂದಿದೆ.

ಜಾಗತಿಕ ಮಟ್ಟದಲ್ಲಿ ಆರೋಗ್ಯ ಕ್ಷೇತ್ರ ಸುಧಾರಣೆಯಲ್ಲಿ ಅತ್ಯುತ್ತಮ ಕೊಡುಗೆಗಳನ್ನು ಗುರುತಿಸಲು ಭಾನುವಾರ 6 ಪ್ರಶಸ್ತಿಗಳನ್ನು ಘೋಷಿಸಿ ಮಾತನಾಡಿದ ಡಬ್ಲ್ಯುಎಚ್‌ಒ ಮಹಾನಿರ್ದೇಶಕ ಡಾ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್, 'ಈ ಪ್ರಶಸ್ತಿ ಪುರಸ್ಕೃತರು ಜೀವಮಾನದ ಸಮರ್ಪಣೆ, ಪಟ್ಟುಬಿಡದ ಸಮರ್ಥನೆ, ಸಮಾನತೆಗೆ ಬದ್ಧತೆ ಮತ್ತು ಮಾನವೀಯತೆಯ ನಿಸ್ವಾರ್ಥ ಸೇವೆ ಸಾಕಾರಗೊಳಿಸಿದ್ದಾರೆ' ಎಂದರು.

2019ರಲ್ಲಿ ಈ ಪ್ರಶಸ್ತಿಗಳನ್ನು ಸ್ಥಾಪಿಸಲಾಗಿತ್ತು. ಭಾನುವಾರ ನಡೆದ ವಿಶ್ವ ಆರೋಗ್ಯ ಸಂಸ್ಥೆಯ 75ನೇ ಸಾಮಾನ್ಯ ಅಧಿವೇಶನದಲ್ಲಿ ಪ್ರಶಸ್ತಿ ಪುರಸ್ಕೃತರಿಗೆ ವರ್ಚುವಲ್ ಮೂಲಕ ಗೌರವ ಸಲ್ಲಿಸಲಾಯಿತು.

ಕಂದಾಯ ಇಲಾಖೆ ಅಕ್ರಮ: ಹಣಕೊಟ್ಟರೆ ಎಲ್ಲವೂ ಸುಸೂತ್ರ– ಇಲ್ಲದಿದ್ದರೆ ಕಡತಗಳಿಗೆ ಸಿಗದು ಮೋಕ್ಷ

ದಾಖಲೆ ಸರಿ ಇದ್ದರೂ ಖಾತಾ ಸೇವೆಗೆ ಕ್ಯಾತೆ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಹೊಸ ಆಸ್ತಿ ಖರೀದಿಸಿದಾಗ ಅದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳು ಸಮರ್ಪಕವಾಗಿದ್ದರೂ ಖಾತೆ ಬದಲಾವಣೆಗೆ ಅಧಿಕಾರಿಗಳು ಕ್ಯಾತೆ ತೆಗೆಯದೇ ಇರುವುದಿಲ್ಲ. ಸಿಬ್ಬಂದಿಯೋ, ದಲ್ಲಾಳಿಗಳನ್ನು ಬದಿಗೆ ಕರೆದು 'ಬುಕ್' ಮಾಡಿದರೆ ದಾಖಲೆಗಳ ಗೊಡವೆ ಇಲ್ಲದೆಯೇ ಸುಲಭವಾಗಿ ಖಾತೆ ವರ್ಗಾವಣೆ ಸಾಧ್ಯ!

ಖಾತೆ ವರ್ಗಾವಣೆ ಸೇವೆಯನ್ನು ಸಕಾಲ ಸೇವೆಯಡಿ ತರಲಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಖಾತಾ ಸೇವೆ ಪಡೆಯಲು ಏಕಗವಾಕ್ಷಿ ವ್ಯವಸ್ಥೆ ರೂಪಿಸಲಾಗಿದೆ. ಈ ಸೇವೆಗೆ ಸಕಾಲ ಆನ್‌ಲೈನ್ ಸೇವೆಗಳ (www.sakala.kar.nic.in) ಮೂಲಕ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. 4 ಸಾವಿರ ಚದರ ಅಡಿವರೆಗಿನ ಖಾತಾ ಸೇವೆಗಳಿಗೆ ಕಂದಾಯ ಅಧಿಕಾರಿ ಹಂತದಲ್ಲೇ ಮಂಜೂರಾತಿಗೆ ಅವಕಾಶ ಕಲ್ಪಿಸಲಾಗಿದೆ. ಅದಕ್ಕಿಂತ ಹೆಚ್ಚಿನ ವಿಸ್ತೀರ್ಣದ ಆಸ್ತಿಗಳ ಖಾತೆ ಮಾಡಿಸುವುದು ಅಥವಾ ಖಾತಾ ವರ್ಗಾವಣೆಗೆ ಸಂಬಂಧಿಸಿದ ಕಡತಗಳಿಗೆ ಉಪ ಆಯುಕ್ತರು ಹಾಗೂ ಜಂಟಿ ಆಯುಕ್ತರ ಅನುಮೋದನೆ ಅಗತ್ಯ.

ಸಕಾಲ ಪ್ರಕಾರ ಖಾತಾ ಸೇವೆಯನ್ನು ಒಂದು ವಾರದ ಒಳಗೆ ಪೂರೈಸಬೇಕು. ವಾಸ್ತವದಲ್ಲಿ ಇದಿನ್ನೂ ಜಾರಿಯಾಗಿಲ್ಲ. ಸಕಾಲದಡಿ ಸಲ್ಲಿಕೆಯಾದ ಅರ್ಜಿ ಸಹಾಯಕ ಕಂದಾಯ ಅಧಿಕಾರಿಯನ್ನು (ಎಆರ್‌ಒ) ತಲುಪಿದ ಬಳಿಕ ಅವರು ಕಂದಾಯ ಪರಿವೀಕ್ಷಕರಿಂದ ಸ್ಥಳ ಪರಿಶೀಲನೆ ಮಾಡಿಸಬೇಕು. ದಾಖಲೆಗಳು ಸಮರ್ಪಕವಾಗಿದ್ದರೆ ಅರ್ಜಿಯನ್ನು ಅನುಮೋದಿಸಬೇಕು. ಹೊಸ ನಿವೇಶನಕ್ಕೆ ಖಾತೆ ಮಾಡಿಸಲು ಮಾಲೀಕತ್ವ ಸಾಬೀತುಪಡಿಸುವ ದಾಖಲೆ, ಆ ಸ್ವತ್ತನ್ನು ಕ್ರಯ ಪತ್ರ, ಉಡುಗೊರೆ ಪತ್ರ ಅಥವಾ ಜಿಪಿಎ ಮೂಲಕ ಖರೀದಿಸಿದ್ದರೆ, ಅದಕ್ಕೆ ಸಂಬಂಧಿಸಿದ ದಾಖಲೆ, ಪಹಣಿ (ಆರ್‌ಟಿಸಿ), ಮ್ಯುಟೇಷನ್‌ಗೆ ಸಂಬಂಧಿಸಿದ ದಾಖಲೆ, ಋಣಭಾರ ರಾಹಿತ್ಯ ಪ್ರಮಾಣಪತ್ರ (ಇ.ಸಿ), ತಹಶೀಲ್ದಾರರ ಸಹಿ ಇರುವ ಸರ್ವೆ ನಕ್ಷೆ, ಸರ್ವೆ ಟಿಪ್ಪಣಿಗಳನ್ನು ಒದಗಿಸಬೇಕು. ಖಾತೆ ವರ್ಗಾವಣೆಗಾದರೆ ಕ್ರಯಪತ್ರ, ಇ.ಸಿ ಹಾಗೂ ಸ್ವತ್ತಿನ ನೋಂದಣಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಬೇಕು. ದಾಖಲೆಗಳು ಸಮರ್ಪಕವಾಗಿಲ್ಲ ಎಂದು ಅರ್ಜಿಯನ್ನು ತಿರಸ್ಕರಿಸಲು ಎಆರ್‌ಒಗೆ ಅಧಿಕಾರ ಇದೆ.

ಇದನ್ನೇ ನೆಪವಾಗಿಟ್ಟು ಎಆರ್‌ಒಗಳು ಕ್ಯಾತೆ ತೆಗೆದು ಖಾತೆ ಮಾಡಿಸಲು ಸತಾಯಿಸುತ್ತಾರೆ. ಅಲೆದಾಟ ತಪ್ಪಬೇಕಾದರೆ ಕೈ ಬಿಸಿ ಮಾಡಲೇಬೇಕು.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಖಾತಾ ಸೇವೆಗಳಿಗೆ ಲಕ್ಷಗಳ ಲೆಕ್ಕದಲ್ಲಿ ಲಂಚ ಪಡೆಯಲಾಗುತ್ತದೆ. ಅದೂ ಮಾರುಕಟ್ಟೆ ಮೌಲ್ಯ ಹೆಚ್ಚು ಇರುವ ಪ್ರದೇಶಗಳಲ್ಲಿ ಖಾತಾ ಸೇವೆಗಳಿಗೆ ಕೈ ಬದಲಾಯಿಸುವ ಹಣದ ಮೊತ್ತ ಮತ್ತಷ್ಟು ಹೆಚ್ಚಾಗುತ್ತದೆ. ಎಲ್ಲ ದಾಖಲೆಗಳು ಸಮರ್ಪಕವಾಗಿದ್ದರೂ ಲಂಚ ನೀಡದೇ ಖಾತಾ ಸಿಗದು' ಎಂದು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿಯೊಬ್ಬರು 'ಪ್ರಜಾವಾಣಿ'ಗೆ ವಿವರಿಸಿದರು.

'ಕೈ ಬಿಸಿ ಮಾಡದೇ ಖಾತೆ ಪಡೆಯುವುದು ಕನಸಿನ ಮಾತು. ಆದರೆ, ಪ್ರಭಾವಿಗಳ, ಜನಪ್ರತಿನಿಧಿಗಳ ಶಿಫಾರಸು ಇದ್ದರೆ, ಮೇಲಧಿಕಾರಿಗಳಿಂದ ಒತ್ತಡ ತರಿಸಿದರೆ ಕೈ ಬಿಸಿ ಮಾಡಲು ತಗಲುವ ಮೊತ್ತದಲ್ಲಿ ಸ್ವಲ್ಪ ಕಡಿಮೆ ಆಗಬಹುದು ಅಷ್ಟೇ' ಎಂದು ಬಿಬಿಎಂಪಿಯ ಕಂದಾಯ ವಿಭಾಗದ ಅಧಿಕಾರಿಯೊಬ್ಬರು ವ್ಯವಸ್ಥೆಯ ಒಳ ಮರ್ಮ ಬಿಚ್ಚಿಟ್ಟರು.

'ಬಿಬಿಎಂಪಿಯಲ್ಲಿ ಕಂದಾಯ ವಿಭಾಗದ ಉಪ ಆಯುಕ್ತರು (ಡಿ.ಸಿ) ಕಂದಾಯ ಅಧಿಕಾರಿ (ಆರ್.ಒ) ಹಾಗೂ ಎಆರ್‌ಒಗಳಿಗೆ ಮೇಲಧಿಕಾರಿ. ಆದರೆ, ಯಾವ ಎಆರ್‌ಒ ಕೂಡಾ ಬಡ್ತಿ ಪಡೆಯಲು ಬಯಸುವುದಿಲ್ಲ. ಏಕೆಂದರೆ ಬಡ್ತಿ ಪಡೆದರೆ 'ಬಯಸಿದ್ದಷ್ಟು ಗಳಿಕೆ' ಸಾಧ್ಯವಿಲ್ಲ. ಆಯಕಟ್ಟಿನ ವಾರ್ಡ್‌ಗಳಲ್ಲಿ ನೇಮಕಗೊಳ್ಳಲು ಎಆರ್‌ಒಗಳೂ ಕೂಡಾ ಲಕ್ಷಗಟ್ಟಲೆ ಹಣ ತೆರಲು ಸಿದ್ಧರಿರುತ್ತಾರೆ' ಎಂದು ಅವರು ವಿವರಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಭೂಪರಿವರ್ತನೆ ಆಗಿರದ ನಿವೇಶನಗಳು, ಮಂಜೂರಾದ ಕಟ್ಟಡ ನಕ್ಷೆ ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡಗಳಂತೂ ಕಂದಾಯ ವಿಭಾಗದ ಅಧಿಕಾರಿಗಳ ಪಾಲಿನ ಕಾಮಧೇನುಗಳಿದ್ದಂತೆ. ಇಲ್ಲಿ ಅಧಿಕಾರಿಗಳು ಬಯಸಿದಷ್ಟು ಲಂಚ ನೀಡಿದರಷ್ಟೇ ಬಿ–ವಹಿಯಲ್ಲಿ (ಬಿ–ಖಾತಾ) ನೋಂದಣಿ ಮಾಡುತ್ತಾರೆ. ಕೇಳಿದಷ್ಟು ಕಾಸು ಬಿಚ್ಚಲು ಸಿದ್ಧರಿದ್ದರೆ, ಸಮರ್ಪಕ ದಾಖಲೆಗಳಿಲ್ಲದ ನಿವೇಶನಗಳಿಗೂ ಎ–ಖಾತಾ ಮಾಡಿಕೊಡುವಂತಹ ಮಹಾನುಭಾವ ಎಆರ್‌ಒಗಳು ಬಿಬಿಎಂಪಿಯಲ್ಲಿದ್ದಾರೆ.

ರಾಜಧಾನಿಯ ಹೊರವಲಯದಲ್ಲೂ ಲಂಚ ಹೇರಳ!

ಬೆಂಗಳೂರು ಹೊರವಲಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲೂ ಖಾತಾ ಮಾಡಿಕೊಡಲು ಪಿಡಿಒಗಳು ಸಾವಿರಾರು ರೂಪಾಯಿ ಲಂಚ ಪಡೆಯುತ್ತಾರೆ ಎಂಬ ದೂರುಗಳಿವೆ.

'ಸಂಬಂಧಪಟ್ಟ ಯೋಜನಾ ಪ್ರಾಧಿಕಾರದಿಂದ ಮಂಜೂರಾತಿ ಪಡೆದ ಬಡಾವಣೆಗಳ ನಿವೇಶನಗಳ ನೋಂದಣಿಗೂ ಪಿಡಿಒಗಳು ಕನಿಷ್ಠ ₹20 ಸಾವಿರ ಲಂಚ ಪಡೆಯುತ್ತಾರೆ. ಇನ್ನು ಮಂಜೂರಾತಿ ಪಡೆಯದ ಬಡಾವಣೆಗಳ ನಿವೇಶನಗಳಿಗೆ ಖಾತಾ ಮಾಡಿಸಿಕೊಡಲು ₹ 50 ಸಾವಿರಕ್ಕಿಂತಲೂ ಅಧಿಕ ಲಂಚ ಪಡೆಯುತ್ತಾರೆ. ಇನ್ನು ದಾಖಲೆಗಳು ಸಮರ್ಪಕವಾಗಿಲ್ಲದಿದ್ದರೆ, ಲಂಚದ ಮೊತ್ತ ₹ 1 ಲಕ್ಷಕ್ಕಿಂತಲೂ ಹೆಚ್ಚಾಗುತ್ತದೆ. ಆರೇಳು ವರ್ಷಗಳ ಹಿಂದೆ ಗ್ರಾಮ ಪಂಚಾಯಿತಿಗಳಲ್ಲಿ ಒಂದೆರಡು ಸಾವಿರ ರೂಪಾಯಿಗಿಂತ ಹೆಚ್ಚು ಲಂಚ ನೀಡಬೇಕಾಗುತ್ತಿರಲಿಲ್ಲ' ಎಂದು ರಿಯಲ್ ಎಸ್ಟೇಟ್ ಉದ್ಯಮಿ ಆನಂದ ಕುಮಾರ್ ವಸ್ತುಸ್ಥಿತಿ ವಿವರಿಸಿದರು.

ಬಿಬಿಎಂಪಿ ಹೊರತಾಗಿ ರಾಜ್ಯದ ಇತರ ಮಹಾನಗರ ಪಾಲಿಕೆಗಳಲ್ಲಿ ಹಾಗೂ ಇತರ ಸ್ಥಳೀಯ ನಗರ ಸಂಸ್ಥೆಗಳಲ್ಲೂ ಖಾತಾ ಸೇವೆಗಳಿಗೆ ಲಂಚ ನೀಡಲೇಬೇಕು. ಆದರೆ, ರಾಜಧಾನಿಯಂತೆ ಇಲ್ಲಿ ಲಂಚದ ಮೊತ್ತ ಲಕ್ಷಾಂತರ ರೂಪಾಯಿಗಳಲ್ಲಿಲ್ಲ. ಸಾವಿರಾರು ರೂಪಾಯಿಗಳಲ್ಲೇ ಸೇವೆ ಲಭ್ಯ. ಪಟ್ಟಣವಾಗಿ ಪರಿವರ್ತನೆ ಆಗುತ್ತಿರುವ ಗ್ರಾಮ ಪಂಚಾಯಿತಿಗಳಲ್ಲಿ ಖಾತಾ ಸೇವೆಗೆ ಲಂಚ ನೀಡಬೇಕು. ಸಣ್ಣಪುಟ್ಟ ಗ್ರಾಮಗಳಲ್ಲಿ ಲಂಚದ ಹಾವಳಿ ತುಸು ಕಡಿಮೆ ಇದೆ.

'ಸಂದಾಯ'ವಾದರೆ ಸುಲಲಿತ 'ಕಂದಾಯ'

ಒಂದನೇ ಪುಟದಿಂದ

ಕಂದಾಯ ಇಲಾಖೆಯಲ್ಲಿ ಆಯಕಟ್ಟಿನ ಹುದ್ದೆಗಳಿಗೆ ಕೋಟಿಗಟ್ಟಲೆ ರೂಪಾಯಿ ಕೊಟ್ಟು ವರ್ಗಾವಣೆ ಮಾಡಿಸಿಕೊಂಡು ಬರುತ್ತಿರುವುದು ಹಲವು ವರ್ಷಗಳಿಂದ ನಡೆಯುತ್ತಿದೆ. ಹುದ್ದೆಗೆ ಬರುವುದಕ್ಕೆ ಕೊಟ್ಟ ಮೊತ್ತದ ಹತ್ತರಷ್ಟನ್ನು ಹೋಗುವ ಮುನ್ನ ಜೇಬಿಗಿಳಿಸುವ ಧಾವಂತದಲ್ಲೇ ಇಂಥ ಅಧಿಕಾರಿಗಳು ಇರುತ್ತಾರೆ. ಕೆಲಸ ಚಿಕ್ಕದಿರಲಿ, ದೊಡ್ಡದೇ ಇರಲಿ, ನಿಗದಿಯಾದ ಮೊತ್ತದ 'ಪ್ಯಾಕೇಜ್' ತಲುಪದೇ ಇದ್ದರೆ ಕಡತದ ಮೇಲಿನ 'ಕೆಂಪುಪಟ್ಟಿ' ಬಿಗಿಯಾಗಿಯೇ ಇರುತ್ತದೆ ಎಂಬ ಮಾತು ಕಂದಾಯ ಇಲಾಖೆಯ ವಿವಿಧ ಕಚೇರಿಗಳ ಬಳಿ ಕಿವಿಗೆ ಅಪ್ಪಳಿಸುತ್ತದೆ.

ನೋಟಿನ ಬದಲಿಗೆ ಜಮೀನಿನಲ್ಲೇ ಪಾಲು!: ನಗರ ಪ್ರದೇಶಗಳಲ್ಲಿ ಜಾನುವಾರುಗಳಿಗಾಗಿ ಕಾಯ್ದಿಟ್ಟ ಸರ್ಕಾರಿ ಗೋಮಾಳವನ್ನು ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡದ (ಎಸ್.ಟಿ) ಭೂರಹಿತರಿಗೆ ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶವಿದೆ. ಈ ಪ್ರಕ್ರಿಯೆಯಲ್ಲಿ ದೊಡ್ಡ ಮೊತ್ತದ ಹಣ ಕೈ ಬದಲಾಗುತ್ತಿತ್ತು. ಈಗ ಅಧಿಕಾರಿಗಳು ಮಂಜೂರಾದ ಜಮೀನಿನಲ್ಲೇ ಪಾಲು ಪಡೆಯುತ್ತಿದ್ದಾರೆ ಎಂಬ ಆರೋಪ ಕೇಳಿಬರುತ್ತಿದೆ.

'ಬೆಂಗಳೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ನಕಲಿ ದಾಖಲೆ ಸೃಷ್ಟಿಸಿ ಪರಿಶಿಷ್ಟರ ಹೆಸರಿನಲ್ಲಿ ಜಮೀನು ಮಂಜೂರು ಮಾಡಲಾಗುತ್ತಿದೆ. ಮಂಜೂರಾದ ಜಮೀನಿನಲ್ಲಿ ಒಂದಷ್ಟು ಭಾಗವನ್ನು ಅಧಿಕಾರಿಗಳ ಕಡೆಯವರಿಗೆ 'ಲಂಚ'ದ ರೂಪದಲ್ಲೇ ವರ್ಗಾಯಿಸುವ ವ್ಯವಸ್ಥೆಯೂ ಚಾಲ್ತಿಯಲ್ಲಿದೆ' ಎಂದು ಹೇಳುತ್ತಾರೆ ಸರ್ಕಾರಿ ಜಮೀನುಗಳ ಕಬಳಿಕೆ ಪ್ರಕರಣಗಳ ಕುರಿತು ವಿಚಾರಣೆ ನಡೆಸುತ್ತಿರುವ ವಿಧಾನಸಭೆಯ ಸದನ ಸಮಿತಿ ಸದಸ್ಯರಾಗಿರುವ ಎ.ಟಿ. ರಾಮಸ್ವಾಮಿ.

ನೋಂದಣಿ: 'ಟೋಕನ್' ಹಾವಳಿ

ಕಂದಾಯ ಇಲಾಖೆಯ ಮತ್ತೊಂದು ಪ್ರಮುಖ ಭಾಗವಾಗಿರುವ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲೂ ಕಾಂಚಾಣದ ಸದ್ದಿಲ್ಲದೇ ಕೆಲಸ ಆಗುವುದಿಲ್ಲ. ಉಪ ನೋಂದಣಿ ಕಚೇರಿಯೊಳಗೆ ಕಾಲಿಟ್ಟರೆ ಮಧ್ಯವರ್ತಿಗಳ ಮೂಲಕ 'ಟೋಕನ್' ಖರೀಸದೇ ಕೆಲಸ ಆಗುವುದಿಲ್ಲ ಎಂಬ ಸ್ಥಿತಿ ಇದೆ.

ಖರೀದಿ ಒಪ್ಪಂದ, ಕ್ರಯಪತ್ರ ನೋಂದಣಿಗೆ ಜಮೀನಿನ ಮೌಲ್ಯದ ಶೇಕಡಾವಾರು 'ಕಾಣಿಕೆ' ಸಂದಾಯ ಕಡ್ಡಾಯ. ಲಂಚ ಕೊಡಲು ನಿರಾಕರಿಸಿ, ಕಾನೂನು ಪಾಲನೆಗೆ ಆಗ್ರಹಿಸುವ ಜನರ ಕಡತ ವಿಲೇವಾರಿಗೆ 'ಸರ್ವರ್ ಡೌನ್' ಪೆಡಂಭೂತದಂತೆ ಕಾಡುತ್ತದೆ.

'ಉಪ ನೋಂದಣಿ ಕಚೇರಿಗಳಲ್ಲಿ ಹಣ ಕೊಟ್ಟವರಿಗೆ ಮೊದಲೇ 'ಟೋಕನ್'ಗಳನ್ನು ತಲುಪಿಸಲಾಗುತ್ತದೆ. ಅವರಿಗಾಗಿ ಆದ್ಯತೆಯ ಮೇಲೆ ಕೆಲಸಗಳು ಆಗುತ್ತವೆ. ನಿಯಮದಂತೆ ಕೆಲಸ ಆಗಲಿ ಎಂದು ಬಯಸಿದರೆ ಕಾದು ಕಾದು ಹೈರಾಣಾಗಬೇಕಾಗುತ್ತದೆ. ಇಷ್ಟವಿಲ್ಲದಿದ್ದರೂ ಬೇಸತ್ತು ಲಂಚ ಕೊಟ್ಟೇ ಕೆಲಸ ಮಾಡಿಸಬೇಕಾದ ಅನಿವಾರ್ಯತೆಯನ್ನು ಈ ಭ್ರಷ್ಟ ಕೂಟ ನಿರ್ಮಿಸಿದೆ' ಎನ್ನುತ್ತಾರೆ ನೋಂದಣಿ ಇಲಾಖೆಯ ಕಚೇರಿಗಳಲ್ಲಿ ಲಂಚದ ಹಾವಳಿಯನ್ನು ಕಂಡಿರುವ ನಾಗರಿಕರು. 'ಕಾಂಚಾಣದ ಕುಣಿತ'ಕ್ಕೆ ತಲೆ ಬಾಗಿ ಯಾರದ್ದೋ ಸ್ವತ್ತನ್ನು ಇನ್ಯಾರಿಗೋ ನೋಂದಣಿ ಮಾಡುವುದು, ನಕಲಿ ದಾಖಲೆಗಳ ಆಧಾರದಲ್ಲಿ ಆಸ್ತಿ ನೋಂದಣಿ, ನ್ಯಾಯಾಲಯಗಳ ಆದೇಶಗಳನ್ನು ಉಲ್ಲಂಘಿಸಿ ನೋಂದಣಿ ಮಾಡುವುದು ಸಲೀಸಾಗಿ ನಡೆದುಹೋಗುತ್ತದೆ.

ಇಲ್ಲಿ 'ನ್ಯಾಯ' ಮಾರಾಟಕ್ಕಿದೆ!

ಜಮೀನು ಮಂಜೂರಾತಿ, ಭೂ ಒಡೆತನಕ್ಕೆ ಸಂಬಂಧಿಸಿದ ದಾಖಲೆಗಳ ನೈಜತೆಯನ್ನು ನಿರ್ಣಯಿಸುವ ಅಧಿಕಾರ ತಹಶೀಲ್ದಾರ್, ಉಪ ವಿಭಾಗಾಧಿಕಾರಿ, ವಿಶೇಷ ಜಿಲ್ಲಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳಿಗೆ ಇದೆ. ಬೆಂಗಳೂರು ನಗರದಲ್ಲಿ ವಿಶೇಷ ಜಿಲ್ಲಾಧಿಕಾರಿಗಳಿದ್ದರೆ, ಉಳಿದ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳೇ ಈ ಅಧಿಕಾರ ಚಲಾಯಿಸುತ್ತಾರೆ. ಅರೆ ನ್ಯಾಯಿಕ ಅಧಿಕಾರವೂ ಕಂದಾಯ ಇಲಾಖೆಯ ಕಚೇರಿಗಳಲ್ಲಿ 'ಬಿಕರಿ'ಗೆ ಲಭ್ಯ!

ತಹಶೀಲ್ದಾರ್, ಉಪ ವಿಭಾಗಾಧಿಕಾರಿ, ವಿಶೇಷ ಜಿಲ್ಲಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ ಭೂ ದಾಖಲೆಗಳ ನೈಜತೆಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸಲಾಗುತ್ತದೆ. ಈ ಆದೇಶಗಳಿಗೂ ಎಕರೆ ಲೆಕ್ಕದಲ್ಲಿ ದರ ನಿಗದಿಯಾಗುತ್ತದೆ. ಒಂದೇ ಪ್ರಕರಣಕ್ಕೆ ಎರಡು ಆದೇಶಗಳು ಸಿದ್ಧವಾಗಿರುತ್ತವೆ. ಹಣ ಕೊಟ್ಟರೆ ಒಂದು ಆದೇಶ ಹೊರಬರುತ್ತದೆ. ಹಣ ಕೊಡದಿದ್ದರೆ ಇನ್ನೊಂದು ಆದೇಶ ಪ್ರಕಟವಾಗುತ್ತದೆ. ದಲ್ಲಾಳಿಗಳ ಮೂಲಕವೇ 'ನ್ಯಾಯ' ಮಾರಾಟವಾಗುತ್ತಿದೆ.

ಆನೇಕಲ್‌ನ ಕೂಡ್ಲು ಗ್ರಾಮದ ಜಮೀನು ಮಾಲೀಕತ್ವಕ್ಕೆ ಸಂಬಂಧಿಸಿದ ವ್ಯಾಜ್ಯವೊಂದರಲ್ಲಿ ಭೂ ಮಾಲೀಕರ ಪರ ಆದೇಶ ನೀಡಲು ₹ 5 ಲಕ್ಷ ಲಂಚ ಪಡೆಯುತ್ತಿದ್ದ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ವ್ಯವಸ್ಥಾಪಕ ಮತ್ತು ನ್ಯಾಯಾಲಯ ವಿಭಾಗದ ಸಹಾಯಕನನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶನಿವಾರ ಬಂಧಿಸಿದೆ. ಈ ಪ್ರಕರಣ ಕಂದಾಯ ಇಲಾಖೆಯಲ್ಲಿ ನಡೆಯುತ್ತಿರುವ 'ನ್ಯಾಯದ ಮಾರಾಟ'ವನ್ನು ಬಯಲುಗೊಳಿಸಿದೆ.

ಕಂದಾಯ ಅಕ್ರಮ: ಅಭಿಪ್ರಾಯಗಳು

ಪಾರದರ್ಶಕತೆ ಹೆಚ್ಚಲಿ



ನಕಲಿ ದಾಖಲೆಗಳನ್ನು ಸೃಷ್ಟಿಸಿ ಮನೆ, ನಿವೇಶನ, ಜಮೀನನ್ನು ನಾಲ್ಕೈದು ಮಂದಿಯ ಹೆಸರಿನಲ್ಲಿ ನೋಂದಣಿ ಮಾಡಿಸುವ ಏಜೆಂಟರು ಮತ್ತು ಅಧಿಕಾರಿಗಳ ಜಾಲ ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿದೆ. ಇಲ್ಲಿನ ಕೆಲಸಗಳಲ್ಲಿ ಪಾರದರ್ಶಕತೆ ತರುವ ಜೊತೆಗೆ, ಭ್ರಷ್ಟಾಚಾರಕ್ಕೆ ಸಂಪೂರ್ಣ ಕಡಿವಾಣ ಹಾಕಬೇಕು. ಕಚೇರಿಗಳಲ್ಲಿ ಅಧಿಕಾರಿಗಳಿಗೆ ಲಂಚ ಕೊಟ್ಟರಷ್ಟೇ ಕೆಲಸವಾಗುತ್ತದೆ ಎಂಬ ಮನಸ್ಥಿತಿಯಿಂದ ಜನರು ಹೊರಬರಬೇಕು. ಸಮಯದ ಮಿತಿಯಲ್ಲಿ ಕೆಲಸ ಮಾಡದ ಅಧಿಕಾರಿಗಳನ್ನು ಪ್ರಶ್ನಿಸಬೇಕು. ಆಗ ಬದಲಾವಣೆ ಸಾಧ್ಯ.

ಲತಾ, ಗೃಹಿಣಿ, ಹುಬ್ಬಳ್ಳಿ

ದಲ್ಲಾಳಿಗಳ ಹಾವಳಿ ತಡೆಯಿರಿ



ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗುವ ಜನರನ್ನು ಮೊದಲು ಎದುರುಗೊಳ್ಳುವುದೇ ಏಜೆಂಟರು. ಬಹುತೇಕ ಅಧಿಕಾರಿಗಳು ತಮಗೆ ಲಂಚ ಸಂಗ್ರಹಿಸಿ ಕೊಡುವ ಏಜೆಂಟರ ಕೆಲಸಗಳನ್ನು ಮಾಡುವುದೇ ಹೆಚ್ಚು. ನೋಂದಣಿ ಶುಲ್ಕದ ವ್ಯವಹಾರಕ್ಕಿಂತ ಲಂಚದ ವ್ಯವಹಾರವೇ ಇಲ್ಲಿ ಹೆಚ್ಚು. ಮಧ್ಯಮ ಮತ್ತು ಬಡವರು ಕೆಲಸ ಮಾಡಿಸಿಕೊಳ್ಳಬೇಕಾದರೆ ಹರಸಾಹಸಪಡಬೇಕು. ಇಲ್ಲಿನ ಭ್ರಷ್ಟಾಚಾರ ತಡೆಗೆ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಮಲ್ಲಮ್ಮ ಯಾಟಗಲ್, ಉಪನ್ಯಾಸಕಿ, ಹುಬ್ಬಳ್ಳಿ

ಲಂಚಕ್ಕೂ ಇದೆ ಸಂಕೇತ



ದಾವಣಗೆರೆಯ ಸರ್ಕಾರಿ ಕಚೇರಿಗಳಲ್ಲಿ ಹಿಂದೆ ಬಹಿರಂಗವಾಗಿ ಲಂಚ ನೀಡಲಾಗುತ್ತಿತ್ತು. ಈಗ ಆಂತರಿಕವಾಗಿ ನಡೆಯುತ್ತಿದೆ. ಕಡತಗಳಲ್ಲಿಯೇ ಲಂಚದ ಸಂಕೇತಗಳು ಇರುತ್ತವೆ. ಕಡತದ ಕೊನೆಯಲ್ಲಿ ಸಣ್ಣದಾಗಿ 'ಗುಣಿಸು' ಚಿಹ್ನೆ ಇದ್ದರೆ ಲಂಚ ಬಂದಿಲ್ಲ ಎಂದರ್ಥ, 'ಸ್ಟಾರ್' ಇಲ್ಲವೇ 'ಪ್ಲಸ್' ಮಾರ್ಕ್ ಇದ್ದರೆ ಕಡತ ಮುಂದಕ್ಕೆ ಹೋಗುತ್ತದೆ. ಸಬ್‌ರಿಜಿಸ್ಟ್ರಾರ್ ಕಚೇರಿ, ಪಾಲಿಕೆ, ಕಂದಾಯ ಕಚೇರಿಗಳಲ್ಲಿ ಏಜೆಂಟ್‌ರನ್ನೇ ಬುಕ್ ಮಾಡಿಕೊಳ್ಳಲಾಗಿದೆ. ಏಜೆಂಟರ ಮೂಲಕ ಹೋದರೆ ಕೆಲಸ ಬೇಗ ಆಗುತ್ತದೆ. ಕೆಲ ಸೇವಾ ಸಿಂಧು ಕೇಂದ್ರಗಳನ್ನೇ ಬುಕ್ ಮಾಡಿಕೊಳ್ಳಲಾಗಿದೆ. ಅವುಗಳ ಮೂಲಕ ಅರ್ಜಿ ಸಲ್ಲಿಸಿದರೆ ಕೆಲಸ ಬೇಗನೆ ಆಗುತ್ತದೆ. ಇಲ್ಲದಿದ್ದರೆ ಅನಗತ್ಯವಾಗಿ ದಾಖಲೆ ಕೇಳುತ್ತಾರೆ. ಲಂಚ ಕೊಟ್ಟರೆ ದಾಖಲೆಗಳನ್ನು ಕೇಳುವುದಿಲ್ಲ.

ಎಂ.ಜಿ. ಶ್ರೀಕಾಂತ್, ಆರ್‌ಟಿಐ ಕಾರ್ಯಕರ್ತ, ದಾವಣಗೆರೆ

ತಿಂಗಳುಗಟ್ಟಲೆ ಅಲೆಯಬೇಕು



ಕಂದಾಯ ಇಲಾಖೆಯಲ್ಲಿ ಕೆಲಸಗಳು ಆಮೆಗತಿಯಲ್ಲಿ ನಡೆಯುತ್ತವೆ. ಪೋಡಿ, ಸರ್ವೆಗಾಗಿ ತಿಂಗಳುಗಟ್ಟಲೆ ಕಾಯಬೇಕು. ಖಾತೆ, ಪಹಣಿಗಳ ವಿಚಾರದಲ್ಲಿಯೂ ಇದೇ ರೀತಿ ಇದೆ. ಇತ್ತೀಚೆಗೆ ಸರ್ಕಾರ 'ಕಂದಾಯ ದಾಖಲೆಗಳು ಮನೆ ಬಾಗಿಲಿಗೆ' ಎಂದು ಯೋಜನೆಯನ್ನು ಜಾರಿಗೊಳಿಸಿತು. ಆದರೆ ಆ ಯೋಜನೆ ಬರಿ ಪ್ರಚಾರಕ್ಕೆ ಮಾತ್ರ ಸೀಮಿತವಾಗಿದೆ. ಕಂದಾಯ ದಾಖಲೆಗಳಿಗಾಗಿ ರೈತರು ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ತಾಲ್ಲೂಕು ಕಚೇರಿ, ಉಪವಿಭಾಗಾಧಿಕಾರಿ ಕಚೇರಿಗಳಿಗೆ ಅಲೆದಾಡಬೇಕಾಗಿದೆ. ಇಲ್ಲಿ ತುಂಬಿರುವಷ್ಟು ಭ್ರಷ್ಟಾಚಾರ ಯಾವ ಇಲಾಖೆಯಲ್ಲೂ ಇಲ್ಲ.

ಸುಮನಾ, ಗುಂಡ್ಲಹಳ್ಳಿ, ಗೌರಿಬಿದನೂರು, ಚಿಕ್ಕಬಳ್ಳಾಪುರ

'ದಲ್ಲಾಳಿಗಳ ಕೈವಶ'



ಕಂದಾಯ ಇಲಾಖೆಯ ಬಹುತೇಕ ಕಚೇರಿಗಳು ದಲ್ಲಾಳಿಗಳ ಕೈವಶವಾಗಿವೆ. ಯಾವುದೇ ಪ್ರಮಾಣಪತ್ರಕ್ಕೆ, ದಾಖಲೆಗಳ ತಿದ್ದುಪಡಿಗೆ ಅಧಿಕಾರಿಗಳಿಗಿಂತ ದಲ್ಲಾಳಿಗಳನ್ನು ಸಂಪರ್ಕಿಸುವುದೇ ಉತ್ತಮ ಎಂಬ ಸ್ಥಿತಿಯಿದೆ. ಏಜೆಂಟರ ಮೂಲಕ ಬಂದರೆ, ನಿಮ್ಮ ಕೆಲಸ ಬೇಗ ಆಗುವುದೆಂದು ಅಧಿಕಾರಿಗಳೇ ಹೇಳುತ್ತಾರೆ. ಕಮಿಷನ್‌ನಲ್ಲಿ ಅವರದ್ದೂ ಪಾಲು ಇರುತ್ತದೆ ಎಂಬುದಕ್ಕೆ ಇದೇ ಸಾಕ್ಷಿ. ಲಂಚ ಪಡೆಯಲು ಕಂಡುಕೊಂಡ ಪರೋಕ್ಷ ಮಾರ್ಗವಿದು. ಕಮಿಷನ್ ಕೊಡದಿದ್ದರೆ ತಿಂಗಳುಗಟ್ಟಲೇ ಕಚೇರಿಗೆ ಓಡಾಡಬೇಕು. ದಾಖಲೆಗಳು ಸಿಗುತ್ತವೆಯೋ ಇಲ್ಲವೋ ಎಂಬ ಭಯ ಮತ್ತು ಸಮಯದ ಅಭಾವದ ಕಾರಣ ಕೆಲವರು ಲಂಚ ನೀಡಲು ಮುಂದಾಗುತ್ತಾರೆ. ಜನರ ಅಸಹಾಯಕತೆಯೇ ಅಧಿಕಾರಿಗಳ ಬಂಡವಾಳವಾಗಿದೆ.

ಪೂಜಾರಾಣಿ ಆರ್.ಕೆ, ವಿದ್ಯಾರ್ಥಿನಿ, ಸೇಡಂ, ಕಲಬುರಗಿ

'ಬೇಲಿ ಎದ್ದು ಹೊಲ ಮೇಯುತ್ತಿದೆ'



ನಾಡಕಚೇರಿಗಳಲ್ಲಿ ಜಾತಿ- ಆದಾಯ ಪ್ರಮಾಣ ಪತ್ರಕ್ಕೆ ಅರ್ಜಿ ಹಾಕುವಾಗ ಪ್ರಾರಂಭವಾಗುವ ಲಂಚಾವತಾರ ಜಿಲ್ಲಾಧಿಕಾರಿ ಕಚೇರಿಯವರೆಗೂ ಹರಡಿಕೊಂಡಿದೆ. ಗ್ರಾಮ ಲೆಕ್ಕಾಧಿಕಾರಿಗಳು ಪೌತಿ ಖಾತೆ, ಖಾತೆ ಬದಲಾವಣೆ, ಆರ್‌ಟಿಸಿ ಒಗ್ಗೂಡಿಸಲು ₹ 5-6 ಸಾವಿರ ಲಂಚ ಕೇಳುತ್ತಾರೆ. ಲಂಚ ಕೊಡದಿದ್ದರೆ ಕುಂಟು ನೆಪ ಹೇಳಿ ಅಲೆಸುತ್ತಾರೆ. ಉಪನೋಂದಣಾಧಿಕಾರಿಗಳು ಲಂಚ ಕೇಳುವುದಕ್ಕಾಗಿಯೇ ಮಧ್ಯವರ್ತಿಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಪತ್ರ ಬರಹಗಾರರು 'ಸಾಹೇಬರಿಗೆ ಇಷ್ಟು ಕೊಡಲೇಬೇಕು' ಎಂದು ಕೇಳುತ್ತಾರೆ. ಲಂಚ ಕೊಟ್ಟರೆ ಕ್ಷಣಾರ್ಧದಲ್ಲಿ ಕೆಲಸ ಆಗುತ್ತೆ. ಕಂದಾಯ ಇಲಾಖೆಯ ಲೋಪಗಳನ್ನು ಜಿಲ್ಲಾಧಿಕಾರಿಯ ಗಮನಕ್ಕೆ ತಂದರೂ ಪ್ರಯೋಜನ ಇಲ್ಲ. ಅವರೂ ಭ್ರಷ್ಟಾಚಾರದ ಭಾಗವಾಗಿದ್ದಾರೆ. ಕಂದಾಯ ಇಲಾಖೆ ಅಧಿಕಾರಿಗಳು ಬಡವರ ಕಣ್ಣಲ್ಲಿ ನೀರು ಹಾಕಿಸುತ್ತಾರೆ. ಕಂದಾಯ ಇಲಾಖೆಯಲ್ಲಿ ಬೇಲಿಯೇ ಎದ್ದು ಹೊಲ ಮೇಯುವ ಸ್ಥಿತಿ ಇದೆ.

ಪದ್ಮಾವತಿ, ರೈತ ಮಹಿಳೆ, ಕೆರೆಮೇಗಳದೊಡ್ಡಿ, ಮದ್ದೂರು

ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಆರೋಪ


ಇಸ್ಲಾಂ, ಕ್ರಿಶ್ಚಿಯನ್ ಧರ್ಮದಿಂದ ಅಪಾಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಧಾರ್ಮಿಕ ವೈವಿಧ್ಯವನ್ನು ಒಪ್ಪದ ಸ್ವಾರ್ಥಪ್ರೇರಿತ ಚಿಂತನೆಯ ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮದಿಂದ ದೇಶಕ್ಕೆ ಅಪಾಯ ಎದುರಾಗಿದೆ. ವಾರಾಣಸಿಯ ವಿಶ್ವನಾಥ ದೇಗುಲದ ಶಿವಲಿಂಗದ ಸ್ಥಿತಿಗೆ ಮರುಗುವಂತಾಗಿದೆ' ಎಂದು ಹರಿಹರಪುರದ ಶಾರದಾ ಲಕ್ಷ್ಮೀನರಸಿಂಹಪೀಠದ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಅಭಿಪ್ರಾಯಪಟ್ಟರು. ತಾಲ್ಲೂಕಿನ ಗೋನೂರು ಗ್ರಾಮದ ರಾಜರಾಜೇಶ್ವರಿ ದೇಗುಲದಲ್ಲಿ ಭಾನುವಾರ ನಡೆದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

'ಜಗತ್ತಿನಲ್ಲಿ ಅತ್ಯಂತ ಪ್ರಾಚೀನವಾದುದು ಭಾರತೀಯ ಸಂಸ್ಕೃತಿ. ಧಾರ್ಮಿಕ ವೈವಿಧ್ಯದ ಸಂಸ್ಕೃತಿಯನ್ನು ಒಪ್ಪಿಕೊಳ್ಳದಿರುವುದು ವಿದೇಶಿ ಸಂಸ್ಕೃತಿ. ದೇವರೊಬ್ಬನೇ ಎಂದು ಪ್ರತಿಪಾದಿಸುವ ಸಂಕುಚಿತ ಮನೋಭಾವದವರಿಂದ ಮತಾಂತರ, ಹಿಂಸೆ, ರಕ್ತಪಾತದಂತಹ ದಾಳಿಗೆ ಭಾರತ ಗುರಿಯಾಗುತ್ತಿದೆ. ಭಾರತೀಯ ಸಂಸ್ಕೃತಿಯ ಮೇಲೆ ಬಾಹ್ಯ ಮತ್ತು ಆಂತರಿಕ ದಾಳಿಗಳು ನಡೆಯುತ್ತಿವೆ' ಎಂದರು.

'ಶ್ರೀರಾಮ, ಬುದ್ಧ ಹಾಗೂ ಜೈನ ಧರ್ಮದ ತೀರ್ಥಂಕರರು ಮೂಲತಃ ಸೂರ್ಯವಂಶದವರು. ಒಬ್ಬೊಬ್ಬರು ಒಂದೊಂದು ಮಾರ್ಗದಲ್ಲಿ ದೇವರನ್ನು ಕಂಡುಕೊಂಡಿದ್ದಾರೆ. ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳು ಮಾತ್ರ ಭಾರತವನ್ನು ಸರ್ವನಾಶ ಮಾಡಲು ಹವಣಿಸಿವೆ. ಶತಮಾನಗಳಿಂದ ದೇಶದ ಮೇಲೆ ದಾಳಿ ನಡೆಸಿ ಭಯೋತ್ಪಾದನೆ ನಡೆಸಿವೆ. ಈ ಬಗ್ಗೆ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದು ಹೇಳಿದರು.



ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ

> **ವಾರಾಣಸಿಯ ಶಿವಲಿಂಗದ ಬಗೆಗೆ ಆಕ್ಷೇಪಾರ್ಹವಾಗಿ ಮಾತನಾಡುವುದು ತಪ್ಪು. ಹಿಂದೂ ದೇಗುಲಗಳ ರಕ್ಷಣೆಗೆ ಬಂದಿರುವ ಪ್ರಧಾನಿ ನರೇಂದ್ರ ಮೋದಿ ಶಿವಲಿಂಗ ಕಾಯಲಿದ್ದಾರೆ.**
> **ಶಿವಲಿಂಗಾನಂದ ಸ್ವಾಮೀಜಿ,** ಕಬೀರಾನಂದ ಆಶ್ರಮ, ಚಿತ್ರದುರ್ಗ

ಕರ್ನಾಟಕದ ಚಿರಾಪುಂಜಿ ಇನ್ನು ಆಗುಂಬೆಯಲ್ಲ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಅತಿ ಹೆಚ್ಚು ಮಳೆಯಾಗುವ ಪ್ರದೇಶಗಳ ಜಿಲ್ಲೆ ಎನಿಸಿಕೊಂಡಿದ್ದ ಶಿವಮೊಗ್ಗ ಆ ಪಟ್ಟವನ್ನು ಉಡುಪಿಗೆ ಬಿಟ್ಟುಕೊಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ. ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ದತ್ತಾಂಶದ ಪ್ರಕಾರ 2015ರಿಂದ 2021ರ ಅವಧಿಯಲ್ಲಿ ಐದು ವರ್ಷ ಉಡುಪಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ರಾಜ್ಯದಲ್ಲೇ ಅತಿ ಹೆಚ್ಚು ಮಳೆ ದಾಖಲಾಗಿದೆ.

ಕರ್ನಾಟಕದ ಚಿರಾಪುಂಜಿ ಎಂದೇ ಖ್ಯಾತವಾಗಿದ್ದ, ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆ ಆ ಸ್ಥಾನವನ್ನು ಕಳೆದುಕೊಳ್ಳುವಂತೆ ಪ್ರಕೃತಿ ಬದಲಾಗಿರುವುದರ ಸೂಚನೆ ಇದು.

ಉಡುಪಿ ತಾಲ್ಲೂಕಿನ ಬೈರಂಪಳ್ಳಿಯಲ್ಲಿ 2016ರಲ್ಲಿ 59.16 ಸೆಂ.ಮೀ. ಮಳೆಯಾಗಿತ್ತು. ಆ ವರ್ಷ ರಾಜ್ಯದಲ್ಲೇ ದಾಖಲಾದ ಅತಿ ಹೆಚ್ಚು ಮಳೆ ಇದು. 2017ರಲ್ಲಿ ಕಾರ್ಕಳ ತಾಲ್ಲೂಕಿನ ಶಿರ್ಲಾಲುವಿನಲ್ಲಿ ಅತಿ ಹೆಚ್ಚು ಅಂದರೆ 69.39 ಸೆಂ.ಮೀ. ಮಳೆಯಾಯಿತು. 2019ರಲ್ಲಿ ಹೆಬ್ರಿಯಲ್ಲಿ 93.40 ಸೆಂ.ಮೀ.ನಷ್ಟು ಮಳೆ ಸುರಿದು, ಆ ವರ್ಷದ ಅಧಿಕ ಮಳೆಯಾದ ಸ್ಥಳ ಎಂದೆನಿಸಿಕೊಂಡಿತು. 2020ರಲ್ಲಿ ಉಡುಪಿಯ ಇನ್ನಂಜೆಯಲ್ಲಿ ಅಧಿಕ, ಅಂದರೆ 79.88 ಸೆಂ.ಮೀ. ಮಳೆ ಸುರಿಯಿತು. ಅದರ ಮರುವರ್ಷ ಕಾರ್ಕಳದ ಮುದ್ರಾಡಿಯಲ್ಲಿ 79.49 ಸೆಂ.ಮೀ ನಷ್ಟು ಅಧಿಕ ಮಳೆಯಾಗಿತ್ತು.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಕೆರೆ ಎಂಬಲ್ಲಿ 52.99 ಸೆಂ.ಮೀ. ಮಳೆ 2015ರಲ್ಲಿ ದಾಖಲಾಗಿದ್ದು, ಇದು ರಾಜ್ಯದಲ್ಲೇ ಹೆಚ್ಚು. ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ಕೊಡಕಣಿಯಲ್ಲಿ 2018ರಲ್ಲಿ 79.78 ಸೆಂ.ಮೀ. ಮಳೆ ದಾಖಲಾಗಿತ್ತು. ಈ ಎರಡೂ ಜಿಲ್ಲೆಗಳೂ ಪಶ್ಚಿಮ ಘಟ್ಟದ ಭಾಗಗಳೇ.

2015ರಿಂದ 2021ರ ಅವಧಿಯಲ್ಲಿ ಆಗುಂಬೆಗಿಂತ ನಾಲ್ಕು ಬಾರಿ ಹೊಸನಗರ ತಾಲ್ಲೂಕಿನ ಹುಲಿಕಲ್‌ನಲ್ಲಿ ಅತಿ ಹೆಚ್ಚು ಮಳೆಯಾಗಿದೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿಜ್ಞಾನಿ ಟಿ.ವಿ. ರಾಮಚಂದ್ರ ಅವರ ಪ್ರಕಾರ 'ಏಕವಿಧದ ಮರಗಳನ್ನು ಬೆಳೆಸುವ ಸಂಸ್ಕೃತಿ ಹೆಚ್ಚಾಗಿರುವುದು ಹಾಗೂ ಅರಣ್ಯ ಸಂಪತ್ತು ಕ್ಷೀಣಿಸಿರುವುದೇ ಮಳೆ ಪ್ರಮಾಣದ ಈ ಏರುಪೇರಿಗೆ ಕಾರಣ. ಕರ್ನಾಟಕದಲ್ಲಿ ಒಟ್ಟು ನಿರೀಕ್ಷಿತ ಶೇ 33ರಷ್ಟು ಅರಣ್ಯ ಪ್ರದೇಶ ಇರಬೇಕಿತ್ತು. ಆದರೆ ಇರುವುದು ಶೇ 20ರಷ್ಟು ಮಾತ್ರ. ಪಶ್ಚಿಮ ಘಟ್ಟದ ಕಾಡುಗಳ ಪ್ರಮಾಣ ಶೇ 18ರಷ್ಟು ಮಾತ್ರ ಇದೆ. ಒಂದು ದಶಕದಲ್ಲಿ ಶೇ 10ರಷ್ಟು ಅರಣ್ಯ ಪ್ರದೇಶ ಕಡಿಮೆಯಾಗಿದೆ.'

ಮುಂದಿನ ತಲೆಮಾರಿನವರು ಮಳೆ ಪ್ರಮಾಣದ ಏರುಪೇರಿನಿಂದಾಗಿ ನೀರಿನ ಸಮಸ್ಯೆ ಎದುರಿಸಲಿದ್ದಾರೆ. ಅಕಾಲಿಕ ಮಳೆಯಿಂದ ಕೃಷಿ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ. ಮೂರ್ನಾಲ್ಕು ತಿಂಗಳಲ್ಲಿ ಸುರಿಯಬೇಕಾದ ಮಳೆ ಕೆಲವು ಕಡೆ ಮೂರ್ನಾಲ್ಕು ದಿನಗಳಲ್ಲೇ ಸುರಿದು ನೆರೆ ಉಂಟುಮಾಡುತ್ತಿದೆ. ಇದು ಬೆಳೆಗಳ ಪ್ರಮಾಣ ಕುಸಿಯಲು ಕಾರಣವಾಗಲಿದೆ. ಶ್ರೀಲಂಕಾದಂತೆ ಬೇರೆ ದೇಶಗಳ ಮೇಲೆ ಆಹಾರ ಉತ್ಪನ್ನಗಳಿಗೆ ಅವಲಂಬಿಸಬೇಕಾದ ಪರಿಸ್ಥಿತಿ ಭಾರತಕ್ಕೂ ಮುಂದೆ ತಲೆದೋರಬಹುದು ಎಂದು ಅವರು ಎಚ್ಚರಿಸಿದರು.

ಇತ್ತೀಚಿನ ವರ್ಷಗಳಲ್ಲಿ ಜಗತ್ತಿನ ವಿವಿಧೆಡೆ ಮಳೆಯ ಏರುಪೇರಿನ ಸಮಸ್ಯೆ ಉಲ್ಬಣಿಸಿದೆ. ಕಳೆದ ವರ್ಷ ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿನ ಮಳೆ ಪ್ರಮಾಣ ಕರ್ನಾಟಕದಲ್ಲಿ ಶೇ 60ರಷ್ಟು ಕಡಿಮೆಯಾಗಿದೆ. ಮಳೆ ಸುರಿಯುವ ಹದದಲ್ಲಿ ವ್ಯಾಪಕವಾದ ಬದಲಾವಣೆ ಆಗಿರುವುದಕ್ಕೆ ಇದೇ ಉದಾಹರಣೆ ಎನ್ನುತ್ತಾರೆ ಹವಾಮಾನ ತಜ್ಞ ಹಾಗೂ ಪಶ್ಚಿಮ ಘಟ್ಟ ಕಾರ್ಯಪಡೆಯ ಮಾಜಿ ಸದಸ್ಯ ಬಿ.ಎಂ. ಕುಮಾರಸ್ವಾಮಿ.

ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಹಕ್ಕೊತ್ತಾಯ

ಮಡಿವಾಳರ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ಹೊರ ವಲಯದ ಹೆಗ್ಗೆರೆ ಬಳಿ ಭಾನುವಾರ ರಾಜ್ಯ ಮಡಿವಾಳರ ಸಂಘ ಹಮ್ಮಿಕೊಂಡಿದ್ದ ಬೃಹತ್ ಜಾಗೃತಿ ಸಮಾವೇಶದ ಮೂಲಕ ಸಮುದಾಯದ ಶಕ್ತಿ, ಒಗ್ಗಟ್ಟು ಪ್ರದರ್ಶನ ನಡೆಯಿತು.

ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಸಾವಿರಾರು ಮಂದಿ ಸಮಾವೇಶದಲ್ಲಿ ಪಾಲ್ಗೊಂಡು ತಮ್ಮ ಶಕ್ತಿ ಪ್ರದರ್ಶನಕ್ಕೆ ವೇದಿಕೆ ಮಾಡಿಕೊಂಡರು. ಕಾಂಗ್ರೆಸ್‌ನ ಪ್ರಮುಖ ನಾಯಕರು ಭಾಗವಹಿಸಿದ್ದು, ಒಂದು ರೀತಿಯಲ್ಲಿ ಪಕ್ಷದ ಕಾರ್ಯಕ್ರಮದಂತೆ ಕಂಡು ಬಂತು.

ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಬೇಕು. ಜತೆಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡಬೇಕು. ಸಮುದಾಯದ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿ ಕಲ್ಪಿಸಬೇಕು. ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರನ್ನು ನೇಮಕ ಮಾಡಬೇಕು, ಸಮುದಾಯದ ಮುಖಂಡ ಗೋಪಿಕೃಷ್ಣ ಅವರಿಗೆ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ನೀಡಬೇಕು ಎಂಬ ಹಕ್ಕೊತ್ತಾಯ ಮಂಡಿಸಿದರು.



ತುಮಕೂರಿನ ಹೊರವಲಯದ ಹೆಗ್ಗೆರೆ ಬಳಿ ಭಾನುವಾರ ರಾಜ್ಯ ಮಡಿವಾಳರ ಸಂಘದಿಂದ ಹಮ್ಮಿಕೊಂಡಿದ್ದ ಮಡಿವಾಳ ಜನ ಜಾಗೃತಿ ಸಮಾವೇಶದಲ್ಲಿ ಸಮುದಾಯದ ಜನರು ಭಾಗವಹಿಸಿದ್ದರು

ಸಮಾವೇಶಕ್ಕೆ ಚಾಲನೆ ನೀಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಮುಂದಿನ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರೊ. ಅನ್ನಪೂರ್ಣಮ್ಮ ವರದಿಯ ಅನ್ವಯ ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು' ಎಂದು ಭರವಸೆ ನೀಡಿದರು.

'ಈ ಹಿಂದೆ ಕಾಂಗ್ರೆಸ್ ಸರ್ಕಾರದ ಸಮಯದಲ್ಲಿ ನಿಗಮ, ಮಂಡಳಿಗಳಿಗೆ ಸಮುದಾಯದವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಹಲವರಿಗೆ ಉತ್ತಮ ಅವಕಾಶಗಳನ್ನು ಕಲ್ಪಿಸಲಾಗಿತ್ತು. ದೇವರ ಹಿಪ್ಪರಗಿಯ ಅಭಿವೃದ್ಧಿಗೆ ₹3 ಕೋಟಿ ನೀಡಲಾಗಿತ್ತು. ರಾಜ್ಯ ಸರ್ಕಾರದಿಂದ ಮಡಿವಾಳ ಮಾಚಿದೇವರ ಜಯಂತಿ ಆಚರಣೆಗೆ ಆದೇಶ ಹೊರಡಿಸಿದ್ದೆ' ಎಂದು ನೆನಪಿಸಿಕೊಂಡರು.

ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರ ಅವಧಿ ಮುಗಿದು ಒಂದು ವರ್ಷ ಒಂಬತ್ತು ತಿಂಗಳು ಕಳೆದರೂ ಚುನಾವಣೆ ನಡೆಸಿಲ್ಲ. ಈಗ ಮೀಸಲಾತಿ ಸಮಸ್ಯೆಯೂ ಎದುರಾಗಿದೆ. ಈ ಹಿಂದೆಯೇ ಚುನಾವಣೆ ನಡೆಸಿದ್ದರೆ ಮಡಿವಾಳರು ಸೇರಿದಂತೆ ಎಲ್ಲಾ ಸಮುದಾಯದವರಿಗೂ ಅವಕಾಶ ಲಭಿಸುತ್ತಿತ್ತು ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, 'ವಿಧಾನಸಭೆ ಚುನಾವಣೆಯಲ್ಲಿ ಅವಕಾಶ ನೀಡಬೇಕು ಎನ್ನುವ ಸಮುದಾಯದ ಕೂಗನ್ನು ಪರಿಗಣಿಸಲಾಗುವುದು. ಸಮುದಾಯದ ಮುಖಂಡ ಗೋಪಿಕೃಷ್ಣ ಅವರಿಗೆ ಟಿಕೆಟ್ ನೀಡುವ ಕುರಿತು ಸದ್ಯದಲ್ಲೇ ಮಾಹಿತಿ ನೀಡಲಾಗುವುದು' ಎಂದು ಭರವಸೆ ನೀಡಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **'Deccan Herald-Prajavani Relief Trust'** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.fnc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಸ್ಕಾಲರ್‌ಷಿಪ್ ಪಡೆದ ಹೆಮ್ಮೆ



ಆರ್ಥಿಕ ಸಮಸ್ಯೆಯಲ್ಲಿರುವ ನಮಗೆ, 'ಪ್ರಜಾವಾಣಿ' ನೀಡಿರುವ ಸ್ಕಾಲರ್‌ಷಿಪ್ ಹಣ ತುಂಬಾ ಸಹಕಾರಿಯಾಯಿತು. ಪ್ರಸ್ತುತ ಬ್ರಹ್ಮಾವರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಪಿಯುಸಿ ಅಭ್ಯಾಸ ಮಾಡುತ್ತಿದ್ದೇನೆ. ನಮ್ಮ ಊರು ಎಡಪದವಿಗೆ ಬಂದು ಪುನಃ ಹಾಸ್ಟೆಲ್‌ಗೆ ಹೋಗುವಾಗ ಪ್ರಯಾಣ ವೆಚ್ಚವೇ ಭಾರವಾಗುತ್ತಿತ್ತು. ಈ ಪ್ರಯಾಣಕ್ಕೆ ಹಾಗೂ ಪುಸ್ತಕ ಖರೀದಿಗೆ ಸ್ಕಾಲರ್‌ಷಿಪ್ ಹಣ ಬಳಸಿಕೊಳ್ಳುತ್ತಿದ್ದೇನೆ. 'ಪ್ರಜಾವಾಣಿ'ಯಂತಹ ಪ್ರಮುಖ ಪತ್ರಿಕೆ ನೀಡುವ ಸ್ಕಾಲರ್‌ಷಿಪ್ ಪಡೆದ ಹೆಮ್ಮೆ ಇದೆ.

ಸಂಸ್ಕೃತಿ ಭಂಡಾರಿ, ಮಂಗಳೂರು

ಪುಸ್ತಕ, ಸಮವಸ್ತ್ರ ಖರೀದಿಸಿದೆ



ಹಣಕಾಸಿನ ನೆರವಿನಿಂದ ಪ್ರಥಮ ಪಿಯುಸಿ ವಿಜ್ಞಾನ ವಿಭಾಗದ ಎನ್‌ಸಿಇಆರ್‌ಟಿ ಪುಸ್ತಕ ಖರೀದಿಸಿದೆ. ಕಾಲೇಜಿಗೆ ನಿತ್ಯ ತೆರಳಲು ಅಗತ್ಯ ಇದ್ದ ಸಮವಸ್ತ್ರ ಮತ್ತು ನೋಟ್‌ಪುಸ್ತಕಗಳನ್ನು ಖರೀದಿಸಿದ್ದೇನೆ. ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದೇನೆ. ನೆರವಾದ ಪ್ರಜಾವಾಣಿ ಪತ್ರಿಕೆಗೆ ಧನ್ಯವಾದ.

ಆನಂದ ರಾಜಕುಮಾರ ಕಾರಬಾರಿ, ವಾಗಲಗಾಂವ, ಭಾಲ್ಕಿ

ಮದುವೆಗೆ ವಿರೋಧ: ಕಾರಿನೊಳಗೆ ನವದಂಪತಿ ಆತ್ಮಹತ್ಯೆ

ಉಡುಪಿ: ಮದುವೆಗೆ ಮನೆಯವರಿಂದ ವಿರೋಧ ವ್ಯಕ್ತವಾಗಿದ್ದರಿಂದ ಮನನೊಂದ ಜೋಡಿ ಬ್ರಹ್ಮಾವರದ ಮಂದಾರ್ತಿ ಸಮೀಪದ ಹೆಗ್ಗುಂಜೆಯಲ್ಲಿ ಕಾರಿನೊಳಗೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದೆ.

ಬೆಂಗಳೂರಿನ ಹೆಬ್ಬಾಳದ ಯಶವಂತ್ ಯಾದವ್ (24), ಜ್ಯೋತಿ (22) ಆತ್ಮಹತ್ಯೆ ಮಾಡಿಕೊಂಡವರು.

ಮೇ 18ರಂದು ಬೆಂಗಳೂರಿನಿಂದ ಮಂಗಳೂರಿಗೆ ಬೈಕ್‌ನಲ್ಲಿ ಬಂದಿದ್ದ ಯಶವಂತ್ ಹಾಗೂ ಜ್ಯೋತಿ 21ರಂದು ದೇವಸ್ಥಾನವೊಂದರಲ್ಲಿ ಮದುವೆಯಾಗಿದ್ದರು. ಮದುವೆಗೆ ಕುಟುಂಬದವರು ವಿರೋಧ ವ್ಯಕ್ತಪಡಿಸಿದ್ದರಿಂದ ಮನನೊಂದಿದ್ದ ದಂಪತಿ ಆತ್ಮಹತ್ಯೆಗೆ ನಿರ್ಧರಿಸಿದ್ದರು.

ಮಂಗಳೂರಿನಲ್ಲಿ ಸೆಲ್ಫ್ ಡ್ರೈವ್ ಕಾರ್ ಬಾಡಿಗೆ ಪಡೆದು ಮಧ್ಯರಾತ್ರಿವರೆಗೂ ಸುತ್ತಾಡಿದ ಜೋಡಿ, ಕುಟುಂಬದವರಿಗೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಮೊಬೈಲ್ ಸಂದೇಶ ರವಾನಿಸಿ ಲೋಕೇಶನ್ ಕೂಡ ಕಳಿಸಿದ್ದಾರೆ. ನಂತರ ಕಾರಿನೊಳಗೆ ಕುಳಿತು ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕಾರಿನ ನಂಬರ್ ಪಡೆದು ಪರಿಶೀಲನೆ ನಡೆಸಿದ ಬ್ರಹ್ಮಾವರ ಪೊಲೀಸರಿಗೆ ಮೃತರ ಮಾಹಿತಿ ಲಭ್ಯವಾಗಿದೆ.



ಆತ್ಮಹತ್ಯೆ ಮಾಡಿಕೊಂಡ ಯಶವಂತ್ ಯಾದವ್, ಜ್ಯೋತಿ

ನಿಧನ ವಾರ್ತೆ

ತತ್ವಪದಕಾರ ಸಣ್ಣ ದುರುಗಪ್ಪ



ಕಂಪ್ಲಿ (ಬಳ್ಳಾರಿ ಜಿಲ್ಲೆ): ತಾಲ್ಲೂಕಿನ ಮೆಟ್ರಿ ಗ್ರಾಮದ ನಿವಾಸಿ ತತ್ವಪದಕಾರ ಚನ್ನದಾಸರ ಸಣ್ಣ ದುರುಗಪ್ಪ (70) ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ಮೂವರು ಪುತ್ರರು, ನಾಲ್ವರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು.

ಕಲಾವಿದ ಸಣ್ಣ ದುರುಗಪ್ಪ ಮೊದಲಿಗೆ ಬಯಲಾಟದಲ್ಲಿ ಮದ್ದಳೆ (ಚರ್ಮ ವಾದ್ಯ) ನುಡಿಸುತ್ತಿದ್ದರು. ಕ್ರಮೇಣ ತತ್ವಪದಕಾರರಾಗಿ ಗುರುತಿಸಿಕೊಂಡರು.

ಪುರಂದರ ದಾಸರು, ಸಂತ ಶಿಶುನಾಳ ಷರೀಫ್, ಕೊಡೆಕಲ್ ಶರಣರು, ಚೆಳ್ಳಗುರ್ಕಿ ಯರಿತಾತ, ಹುಬ್ಬಳ್ಳಿ ಸಿದ್ಧಾರೂಢ, ಹೇರೂರು ವಿರುಪಣ್ಣತಾತ, ನೀರಲಕೇರಿ ಬಸವರಾಜಪ್ಪ ಮತ್ತು ನಾಗಲಿಂಗಪ್ಪ ತಾತನವರ ತತ್ವಪದಗಳನ್ನು ತಮ್ಮ ಕಂಠಸಿರಿಯಲ್ಲಿ ಸುಶ್ರಾವ್ಯವಾಗಿ ಹಾಡಿ ನಾಡಿನೆಲ್ಲೆಡೆ ಗುರುತಿಸಿಕೊಂಡಿದ್ದರು.

ಅವರು 2020-21ನೇ ಸಾಲಿನಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿದ್ದರು.

ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ್ ದಾಸ್ ವಿಷಾದ

‘ಚುನಾವಣೆಯಲ್ಲಿ ಧರ್ಮ ಪ್ರಸ್ತಾಪ’

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ನ್ಯಾ.ಎಚ್‌.ಎನ್‌.ನಾಗಮೋಹನ್ ದಾಸ್ ಹಾಗೂ ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಚರ್ಚಿಸಿದರು. ಪ್ರೊ.ಕಾಳೇಗೌಡ ನಾಗವಾರ, ಬೀದರ್ ಜಿಲ್ಲೆಯ ಬುದ್ಧ ವಿಹಾರ್‌ನ ಬಂತೆ ವರಜ್ಯೋತಿ ಅಣದೂರ್ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಚುನಾವಣೆಗಳಲ್ಲಿ ಇತ್ತೀಚಿಗೆ ಜನಸಾಮಾನ್ಯರ ಬದುಕಿನ ಬದಲಾಗಿ, ಧರ್ಮ, ಜಾತಿಗೆ ಸಂಬಂಧಿಸಿದ ಭಾವನಾತ್ಮಕ ವಿಷಯಗಳು ಮುನ್ನೆಲೆಗೆ ಬರುತ್ತಿವೆ’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ್ ದಾಸ್ ಬೇಸರ ವ್ಯಕ್ತಪಡಿಸಿದರು.

ಅಬಕಾರಿ ಇಲಾಖೆ ಭಾನುವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಸವೇಶ್ವರ ಜಯಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿದ ಅವರು, ‘ಭಾರತಕ್ಕೆ ಭಯೋತ್ಪಾದನೆ, ಮೂಲಭೂತವಾದ, ಕೋಮುವಾದ, ಅಪರಾಧೀಕರಣ, ಭ್ರಷ್ಟಾಚಾರ, ಅತಿಯಾದ ವ್ಯಾಪಾರೀಕರಣ, ಸಾಂಸ್ಕೃತಿಕ ದಿವಾಳಿತನ ಸವಾಲುಗಳಾಗಿವೆ’ ಎಂದರು.

‘ಪ್ರಜಾಪ್ರಭುತ್ವದ ಉಳಿವಿಗೆ ಸಂವಿಧಾನ ಅವಶ್ಯಕ. ಇಲ್ಲವಾದರೆ ಅರಾಜಕತೆ, ಕೋಮುವಾದ ರಾರಾಜಿಸುತ್ತದೆ. ದೇಶದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳು ಸಂವಿಧಾನದ ತಳಹದಿಯ ಮೇಲೆ ನಿಂತಿವೆ. ಸಂವಿಧಾನ ನಮ್ಮ ಧರ್ಮ ಗ್ರಂಥ’ ಎಂದು ಹೇಳಿದರು.

ಮುಖ್ಯಾಂಶಗಳು

- ಅಪರಾಧೀಕರಣ, ಭ್ರಷ್ಟಾಚಾರ, ಕೋಮುವಾದ ಸವಾಲು
- ಸಂವಿಧಾನವೇ ನಮ್ಮೆಲ್ಲರ ರಕ್ಷಾ ಕವಚ ಆಗಬೇಕು

‘ಸಂವಿಧಾನವೇ ನಮ್ಮೆಲ್ಲರ ರಕ್ಷಾ ಕವಚ ಆಗಬೇಕು. ಸಂವಿಧಾನಕ್ಕೆ 105 ಬಾರಿ ತಿದ್ದುಪಡಿಯಾಗಿದೆ. ಸಂವಿಧಾನವನ್ನು ಶ್ರೀಮಂತಗೊಳಿಸಿ, ಗಟ್ಟಿಗೊಳಿಸಲು ತಿದ್ದುಪಡಿ ಅಗತ್ಯ. ಸಂವಿಧಾನದ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ’ ಎಂದು ತಿಳಿಸಿದರು.

ಜಾನಪದ ತಜ್ಞ ಕಾಳೇಗೌಡ ನಾಗವಾರ, ‘ಕೆಲ ರಾಜಕಾರಣಿಗಳು ಸಂವಿಧಾನದ ಮೂಲ ಆಶಯ ಅರಿಯದೇ ಆಗಾಗ ಅಪಚಾರ ಮಾಡುತ್ತಾರೆ. ವ್ಯವಸ್ಥೆಯ ಲೋಪದ ಬಗ್ಗೆ ಜಾಲತಾಣದಲ್ಲಿ ಕೆಲವರು ಬರೆಯಲಾರಂಭಿಸಿದ್ದಾರೆ. ಅವರನ್ನು ಒಗ್ಗೂಡಿಸುವ ಕೆಲಸವಾಗಬೇಕು’ ಎಂದು ಅವರು ತಿಳಿಸಿದರು.

ಬೆಳಗಾವಿಯ ಹೆಚ್ಚುವರಿ ಅಬಕಾರಿ ಆಯುಕ್ತ (ಅಪರಾಧ) ವೈ.ಮಂಜುನಾಥ್, ‘ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮಾತ್ರ ಮೀಸಲಾತಿಯನ್ನು ಒದಗಿಸಿಲ್ಲ. ಆರ್ಥಿಕವಾಗಿ ಹಿಂದುಳಿದವರು, ಮಹಿಳೆಯರು ಸೇರಿದಂತೆ ಹಲವರಿಗೆ ಸಂವಿಧಾನದಲ್ಲಿ ಮೀಸಲಾತಿ ಕಲ್ಪಿಸಿದ್ದಾರೆ. ಆದರೆ, ಅವರನ್ನು ಒಂದು ಜಾತಿಗೆ ಸಿಮೀತ ಮಾಡಲಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಬಾಡಿಗೆಗೆ ಮನೆ ಕೇಳುವ ನೆಪದಲ್ಲಿ ಮಾಲೀಕರ ಕಟ್ಟಿಹಾಕಿ ಕೃತ್ಯ

ಆಭರಣ ಸುಲಿಗೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಬಾಡಿಗೆಗೆ ಕೇಳುವ ನೆಪದಲ್ಲಿ ಹೋಗಿ ಮಾಲೀಕರ ಕೈ ಕಾಲು ಕಟ್ಟಿ ಹಾಕಿ ಸುಲಿಗೆ ಮಾಡಿದ್ದ ಮೂವರನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪಟ್ಟೇಗಾರಪಾಳ್ಯದ ನಿವಾಸಿ ಜಿಯಾವುಲ್ಲಾ (36), ನಂದನ್ (27), ಶರತ್ (28) ಬಂಧಿತರು. ಇವರಿಂದ ₹ 1.50 ಲಕ್ಷ ಮೌಲ್ಯದ ಚಿನ್ನದ ಸರ, ಒಲೆ, 2 ದ್ವಿಚಕ್ರ ವಾಹನ, ಮಚ್ಚು, ಅಂಟಿನ ಪಟ್ಟಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

‘ಬಂಧಿತರು ಈ ಹಿಂದೆ ಕೆಲ ಪ್ರಕರಣಗಳಲ್ಲಿ ಜೈಲಿಗೆ ಹೋಗಿ ಜಾಮೀನು ಮೇಲೆ ಹೊರಬಂದಿದ್ದರು. ತಂಡ ಕಟ್ಟಿಕೊಂಡು ಕಳ್ಳತನ, ದ್ವಿಚಕ್ರ ವಾಹನ ಕಳವು, ಗಾಂಜಾ ಮಾರಾಟ ಹಾಗೂ ಸುಲಿಗೆ ಮಾಡುತ್ತಿದ್ದರು’ ಎಂದರು.

ಫಲಕ ನೋಡಿ ಕೃತ್ಯ: ‘ನಂದಿನಿ ಲೇಔಟ್ ನಿವಾಸಿಯಾದ ದೂರುದಾರ ಮಹಿಳೆ, 2ನೇ ಮಹಡಿಯ ಮನೆ ಖಾಲಿ ಇರುವ ಕುರಿತು ‘ಮನೆ ಬಾಡಿಗೆಗೆ ಇದೆ’ ಎಂಬ ಫಲಕ ಹಾಕಿದ್ದರು’ ಎಂದು ಪೊಲೀಸರು ಹೇಳಿದರು.

‘ಫಲಕ ನೋಡಿದ್ದ ಆರೋಪಿಗಳು, ಮಾಹಿತಿ ಕಲೆಹಾಕಿ ಮನೆಯಲ್ಲಿ ಮಹಿಳೆ ಒಬ್ಬರೇ ಇರುವುದನ್ನು ತಿಳಿದುಕೊಂಡಿದ್ದರು. ಬಾಡಿಗೆಗೆ ಕೇಳುವ ನೆಪದಲ್ಲಿ ಮೇ 9ರಂದು ಹೋಗಿದ್ದರು. ಕೀ ಪಡೆದಿದ್ದ ಆರೋಪಿಗಳು ಕೆಲ ಹೊತ್ತಿನ ನಂತರ ‘ಮನೆ ಗಲೀಜಾಗಿದೆ. ಬಂದು ನೋಡಿ’ ಎಂದಿದ್ದ. ಆತನ ಮಾತು ನಂಬಿದ್ದ ಮಹಿಳೆ, ಮನೆಯೊಳಗೆ ತೆರಳಿದಾಗ ಕೈಕಾಲು ಕಟ್ಟಿ ಕೃತ್ಯ ಸುಲಿಗೆ ಮಾಡಿದ್ದರು’ ಎಂದೂ ಪೊಲೀಸರು ತಿಳಿಸಿದರು.

ಮಹಿಳೆಗೆ ಬ್ಲ್ಯಾಕ್‌ಮೇಲ್: ಆರೋಪಿ ಬಂಧನ

ಬೆಂಗಳೂರು: ಲ್ಯಾಪ್‌ಟಾಪ್ ದುರಸ್ತಿ ವೇಳೆ ಖಾಸಗಿ ಫೋಟೊಗಳನ್ನು ಕದ್ದಿಟ್ಟುಕೊಂಡು ಮಹಿಳೆಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ಪ್ರವೀಣ್ ರಾವ್ (40) ಎಂಬುವರನ್ನು ಬಾಗಲಗುಂಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

‘ದಾಸರಹಳ್ಳಿ ಮಹೇಶ್ವರಿ ನಗರದ ಪ್ರವೀಣ್ ರಾವ್, ಲ್ಯಾಪ್‌ಟಾಪ್ ದುರಸ್ತಿ ಮಳಿಗೆ ಇಟ್ಟುಕೊಂಡಿದ್ದ. ಮಹಿಳೆ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

₹ 10 ಸಾವಿರದಿಂದ ₹ 15 ಸಾವಿರಕ್ಕೆ ಮಾರಾಟ

ವಂಚಕರಿಗೆ ಸಿಮ್ ಕಾರ್ಡ್ ಪೂರೈಕೆ: ಬಂಧನ

ಪ್ರಜಾವಾಣಿ ವಾರ್ತೆ



ಸ್ಯಾಮುಯಲ್

ಬೆಂಗಳೂರು: ಸೈಬರ್ ಅಪರಾಧ ಎಸಗಿ ಜನರ ಹಣ ದೋಚುತ್ತಿದ್ದವರಿಗೆ ಸಿಮ್ ಕಾರ್ಡ್ ಹಾಗೂ ಬ್ಯಾಂಕ್ ಖಾತೆ ವಿವರಗಳನ್ನು ಒದಗಿಸುತ್ತಿದ್ದ ಆರೋಪದಡಿ ಸ್ಯಾಮುಯಲ್ ಒಕೋನ್ (26)ನನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆಫ್ರಿಕಾ ಖಂಡದ ಘನಾ ದೇಶದ ಸ್ಯಾಮುಯಲ್, ಉದ್ಯೋಗ ವೀಸಾದಡಿ 4 ವರ್ಷದ ಹಿಂದೆ ಬಂದಿದ್ದು, ವೀಸಾ ಅವಧಿ ಮುಗಿದರೂ ವಾಪಸಾಗಿರಲಿಲ್ಲ. ಈತನಿಂದ 5 ಸಿಮ್‌ಕಾರ್ಡ್, ವಿವಿಧ ಬ್ಯಾಂಕ್‌ಗಳ 6 ಡೆಬಿಟ್ ಕಾರ್ಡ್ ಜಪ್ತಿ ಮಾಡಲಾಗಿದೆ’ ಎಂದು ಹೇಳಿದರು.

‘ಲಾಟರಿ, ಉಡುಗೊರೆ ಆಮಿಷವೊಡ್ಡಿ ಜನರಿಗೆ ಕರೆ ಮಾಡಿ ವಂಚಿಸುವವರಿಗೆ ಆರೋಪಿ, ಸಿಮ್‌ಕಾರ್ಡ್‌ಗಳನ್ನು ₹ 10 ಸಾವಿರದಿಂದ ₹ 15 ಸಾವಿರಕ್ಕೆ ಮಾರುತ್ತಿದ್ದ. ಸಾರ್ವಜನಿಕರ ಹಣ ವರ್ಗಾವಣೆಗೆ ಬ್ಯಾಂಕ್ ಖಾತೆಯ ವಿವರಗಳನ್ನೂ ನೀಡುತ್ತಿದ್ದ’ ಎಂದರು.

ಈಶಾನ್ಯ ರಾಜ್ಯ ಜನರಿಗೆ ಆಮಿಷ: ‘ತ್ರಿಪುರ, ಅಸ್ಸಾಂ, ನಾಗಾಲ್ಯಾಂಡ್ ಸೇರಿ ಈಶಾನ್ಯ ರಾಜ್ಯಗಳ ಜನರಿಗೆ ಆಮಿಷ ವೊಡ್ಡಿ ವೈಯಕ್ತಿಕ ದಾಖಲೆ ಪಡೆಯುತ್ತಿದ್ದು, ಅದನ್ನು ಆಧರಿಸಿ ಸಿಮ್‌ಕಾರ್ಡ್ ಖರೀದಿಸುತ್ತಿದ್ದ. ಜೊತೆಗೆ, ಬ್ಯಾಂಕ್‌ಗಳಲ್ಲೂ ಖಾತೆಗಳನ್ನು ತೆರೆಯುತ್ತಿದ್ದ. ಇದೇ ಸಿಮ್‌ಕಾರ್ಡ್ ಹಾಗೂ ಬ್ಯಾಂಕ್ ಖಾತೆಗಳ ವಿವರವನ್ನು ವಂಚಕರಿಗೆ ಮಾರುತ್ತಿದ್ದ’ ಎಂದೂ ತಿಳಿಸಿದರು.

‘ಸೈಬರ್ ಅಪರಾಧ ಕುರಿತಂತೆ ಇತ್ತೀಚೆಗೆ ಪ್ರಕರಣವೊಂದರ ತನಿಖೆ ವೇಳೆ ಸಿಕ್ಕ ಮಾಹಿತಿ ಆಧರಿಸಿ ಸ್ಯಾಮುಯಲ್‌ನನ್ನು ಬಂಧಿಸಲಾಗಿದೆ. ಆತನಿಂದ ಸಿಮ್ ಕಾರ್ಡ್ ಪಡೆಯುತ್ತಿದ್ದ ವಂಚಕರ ಬಗ್ಗೆ ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದೂ ಹೇಳಿದರು.

₹ 4.40 ಲಕ್ಷ ಮೌಲ್ಯ ಡ್ರಗ್ಸ್ ಜಪ್ತಿ

ಬೆಂಗಳೂರು: ಈಶಾನ್ಯ ವಿಭಾಗದ ಪೊಲೀಸರು ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯ ತಿರುಮೇನಹಳ್ಳಿ ಬಳಿ ಡ್ರಗ್ಸ್ ಮಾರುತ್ತಿದ್ದ ನೈಜೀರಿಯಾ ಪ್ರಜೆ ಜೆರ್ರಿ (35) ಎಂಬಾತನನ್ನು ಬಂಧಿಸಿದ್ದು, ಆತನಿಂದ ₹ 4.40 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

‘₹ 4 ಲಕ್ಷ ಮೌಲ್ಯದ 80 ಗ್ರಾಂ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ. ವೀಸಾ ಅವಧಿ ಮುಗಿದರೂ ಬಾಡಿಗೆ ಮನೆಯಲ್ಲಿ ಅಕ್ರಮವಾಗಿ ನೆಲೆಸಿದ್ದ. ಹೊರ ರಾಜ್ಯಗಳಿಂದ ಡ್ರಗ್ಸ್ ತರಿಸಿ ಮನೆಯಲ್ಲೇ ಸಂಗ್ರಹಿಸಿಟ್ಟು
ಕೊಳ್ಳುತ್ತಿದ್ದ’ ಎಂದು ಡಿಸಿಪಿ ಅನೂಪ್ ಶೆಟ್ಟಿ ತಿಳಿಸಿದರು.

‘ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಡ್ರಗ್ಸ್ ಮಾರುತ್ತಿದ್ದ. ಮನೆ ಮೇಲೂ ದಾಳಿ ನಡೆಸಿ, ಮೊಬೈಲ್, ತೂಕದ ಯಂತ್ರ ಹಾಗೂ ಕಾರು ಜಪ್ತಿ ಮಾಡಲಾಗಿದೆ’ ಎಂದೂ ಹೇಳಿದರು.

ಯಲಹಂಕದಲ್ಲಿ ಕಾರ್ಯಾಚರಣೆ: ‘ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪಿ ರುವಾಂಡ ದೇಶದ ನ್ಯೂಷೆ ಇವ್ರಾ ಜಾರ್ಜ್ (34) ಹಾಗೂ ಶಿವಾಜಿನಗರದ ಮೊಹಮ್ಮದ್ ಫಾರೂಕ್ ಅಲಿಯಾಸ್ ಅಬ್ದುಲ್‌ನನ್ನು (29) ಬಂಧಿಸಲಾಗಿದೆ’ ಎಂದು ಡಿಸಿಪಿ ತಿಳಿಸಿದರು.

‘ಇವರಿಂದ ₹ 40 ಸಾವಿರ ಮೌಲ್ಯದ 8 ಗ್ರಾಂ ಎಂಡಿಎಂಎ, ₹ 25 ಸಾವಿರ ಹಾಗೂ 4 ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದೂ ಹೇಳಿದರು.

ಐಪಿಎಲ್ ಬೆಟ್ಟಿಂಗ್: ₹ 3.50 ಲಕ್ಷ ಜಪ್ತಿ

ಬೆಂಗಳೂರು: ಐಪಿಎಲ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಿಯೊಬ್ಬನನ್ನು ಸಿಸಿಬಿ ಪೊಲೀಸರು ಶನಿವಾರ ಬಂಧಿಸಿದ್ದು, ಆತನಿಂದ ₹ 3.50 ಲಕ್ಷ ಜಪ್ತಿ ಮಾಡಿದ್ದಾರೆ.

‘ಬನಶಂಕರಿ ಪೂರ್ಣಪ್ರಜ್ಞ ಬಡಾವಣೆ ಬಳಿ ಆರೋಪಿ, ಸಾರ್ವಜನಿಕರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದ ಮಾಹಿತಿ ಆಧರಿಸಿ ಆತನನ್ನು ಬಂಧಿಸಿದ್ದು, ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಐಪಿಎಲ್ ಪಂದ್ಯಾವಳಿ ಆರಂಭವಾದಂದಿನಿಂದ ಬೆಟ್ಟಿಂಗ್ ನಡೆಸುತ್ತಿದ್ದ. ಮೇ 20ರಂದು ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ಪಂದ್ಯ ಕುರಿತು ಬೆಟ್ಟಿಂಗ್ ಕಟ್ಟಿಸಿಕೊಳ್ಳುತ್ತಿದ್ದ. ಬಂದ ಹಣದಿಂದ ಐಷಾರಾಮಿ ಜೀವನ ನಡೆಸುತ್ತಿದ್ದ’ ಎಂದೂ ತಿಳಿಸಿದರು.

ಅಪಘಾತ: ಮೇಲ್ಸೇತುವೆಯಿಂದ ಬಿದ್ದು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಜಕ್ಕೂರು ಮೇಲ್ಸೇತುವೆಯಲ್ಲಿ ಭಾನುವಾರ ಅಪಘಾತ ಸಂಭವಿಸಿದ್ದು, ಗೋವಿಂದಪ್ಪ (46) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

‘ಗೌರಿಬಿದನೂರಿನ ಗೋವಿಂದಪ್ಪ, ಪಾನಿಪುರಿ ವ್ಯಾಪಾರಿ. ಜಕ್ಕೂರಿನಲ್ಲಿ ಕುಟುಂಬದ ಜೊತೆ ವಾಸವಿದ್ದರು. ಪತ್ನಿ ಸಹೋದರಿ ಮಗ ಸಂಜಯ್‌ನಿಗೆ (11) ವಿಮಾನ ತೋರಿಸಲೆಂದು ಬೆಳಿಗ್ಗೆ 7.20ರ ಸುಮಾರಿಗೆ ಏರೋಡ್ರಮ್ ಬಳಿ ಕರೆದೊಯ್ಯುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತದಲ್ಲಿ ಸಂಜಯ್ ಸಹ ಗಾಯಗೊಂಡಿದ್ದು, ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ’ ಎಂದು ಯಲಹಂಕ ಸಂಚಾರ ಪೊಲೀಸರು ಹೇಳಿದರು.

‘ಟಿವಿಎಸ್ ಮೊಪೆಡ್ ದ್ವಿಚಕ್ರ ವಾಹನದಲ್ಲಿ ಗೋವಿಂದಪ್ಪ ಹೊರಟಿದ್ದರು. ಹಿಂಬದಿಯಲ್ಲಿ ಸಂಜಯ್ ಕುಳಿತಿದ್ದ. ಮೇಲ್ಸೇತುವೆಯಲ್ಲಿ ಮೊಪೆಡ್ ತೆರಳುತ್ತಿದ್ದಾಗ, ಅದೇ ಮಾರ್ಗದಲ್ಲಿ ಅತೀ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿತ್ತು. ರಸ್ತೆಯಲ್ಲೇ ಮೊಪೆಡ್ ಉರುಳಿ ಬಿದ್ದಿತ್ತು. ಅದರ ಪಕ್ಕವೇ ಸಂಜಯ್ ಬಿದ್ದಿದ್ದ. ಗೋವಿಂದಪ್ಪ ಅವರು ಹಾರಿ ಮೇಲ್ಸೇತುವೆಯಿಂದ ಕೆಳ ರಸ್ತೆಗೆ ಬಿದ್ದಿದ್ದರು’ ಎಂದು ಹೇಳಿದ್ದಾರೆ.

‘ತಲೆಗೆ ತೀವ್ರ ಪೆಟ್ಟು ಬಿದ್ದು ಗೋವಿಂದಪ್ಪ ಸ್ಥಳದಲ್ಲೇ ಮೃತಪಟ್ಟರು. ಸ್ಥಳೀಯರೇ ಸಂಜಯ್ ಅವರನ್ನು ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ’ ಎಂದೂ ತಿಳಿಸಿದರು.

ಆಸ್ಪತ್ರೆ ಟೆಕ್ನಿಷಿಯನ್ ಬಂಧನ: ‘ಅಪಘಾತದ ಬಳಿಕ ಸ್ಥಳದಲ್ಲೇ ಕಾರು ಬಿಟ್ಟು ಚಾಲಕ ವರುಣ್ (26) ಪರಾರಿಯಾಗುತ್ತಿದ್ದ. ಸಾರ್ವಜನಿಕರ ಸಹಾಯದಿಂದ ಆತನನ್ನು ಬೆನ್ನಟ್ಟಿ ಬಂಧಿಸಲಾಗಿದೆ. ಅತೀ ವೇಗ ಹಾಗೂ ಅಜಾಗರೂಕತೆ ಚಾಲನೆ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಜೆ.ಪಿ.ನಗರದ ಆರೋಪಿ ವರುಣ್, ಆಸ್ಪತ್ರೆಯೊಂದರ ಟೆಕ್ನಿಷಿಯನ್. ಆತ ಹಾಗೂ ಸ್ನೇಹಿತ, ಭಾನುವಾರ ಬೆಳಿಗ್ಗೆ 5 ಗಂಟೆಗೆ ಹೊಸಕೋಟೆಗೆ ಹೋಗಿ ಮಣಿ ಹೋಟೆಲ್‌ನಲ್ಲಿ ಬಿರಿಯಾನಿ ತಿಂದಿದ್ದರು. ಅಲ್ಲಿಂದ ನಂದಿಬೆಟ್ಟಕ್ಕೆ ಬೆಳಿಗ್ಗೆ 6 ಗಂಟೆಗೆ ಹೋಗಿದ್ದರು. ಆದರೆ, ಅಲ್ಲಿ ವಾಹನಗಳ ದಟ್ಟಣೆ ಹೆಚ್ಚಿತ್ತು. ಹೀಗಾಗಿ, ಬೆಟ್ಟದ ಮೇಲೆ ಹೋಗದೇ ವಾಪಸು ಬೆಂಗಳೂರಿಗೆ ಕಾರಿನಲ್ಲಿ ಬರುತ್ತಿದ್ದರು. ಅದೇ ವೇಳೆಯೇ ಅಪಘಾತ ಆಗಿತ್ತು. ಈ ಬಗ್ಗೆ ಆರೋಪಿ ಹೇಳಿಕೆ ನೀಡಿದ್ದಾನೆ’ ಎಂದೂ ಪೊಲೀಸರು ತಿಳಿಸಿದರು.

ಮಣಿಪಾಲ್ ಆಸ್ಪತ್ರೆಯಿಂದ ಆಯೋಜನೆ, ವೈದ್ಯರು ಭಾಗಿ

ಪುರುಷರ ಆರೋಗ್ಯ ಜಾಗೃತಿಗೆ ಬೈಕ್ ರ‍್ಯಾಲಿ

ಪ್ರಜಾವಾಣಿ ವಾರ್ತೆ



ಮಣಿಪಾಲ್ ಆಸ್ಪತ್ರೆ ಹಮ್ಮಿಕೊಂಡ ಬೈಕ್ ರ‍್ಯಾಲಿಯಲ್ಲಿ ವೈದ್ಯರು ಪುರುಷರ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದರು

ಬೆಂಗಳೂರು: ಪುರುಷರ ಆರೋಗ್ಯ ರಕ್ಷಣೆ ಕುರಿತು ಜಾಗೃತಿ ಮೂಡಿಸಲು ನಗರದ ಮಣಿಪಾಲ್ ಆಸ್ಪತ್ರೆಯ ವೈದ್ಯರು ಭಾನುವಾರ 35 ಕಿ.ಮೀ. ಬೈಕ್ ರ‍್ಯಾಲಿ ನಡೆಸಿದರು. ಭಾರತ್ ಬಿಯರ್ಡ್ ಕ್ಲಬ್ ಸಹಯೋಗದಲ್ಲಿ ರ‍್ಯಾಲಿ ನಡೆಯಿತು.

ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯಲ್ಲಿ ಚಾಲನೆ ದೊರೆಯಿತು. ಆಸ್ಪತ್ರೆಯ ವಿವಿಧ ತಜ್ಞ ವೈದ್ಯರ ಜತೆಗೆ 250ಕ್ಕೂ ಅಧಿಕ ಬೈಕ್ ಸವಾರರು ಭಾಗಿಯಾಗಿದ್ದರು. ಟ್ರಿನಿಟಿ ವೃತ್ತ, ಕಬ್ಬನ್ ಉದ್ಯಾನ, ಸ್ಯಾಂಕಿ ರಸ್ತೆ ಮತ್ತು ದೊಡ್ಡಬಳ್ಳಾಪುರದ ಮೂಲಕ ಸಾಗಿ, ಎಂಬೆಸಿ ಇಂಟರ್ ನ್ಯಾಷನಲ್ ರೈಡಿಂಗ್ ಸ್ಕೂಲ್‌ನಲ್ಲಿ ರ‍್ಯಾಲಿ ಕೊನೆಗೊಂಡಿತು.

ಆಸ್ಪತ್ರೆಯ ಹೃದ್ರೋಗ ಶಾಸ್ತ್ರ ವಿಭಾಗದ ಡಾ.ನವೀನ್ ಚಂದ್ರ, ‘ತಂಬಾಕು ಸೇವನೆ, ಪಾಶ್ಚಾತ್ಯ ಜೀವನಶೈಲಿ ಸೇರಿ ವಿವಿಧ ಕಾರಣಗಳಿಂದ ಯುವಜನರಲ್ಲಿ ಹೃದಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಅತಿಯಾದ ವ್ಯಾಯಾಮದಿಂದ ಹೃದಯ ಸ್ತಂಭನ ಸಾಧ್ಯತೆ ಇರುತ್ತದೆ. ಹೃದಯಾಘಾತವನ್ನು ಲಘುವಾಗಿ ಪರಿಗಣಿಸಬಾರದು’ ಎಂದು ಹೇಳಿದರು.

ಶ್ವಾಸಕೋಶ ತಜ್ಞ ಡಾ.ಸಚಿನ್ ಡಿ., ‘ನೇರ ಮತ್ತು ಪರೋಕ್ಷ ಧೂಮಪಾನಗಳೆರಡೂ ಆರೋಗ್ಯಕ್ಕೆ ಅತ್ಯಂತ ಅಪಾಯಕಾರಿ. ಧೂಮಪಾನವು ಶ್ವಾಸಕೋಶದ ಕಾರ್ಯಕ್ಷಮತೆ ಹದಗೆಡಿಸಿ, ರೋಗ ನಿರೋಧಕ ಶಕ್ತಿ ಕುಗ್ಗಿಸುತ್ತದೆ’ ಎಂದು ಹೇಳಿದರು.

ಪುರುಷ ರೋಗಶಾಸ್ತ್ರ ಸಲಹಾತಜ್ಞ ಡಾ.ಪ್ರಶಾಂತ್ ಗಣೇಶ್, ‘ಹೆಚ್ಚಿನ ಪುರುಷರು ಅನಾರೋಗ್ಯ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಾರೆ. ಮಹಿಳೆಯರಿಗೆ ಹೋಲಿಸಿದರೆ ಪುರುಷರಲ್ಲೇ ಹೃದಯ, ಮೂತ್ರಪಿಂಡಕ್ಕೆ ಸಂಬಂಧಿಸಿದ ಸಮಸ್ಯೆಗಳು ಹೆಚ್ಚು ಕಾಣಿಸಿಕೊಳ್ಳುತ್ತಿವೆ’ ಎಂದರು.

ಲಂಡನ್‌ನ ಅನಲಿಟಿಕ್ಸ್ ಇನ್‌ಸ್ಟಿಟ್ಯೂಟ್‌ನಿಂದ ಕಾರ್ಯಕ್ರಮ

ಸಾವಿರ ವಿದ್ಯಾರ್ಥಿಗಳಿಗೆ ಡೇಟಾ ಸಾಕ್ಷರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಓದುತ್ತಿರುವ ಆಯ್ದ 1,000 ವಿದ್ಯಾರ್ಥಿಗಳಿಗೆ ಡೇಟಾ ಸಾಕ್ಷರತೆ ಒದಗಿಸಲು ಮತ್ತು ಶಾಲಾ ವಿದ್ಯಾರ್ಥಿಗಳ ಮಟ್ಟದಲ್ಲಿ ಈ ಕಾರ್ಯಕ್ರಮ ವಿಸ್ತರಿಸಲು ಲಂಡನ್‌ನ ಅನಲಿಟಿಕ್ಸ್ ಇನ್‌ಸ್ಟಿಟ್ಯೂಟ್ (ಐಒಎ) ಆಸಕ್ತಿ ವ್ಯಕ್ತಪಡಿಸಿದೆ.

ಲಂಡನ್‌ನಲ್ಲಿ ನಡೆಯುತ್ತಿರುವ ವಿಶ್ವ ಶಿಕ್ಷಣ ವೇದಿಕೆಯ ಸಮಾವೇಶದ ಸಂದರ್ಭ ರಾಜ್ಯದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರನ್ನು ಭೇಟಿ ಮಾಡಿದ ಐಒಎ ಸಂಸ್ಥೆಯ ಉನ್ನತಾಧಿಕಾರಿಗಳ ನಿಯೋಗ ಈ ವಿಚಾರವನ್ನು ಪ್ರಸ್ತಾಪಿಸಿದೆ.

ಸಚಿವರೊಂದಿಗೆ ಮಾತುಕತೆ ನಡೆಸಿದ ಅನಲಿಟಿಕ್ಸ್ ಐಒಎ ಪ್ರತಿನಿಧಿ ಡಾ.ಕ್ಲೇರ್ ವಾಲ್ಶ್, 'ಈ ಕಾರ್ಯಕ್ರಮಗಳಿಗೆ ಸಂಸ್ಥೆಯೇ ವಿಶೇಷ ನಿಧಿಯನ್ನು ಹೊಂದಿಸಲಿದೆ. ಇದಕ್ಕಾಗಿ ಕರ್ನಾಟಕ ಸರ್ಕಾರವು ಯಾವುದೇ ವೆಚ್ಚ ಮಾಡಬೇಕಾಗಿಲ್ಲ. ವಿದ್ಯಾರ್ಥಿಗಳ ಜತೆಗೆ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳಿಗೂ ನಮ್ಮ ಸಂಸ್ಥೆಯ ಸದಸ್ಯತ್ವ ನೀಡುವ ಮೂಲಕ ಅವರೆಲ್ಲ ತಮ್ಮ ಅನಲಿಟಿಕ್ಸ್ ಕೌಶಲ್ಯವನ್ನು ವೃದ್ಧಿಸಿಕೊಳ್ಳಲು ಡೇಟಾ ಸಾಕ್ಷರತೆ ಕಲಿಸುವುದು ಸದುದ್ದೇಶವಾಗಿದೆ' ಎಂದು ಹೇಳಿದರು.

'ಅನಲಿಟಿಕ್ಸ್ ಮತ್ತು ಡೇಟಾ ಸೈನ್ಸ್ ಬಳಕೆಯನ್ನು ಕೇವಲ ಹೈಟೆಕ್ ಉದ್ದಿಮೆಗಳಿಗೆ ಮಾತ್ರ ಸೀಮಿತಗೊಳಿಸಬಾರದು. ಬದಲಿಗೆ ಸರ್ಕಾರಿ ಇಲಾಖೆಗಳಲ್ಲಿ ಕೂಡಾ ಇದನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ಐಒಎ ಸಂಸ್ಥೆಯು ಕಾರ್ಪೊರೇಟ್ ಸದಸ್ಯತ್ವದ ಜತೆಗೆ ಕರ್ನಾಟಕ ಸರ್ಕಾರದ ಉದ್ಯೋಗಿಗಳಿಗೆ ಉಚಿತವಾಗಿ 100 ಸದಸ್ಯತ್ವ ಕೊಡಲು ಸಿದ್ಧವಿದೆ' ಎಂದೂ ಹೇಳಿದರು.

ಮಾತುಕತೆಯ ಸಂದರ್ಭದಲ್ಲಿ ಅಂತರ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮದ (ಐಎಸ್ಡಿಸಿ) ಕಾರ್ಯನಿರ್ವಾಹಕ ನಿರ್ದೇಶಕ ಟಾಮ್ ಜೋಸೆಫ್, ಐಒಎ ಸದಸ್ಯತ್ವ ವಿಭಾಗದ ಮುಖ್ಯಸ್ಥೆ ರೋಸಿ ಸ್ವೀನಿ ಇದ್ದರು.

ಮುಖ್ಯಾಂಶಗಳು

- ಐಒಎ ಸಂಸ್ಥೆಯ ಉನ್ನತಾಧಿಕಾರಿಗಳ ನಿಯೋಗದಿಂದ ಪ್ರಸ್ತಾವನೆ
- ಸಂಸ್ಥೆಯಿಂದಲೇ ನಿಧಿ ಹೊಂದಿಸುವ ಭರವಸೆ
- ರಾಜ್ಯದ ಸರ್ಕಾರದ ಕೆಲ ಉದ್ಯೋಗಿಗಳಿಗೂ ಸದಸ್ಯತ್ವ



ಯುಕೆಯ ಇನ್‌ಸ್ಟಿಟ್ಯೂಟ್ ಆಫ್ ಅನಲಿಟಿಕ್ಸ್ ಸಂಸ್ಥೆಯ ಉನ್ನತಾಧಿಕಾರಿಗಳಾದ ಡಾ.ಕ್ಲೇರ್ ವಾಲ್ಶ್ ಮತ್ತು ರೋಸಿ ಸ್ವೀನಿ ಅವರು ರಾಜ್ಯದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಸಂಕ್ಷಿಪ್ತ ಸುದ್ದಿ

ಇಸ್ಮಾಯಿಲ್ ತಳಕಲ್‌ಗೆ ಬೆಸಗರಹಳ್ಳಿ ಪ್ರಶಸ್ತಿ

ಬೆಂಗಳೂರು: ಡಾ. ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ನೀಡುವ 2021ನೇ ಸಾಲಿನ ಅತ್ಯುತ್ತಮ ಕಥಾ ಸಂಕಲನ ಪ್ರಶಸ್ತಿಗೆ ಇಸ್ಮಾಯಿಲ್ ತಳಕಲ್ ಅವರ 'ಬೆತ್ತಲೆ ಸಂತ' ಕಥಾ ಸಂಕಲನವು ಆಯ್ಕೆ ಆಗಿದೆ.



ಇಸ್ಮಾಯಿಲ್ ತಳಕಲ್

ಇಸ್ಮಾಯಿಲ್ ತಳಕಲ್ ಅವರು ಕೊಪ್ಪಳದ ಗೊಂಡಬಾಳ ಮೂಲದವರು ಸದ್ಯ ಅವರು ಬೆಳಗಾವಿಯ ಗೋಕಾಕ್ ತಾಲ್ಲೂಕಿನ ಖನಗಾಂವ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಕನ್ನಡ ಶಿಕ್ಷಕರಾಗಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜೂ.11ರಂದು ಮಂಡ್ಯದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಷ್ಠಾನವು ಪ್ರಕಟಣೆಯಲ್ಲಿ ತಿಳಿಸಿದೆ.

ಜೂನ್ 15ರಿಂದ ಬೀದರ್–ಬೆಂಗಳೂರು ವಿಮಾನಯಾನ

ಬೀದರ್: 'ಸ್ಟಾರ್ ಏರ್ ಸಂಸ್ಥೆಯು ಜೂನ್ 15ರಿಂದ ಬೆಂಗಳೂರು–ಬೀದರ್ ನಡುವೆ ವಿಮಾನಯಾನ ಆರಂಭಿಸಲಿದ್ದು, ಇದರ ಕುರಿತು ವಿಮಾನಯಾನ ಸಚಿವರು ಶೀಘ್ರವೇ ಮಾಹಿತಿ ನೀಡಲಿದ್ದಾರೆ' ಎಂದು ಕೇಂದ್ರ ರಸಗೊಬ್ಬರ ಖಾತೆ ಸಚಿವ ಭಗವಂತ ಖೂಬಾ ಅವರು ತಿಳಿಸಿದ್ದಾರೆ.

'ಕೋವಿಡ್ ಕಾರಣ ಬೀದರ್–ಬೆಂಗಳೂರು ವಿಮಾನ ಹಾರಾಟ ಸ್ಥಗಿತಗೊಂಡಿದೆ. ಟ್ರೂಜೆಟ್ ವಿಮಾನ ಸೇವೆ ಆರಂಭಿಸುತ್ತಿಲ್ಲ. ವಿಮಾನಯಾನ ಸಚಿವಾಲಯದ ಅಧಿಕಾರಿಗಳ ಜೊತೆ ಚರ್ಚಿಸಿದ ಬಳಿಕ ಅವರು ಬೇರೆ ಕಂಪನಿಯ ವಿಮಾನ ಸೇವೆ ಒದಗಿಸಲು ಒಪ್ಪಿದರು' ಎಂದು ತಿಳಿಸಿದ್ದಾರೆ.



ಆಲಮಟ್ಟಿ ಜಲಾಶಯಕ್ಕೆ ಭಾನುವಾರ ಒಂದೇ ದಿನ 2.42 ಟಿಎಂಸಿ ಅಡಿ ನೀರು ಹರಿದು ಬಂದಿದ್ದು, ಜಲಾಶಯದ ಹಿನ್ನೀರಿನಲ್ಲಿ ರಭಸದ ಅಲೆಗಳು ಎದ್ದಿವೆ –ಪ್ರಜಾವಾಣಿ ಚಿತ್ರ/ಚಂದ್ರಶೇಖರ ಕೋಳೇಕರ

ಆಲಮಟ್ಟಿಗೆ 2.42 ಟಿಎಂಸಿ ಅಡಿ ನೀರು

ಪ್ರಜಾವಾಣಿ ವಾರ್ತೆ

ಆಲಮಟ್ಟಿ (ವಿಜಯಪುರ ಜಿಲ್ಲೆ): ಮುಂಗಾರು ಪೂರ್ವ ಭಾರಿ ಮಳೆಯಿಂದಾಗಿ ಆಲಮಟ್ಟಿ ಜಲಾಶಯಕ್ಕೆ ಒಳ ಹರಿವು ಆರಂಭಗೊಂಡಿದ್ದು ಭಾನುವಾರ ಒಂದೇ ದಿನ 28,077 ಕ್ಯುಸೆಕ್ (2.42 ಟಿಎಂಸಿ ಅಡಿ)ನೀರು ಹರಿದು ಬಂದಿದೆ.

519.60 ಮೀಟರ್ ಗರಿಷ್ಠ ಎತ್ತರದ ಜಲಾಶಯದಲ್ಲಿ 123.081 ಟಿಎಂಸಿ ಅಡಿ ಗರಿಷ್ಠ ನೀರಿನ ಸಂಗ್ರಹ ಸಾಮರ್ಥ್ಯವಿದ್ದು ಸದ್ಯಕ್ಕೆ 37.37 ಟಿಎಂಸಿ ಅಡಿಗಳಿಗೆ ಏರಿಕೆಯಾಗಿದೆ.

'ಸಾಧಾರಣವಾಗಿ ಜೂನ್‌ನಲ್ಲಿ ಒಳ ಹರಿವು ಆರಂಭವಾಗುವುದು ವಾಡಿಕೆ. ಆಲಮಟ್ಟಿ ಜಲಾಶಯದ ದಶಕದ ನೀರಿನ ಸಂಗ್ರಹದ ಮಾಹಿತಿ ಗಮನಿಸಿದಾಗ ಜಲಾಶಯದಲ್ಲಿ ಈ ಮಟ್ಟದಲ್ಲಿ ನೀರು ಸಂಗ್ರಹ ಇರುವುದು ಕೂಡ ದಾಖಲೆಯೇ. ಕಳೆದ ವರ್ಷ ಸ್ಥಗಿತಗೊಂಡಿದ್ದ ಒಳಹರಿವು ನವೆಂಬರ್ 23ರಿಂದ ಪುನಃ ಆರಂಭಗೊಂಡು 20 ಟಿಎಂಸಿ ಅಡಿ ಹೆಚ್ಚುವರಿ ನೀರು ಸಂಗ್ರಹಗೊಂಡಿದ್ದರಿಂದ ಈ ವರ್ಷ ಬೇಸಿಗೆ ಕಳೆದರೂ ಅತಿ ಹೆಚ್ಚು ನೀರು ಜಲಾಶಯದಲ್ಲಿ ಉಳಿದಿದೆ' ಎಂದು ಕೆಬಿಜೆಎನ್‌ಎಲ್ ಅಧಿಕಾರಿಗಳು ತಿಳಿಸಿದರು.

ಹಿಪ್ಪರಗಿ ಜಲಾಶಯ: 'ಈ ಭಾಗದಲ್ಲಿ ಇತ್ತೀಚೆಗೆ ಸುರಿದ ಮಳೆಯಿಂದಾಗಿ ತಾಲ್ಲೂಕಿನ ಹಿಪ್ಪರಗಿ ಜಲಾಶಯಕ್ಕೆ ಭಾನುವಾರ ಬೆಳಿಗ್ಗೆ 20 ಸಾವಿರ ಕ್ಯುಸೆಕ್ ಒಳ ಹರಿವು ಇದ್ದು, ಹೊರ ಹರಿವು ಕೂಡ ಅಷ್ಟೇ ಪ್ರಮಾಣದಲ್ಲಿ ಇದೆ' ಎಂದು ರಬಕವಿ ಬನಹಟ್ಟಿ ತಾಲ್ಲೂಕಿನ ಹಿಪ್ಪರಗಿ ಜಲಾಶಯದ ಸಹಾಯಕ ಎಂಜಿನಿಯರ್ ವಿಠ್ಠಲ ನಾಯಕ ತಿಳಿಸಿದರು.

'ಜಲಾಶಯದ ಸಾಮರ್ಥ್ಯ 6 ಟಿಎಂಸಿ ಅಡಿ ಇದ್ದು, ಜಲಾಶಯದಲ್ಲಿ ಈಗ 3 ಟಿಎಂಸಿ ಅಡಿ ನೀರಿದೆ. ನದಿಯ ಮೇಲ್ಭಾಗದ ಪ್ರದೇಶದಲ್ಲಿ ಸುರಿದ ಮಳೆಯಿಂದಾಗಿ ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ. ಮಹಾರಾಷ್ಟ್ರದ ಜಲಾಶಯಗಳಿಂದ ಇನ್ನೂ ನೀರು ಬಿಟ್ಟಿಲ್ಲ' ಎಂದು ನಾಯಕ ತಿಳಿಸಿದರು.

ಮುಕ್ತ ವಿ.ವಿ ಸ್ಥಾಪನೆ: ನಿಯಮ ಸಡಿಲಿಕೆ

ನವದೆಹಲಿ: ಮುಕ್ತ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅನುಕೂಲವಾಗುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು (ಯುಜಿಸಿ) ನಿಯಮವನ್ನು ಸಡಿಲಗೊಳಿಸಿದೆ.

ಮುಕ್ತ ವಿಶ್ವವಿದ್ಯಾಲಯದ ಸ್ಥಾಪನೆಗೆ 40 ರಿಂದ 60 ಎಕರೆ ಜಮೀನು ಮೀಸಲಿಡುವ ಅಗತ್ಯವಿಲ್ಲ. 5 ಎಕರೆ ಸಾಕು ಎಂಬ ತಿದ್ದುಪಡಿಯನ್ನು ಯುಜಿಸಿ ಮಾಡಿದೆ.

ಇನ್ನಷ್ಟು ಮುಕ್ತ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಯುಜಿಸಿ (ಅನುದಾನಕ್ಕಾಗಿ ಮುಕ್ತ ವಿಶ್ವವಿದ್ಯಾಲಯಗಳ ಅರ್ಹತೆ) ನಿಯಮ –1998ಕ್ಕೆ ತಿದ್ದುಪಡಿ ತರಲಾಗಿದೆ. ಈ ಅಧಿಸೂಚನೆಯನ್ನು ಶುಕ್ರವಾರ ಹೊರಡಿಸಲಾಗಿದೆ.

'ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ಜಮೀನು ಲಭ್ಯತೆ ತೊಡಕಾಗಬಾರದು. ಹಾಗಾಗಿ, ದೂರಶಿಕ್ಷಣ ಮತ್ತು ಆನ್‌ಲೈನ್ ಶಿಕ್ಷಣ ಒದಗಿಸಲು ಶಿಕ್ಷಣ ಸಂಸ್ಥೆಗಳನ್ನು ಪ್ರೋತ್ಸಾಹಿಸಲು ಈ ತಿದ್ದುಪಡಿ ತರಲಾಗಿದೆ. ಇದರಿಂದ ಸಂಸ್ಥೆಗಳು ಹಲವು ಸ್ಥಳಗಳಲ್ಲಿ ದೂರ ಶಿಕ್ಷಣ ಸೌಲಭ್ಯವನ್ನು ವೃದ್ಧಿಗೊಳಿಸಬಹುದು' ಎಂದು ಯುಜಿಸಿ ಅಧ್ಯಕ್ಷ ಎಂ. ಜಗದೀಶ್ ಕುಮಾರ್ ಅವರು ತಿಳಿಸಿದ್ದಾರೆ.

'ಈ ಹಿಂದೆ ಮುಕ್ತ ವಿಶ್ವವಿದ್ಯಾಲಯಗಳ ಸ್ಥಾಪನೆಗೆ 40 ರಿಂದ 60 ಎಕರೆ ಜಮೀನು ಮೀಸಲಿಡಬೇಕಾಗಿತ್ತು. ಇದರಿಂದ ನಗರ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಶಿಕ್ಷಣ ಸಂಸ್ಥೆ ಸ್ಥಾಪನೆ ಬಹಳ ಕಠಿಣವಾಗಿತ್ತು' ಎಂದು ಅವರು ಹೇಳಿದ್ದಾರೆ.

ಕೇಂದ್ರ ಕಾಯ್ದೆಯಡಿ ಸ್ಥಾಪನೆಯಾದ ಮುಕ್ತ ವಿಶ್ವವಿದ್ಯಾಲಯಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ.



ಸಂಭ್ರಮಿಸಿದ ಅಭ್ಯರ್ಥಿಗಳು

ಕಗ್ಗಲೀಪುರ ಗ್ರಾಪಂ: ಫಲಿತಾಂಶ ಪ್ರಕಟ

ಕೆಂಗೇರಿ: ಕಗ್ಗಲೀಪುರಗ್ರಾಮ ಪಂಚಾಯಿತಿ ಚುನಾವಣೆಯ ಮತ ಎಣಿಕೆ ಭಾನುವಾರ ನಡೆಯಿತು. ಪಕ್ಷ ಬೆಂಬಲಿತ 27 ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ ಎಂದು ಕಾಂಗ್ರೆಸ್ ಹೇಳಿಕೊಂಡಿದೆ.

38 ಸದಸ್ಯ ಬಲದ ಕಗ್ಗಲೀಪುರ ಗ್ರಾಮ ಪಂಚಾಯಿತಿಗೆ ಇದೇ 20ರಂದು ಚುನಾವಣೆ ನಡೆದಿತ್ತು. 95 ಅಭ್ಯರ್ಥಿಗಳು ಚುನಾವಣಾ ಅಖಾಡದಲ್ಲಿದ್ದರು. ಕೆಂಗೇರಿಯಲ್ಲಿರುವ ಕೆಂಗೇರಿ ಎಜುಕೇಷನ್ ಟ್ರಸ್ಟ್ ಶಾಲಾ ಆವರಣದಲ್ಲಿ ಭಾನುವಾರ ಮತ ಎಣಿಕೆ ನಡೆಯಿತು.

ಕಗ್ಗಲೀಪುರ ಜಿಲ್ಲಾ ಪಂಚಾಯಿತಿಯ ಮಾಜಿ ಸದಸ್ಯ, ಕಗ್ಗಲೀಪುರ 5ನೇ ಬ್ಲಾಕ್ ಅಭ್ಯರ್ಥಿಯಾಗಿ ಜಯಗಳಿಸಿದ ಫರ್ವಿಜ್ ಅವರು, 'ಸ್ಥಳೀಯ ಮುಖಂಡರು, ಜನರ ಬೆಂಬಲದಿಂದ ಗೆಲುವು ಸಾಧ್ಯವಾಯಿತು. ಜನರ ಆಶಯಗಳಿಗೆ ಪೂರಕವಾಗಿ ಕೆಲಸ ಮಾಡುತ್ತೇವೆ' ಎಂದರು.

ರಾಜಸ್ಥಾನ: ಥಳಿಸಿ ಕಾರ್ಮಿಕನ ಹತ್ಯೆ

ಕೋಟ, ರಾಜಸ್ಥಾನ (ಪಿಟಿಐ): ಭೂವಿವಾದದ ಹಿನ್ನೆಲೆಯಲ್ಲಿ ಕಾರ್ಮಿಕನೊಬ್ಬನನ್ನು ಕಬ್ಬಿಣದ ಸರಳಿನಿಂದ ಹಲ್ಲೆ ನಡೆಸಿ, ಆತನ ಕಾಲುಗಳ ಮೇಲೆ ಟ್ರ್ಯಾಕ್ಟರ್ ಹರಿಸಿ ಹತ್ಯೆ ಮಾಡಿರುವ ಕೃತ್ಯ ಬುಂದಿ ಜಿಲ್ಲೆಯಲ್ಲಿ ಭಾನುವಾರ ನಡೆದಿದೆ.

ಅರಣ್ಯ ಭೂಮಿಯ ನಿಯಮಬಾಹಿರ ಅತಿಕ್ರಮಣಕ್ಕೆ ಸಂಬಂಧಿಸಿದ ವಿವಾದದ ಹಿನ್ನೆಲೆಯಲ್ಲಿ ಈ ಕೃತ್ಯ ನಡೆದಿದೆ. ಘಟನೆ ಸಂಬಂಧ ಇಬ್ಬರನ್ನು ಬಂಧಿಸಲಾಗಿದೆ. ಒಂಬತ್ತು ಜನರ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಉದ್ಯೋಗ ಖಾತರಿ ಯೋಜನೆಯಡಿ ಹೆಸರು ನೋಂದಾಯಿಸಿಕೊಂಡಿದ್ದ ಕಾರ್ಮಿಕ ಸುಖ್‌ಲಾಲ್ ಗುರ್ಜಾರ್ ಕೆಲಸ ಮುಗಿಸಿ ಮನೆಗೆ ವಾಪಸಾಗುವಾಗ ದಾಳಿ ನಡೆಸಿದ ಗುಂಪು ಮನಬಂದಂತೆ ಥಳಿಸಿ ಹತ್ಯೆಗೈದಿದೆ ಎಂದಿದ್ದಾರೆ.



ಇತ್ತೀಚೆಗೆ ಸುರಿದ ಧಾರಾಕಾರ ಮಳೆಯಿಂದಾಗಿ ನಷ್ಟ ಅನುಭವಿಸಿದ 225 ಕುಟುಂಬಗಳಿಗೆ ತಲಾ ₹ 25 ಸಾವಿರ ಪರಿಹಾರ ಮೊತ್ತದ ಆದೇಶದ ಪ್ರತಿಯನ್ನು ದಾಸರಹಳ್ಳಿ ಬಿಬಿಎಂಪಿ ವಲಯ ಕಚೇರಿಯಲ್ಲಿ ಶಾಸಕ ಆರ್.ಮಂಜುನಾಥ್ ಅವರು ಸಂತ್ರಸ್ತರಿಗೆ ನೀಡಿದರು. ಅಲ್ಲದೆ, ಸಂತ್ರಸ್ತರಿಗೆ ಶಾಸಕರು ವೈಯಕ್ತಿಕವಾಗಿ ₹3 ಲಕ್ಷ ನೆರವು ನೀಡಿದರು

ಕೋಡಿಯ ತಡೆಗೋಡೆ ಏರುವ ಯುವಕರು

ಶ್ರೀನಿವಾಸ ಸಾಗರ: ಪ್ರವಾಸಿಗರ ಅತಿರೇಕ!

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಶ್ರೀನಿವಾಸ ಸಾಗರ ಜಲಾಶಯ ಈಗ ತುಂಬಿದೆ. ಕೋಡಿ ಹರಿಯುತ್ತಿದೆ. ಇಂತಹ ಸಂದರ್ಭದಲ್ಲಿ ಸಾಗರವು ಪ್ರವಾಸಿಗರು ಹಾಗೂ ಯುವ ಸಮುದಾಯಕ್ಕೆ ಆಕರ್ಷಣೆಯ ಕೇಂದ್ರವಾಗುತ್ತದೆ.

ನಿತ್ಯ ಅಪಾರ ಸಂಖ್ಯೆಯಲ್ಲಿ ಇಲ್ಲಿಗೆ ಜನರು ಭೇಟಿ ನೀಡುತ್ತಾರೆ. ಆದರೆ ನೀರಿನಲ್ಲಿ ಆಟಕ್ಕೆ ಬರುವವರ 'ಹುಚ್ಚಾಟ'ಗಳು ಸಹ ಹೆಚ್ಚಿವೆ. ಶ್ರೀನಿವಾಸ ಸಾಗರದ ಕೋಡಿಯ ತಡೆಗೋಡೆಯ ಮೇಲೆ ಏರಲು ಯುವಕರು ತಾ ಮುಂದು ನಾ ಮುಂದು ಎಂದು ಮುಗಿ ಬೀಳುತ್ತಿದ್ದಾರೆ.

ಭಾನುವಾರ ಹೀಗೆ ತಡೆಗೋಡೆಯ ಮೇಲೆ ಹತ್ತಿದ ಯುವಕನೊಬ್ಬ ಏಕಾಏಕಿ ಬಿದ್ದಿದ್ದಾನೆ. ಆದರೆ ಯಾವುದೇ ಪ್ರಾಣಾಪಾಯ ಆಗಿಲ್ಲ. ಈ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈತ ಗೌರಿಬಿದನೂರು ತಾಲ್ಲೂಕು ಮೂಲದವರು ಎನ್ನಲಾಗಿದೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹೀಗೆ ತಡೆಗೋಡೆಯ ಮೇಲೆ ಹತ್ತುವವರ ಸಂಖ್ಯೆ ನಿತ್ಯ ಹೆಚ್ಚುತ್ತಲೇ ಇದೆ.

ಧುಮುಕುವ ನೀರಿನಲ್ಲಿ ನಾಲ್ಕಾರು ಯುವಕರು ಒಟ್ಟಿಗೆ ತಡೆಗೋಡೆಯನ್ನು ಹತ್ತುವುದು, ಪೈಪೋಟಿಗೆ ಬಿದ್ದಂತೆ ಮೇಲೆ ಏರುವುದು...ಇಂತಹ ದೃಶ್ಯಗಳು ಸಾಮಾನ್ಯ ಎನಿಸಿವೆ. ಕಡಿದಾದ ತಡೆಗೋಡೆಯಿಂದ ಸ್ವಲ್ಪ ಜಾರಿದರೂ ಕೆಳಕ್ಕೆ ಬೀಳಬೇಕಾಗುತ್ತದೆ.

'ಇಲ್ಲಿ ಪೊಲೀಸರನ್ನು ನಿಯೋಜಿಸಿ ಭದ್ರತೆಯನ್ನು ಕಲ್ಪಿಸಬೇಕು. ನೀರಿನಲ್ಲಿ ಆಟವಾಡಲಿ. ಆದರೆ ಹೀಗೆ ಹುಚ್ಚಾಟಗಳು ಅನಗತ್ಯ' ಎನ್ನುತ್ತಾರೆ ಪ್ರವಾಸಿಗ ಚಿಕ್ಕಬಳ್ಳಾಪುರದ ರಮೇಶ್.



ಶ್ರೀನಿವಾಸ ಸಾಗರ ಜಲಾಶಯದ ಕೋಡಿಯ ತಡೆಗೋಡೆ ಮೇಲೆ ಹತ್ತಿರುವ ಯುವಕ

ಗುಂಪುಗಳ ನಡುವೆ ಮಾರಾಮಾರಿ; 9 ಮಂದಿಗೆ ಗಾಯ

ಕಾರಟಗಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ನಂದಿಹಳ್ಳಿ ಗ್ರಾಮದಲ್ಲಿ ಶನಿವಾರ ರಾತ್ರಿ ಅಕ್ರಮ ಮರಳು ಮಾರಾಟ ಮತ್ತು ಹಣ ಹಂಚಿಕೆ ವಿಷಯದಲ್ಲಿ ಪರಿಶಿಷ್ಟ ಜಾತಿ ಮತ್ತು ನಾಯಕ ಸಮುದಾಯಗಳ ನಡುವೆ ಮಾರಾಮಾರಿಯಾಗಿದ್ದು, ಪರಿಶಿಷ್ಟ ಜಾತಿಯ 9 ಮಂದಿ ಗಾಯಗೊಂಡಿದ್ದಾರೆ. ಎರಡೂ ಗುಂಪಿನವರು ಬಡಿಗೆ, ಕಲ್ಲುಗಳಿಂದ ಪರಸ್ಪರ ಹೊಡೆದಾಡಿಕೊಂಡಿದ್ದು, ಗಾಯಾಳುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಪರಿಶಿಷ್ಟ ಜಾತಿಯ ದೇವಣ್ಣ ಹಾವಣ್ಣ ಮಾದಿಗ ಎಂಬುವರು 69 ಜನರ ವಿರುದ್ಧ ಜಾತಿ ನಿಂದನೆ ದೂರು ನೀಡಿದ್ದಾರೆ. ಲಿಂಗಾಯತ, ಉಪ್ಪಾರ ಜನಾಂಗದ ತಲಾ ಒಬ್ಬರು ಮತ್ತು 67 ನಾಯಕ ಸಮುದಾಯದವರ ವಿರುದ್ಧ ಪ್ರಕರಣ ದಾಖಲಾಗಿದೆ. 16 ಆರೋಪಿಗಳನ್ನು ಬಂಧಿಸಲಾಗಿದೆ. ಗ್ರಾಮದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡಲು ನಿಗಾ ವಹಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಭಾನುವಾರ ಇಡೀ ದಿನ ಕಾರಟಗಿ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದ ಪರಿಶಿಷ್ಟ ಜಾತಿ ಸಮುದಾಯದವರು,‘ಪ್ರಕರಣದ ಎಲ್ಲಾ 69 ಜನರನ್ನೂ ಬಂಧಿಸಬೇಕು. ನಮಗೆ ಅನ್ಯಾಯವಾಗಿದೆ. ನಮ್ಮ ವಿರುದ್ಧ ದೂರು ಸ್ವೀಕರಿಸಬಾರದು’ ಎಂದರು.

ಶಹಾಪುರ: ಮಹಿಳಾ ಕೃಷಿ ಕೂಲಿಕಾರರ ರಾಜ್ಯಮಟ್ಟದ ಸಮಾವೇಶ

ಧರ್ಮದ ಹೆಸರಲ್ಲಿ ದ್ವೇಷ ಬಿತ್ತನೆ: ಬೃಂದಾ

ಪ್ರಜಾವಾಣಿ ವಾರ್ತೆ



ಶಹಾಪುರದಲ್ಲಿ ಭಾನುವಾರ ನಡೆದ ಮಹಿಳಾ ಕೃಷಿಕೂಲಿಕಾರರ 4ನೇ ರಾಜ್ಯಮಟ್ಟದ ಸಮಾವೇಶದಲ್ಲಿ ಸಿಪಿಎಂ ಪಾಲಿಟ್ ಬ್ಯುರೊ ಸದಸ್ಯೆ ಬೃಂದಾ ಕಾರಟ್ ಮಾತನಾಡಿದರು

ಶಹಾಪುರ (ಯಾದಗಿರಿ ಜಿಲ್ಲೆ): ‘ದೇಶ ಮತ್ತು ರಾಜ್ಯದಲ್ಲಿ ಬೆಲೆ ಏರಿಕೆಯಾಗುತ್ತಿದ್ದು, ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಆದರೆ, ಇದನ್ನು ಬದಿಗಿರಿಸಿ, ಧರ್ಮದ ಹೆಸರಲ್ಲಿ ದ್ವೇಷ ಬಿತ್ತಲಾಗುತ್ತಿದೆ’ ಎಂದು ಸಿಪಿಎಂ ಪಾಲಿಟ್ ಬ್ಯುರೊ ಸದಸ್ಯೆ ಬೃಂದಾ ಕಾರಟ್ ಕಳವಳ ವ್ಯಕ್ತಪಡಿಸಿದರು.

ನಗರದ ಸಿಪಿಎಸ್ ಶಾಲಾ ಮೈದಾನದಲ್ಲಿ ಭಾನುವಾರ ಮಹಿಳಾ ಕೃಷಿಕೂಲಿಕಾರರ 4ನೇ ರಾಜ್ಯಮಟ್ಟದ ಸಮಾವೇಶದಲ್ಲಿ ಮಾತನಾಡಿದ ಅವರು, ‘ಧರ್ಮದ ಬಗ್ಗೆ ಮಾತನಾಡುವವರು ಜಾತಿ ವ್ಯವಸ್ಥೆಯ ಬಗ್ಗೆ ಮಾತನಾಡುತ್ತಿಲ್ಲ. ದಲಿತರ ಮೇಲೆ ನಿರಂತರವಾಗಿ ದಬ್ಬಾಳಿಕೆ, ಅತ್ಯಾಚಾರ ನಡೆಯುತ್ತಿದ್ದರು ಯಾರೂ ಪ್ರಶ್ನಿಸುತ್ತಿಲ್ಲ. ಎಲ್ಲದಕ್ಕಿಂತ ಧರ್ಮವೇ ಮುಖ್ಯ ಎಂಬ ಸ್ಥಿತಿ ನಿರ್ಮಿಸಲಾಗಿದೆ’ ಎಂದರು.

‘ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ ನಿಲ್ಲಿಸಲು ಮುಂದಾಗಿರುವ ಬಿಜೆಪಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕು. ಅನ್ನ ಕಸಿದುಕೊಳ್ಳುವ ಬದಲು ಕೂಲಿ ಹೆಚ್ಚಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕು’ ಎಂದು ಅವರು ಆಗ್ರಹಿಸಿದರು.

‘ಬೆವರು ಹರಿಸಿ ದುಡಿಯುವ ಮಹಿಳೆಯರು ಕುಟುಂಬ ನಿರ್ವಹಣೆ ಜೊತೆ ಕೂಲಿಗೆಲಸ ಮಾಡುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಿ ತೊಂದರೆ ಅನುಭವಿಸಿದ ಕೂಲಿಕಾರ್ಮಿಕರಿಗೆ ಸೌಲಭ್ಯಗಳು ಸಿಕ್ಕಿಲ್ಲ. ಉಳ್ಳವರಿಗೆ ಮಾತ್ರ ಸಿಕ್ಕಿದೆ’ ಎಂದು ಟೀಕಿಸಿದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕದ ಉಪಾಧ್ಯಕ್ಷೆ ಕೆ.ನೀಲಾ ಮಾತನಾಡಿ, ‘ನಮಗೆ ದರ್ಗಾ, ಮಂದಿರ ಎರಡೂ ಒಂದೇ. ಹಿಂದೂ, ಮುಸ್ಲಿಮರ ನಡುವೆ ದ್ವೇಷ ಬಿತ್ತಬೇಡಿ. ಮಹಿಳೆಯರು ತಮ್ಮ ಶಕ್ತಿಯನ್ನು ಅರಿತು, ಮುಂದೆ ಸಾಗಬೇಕು’ ಎಂದು ಹೇಳಿದರು.

ಇದಕ್ಕೂ ಮುನ್ನ ನಗರದ ಬಸವೇಶ್ವರ ಕಮಾನ್‌ನಿಂದ ಸಿಪಿಎಸ್ ಶಾಲಾ ಮೈದಾನದವರೆಗೆ ಮೆರವಣಿಗೆ ನಡೆಯಿತು.

ಜ್ಞಾನವಾಪಿ ಮಸೀದಿ: ಸುಪ್ರೀಂ ಕೋರ್ಟ್ ನಿಲುವಿನಿಂದ ನಿರಾಸೆ

ಕಲಬುರಗಿ: ‘ವಾರಾಣಸಿಯ ಜ್ಞಾನವಾಪಿ ಮಸೀದಿ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತಳೆದ ನಿಲುವು ನಿರಾಸೆ ಮೂಡಿಸಿದೆ’ ಎಂದು ಸಿಪಿಎಂ ಪಾಲಿಟ್‌ಬ್ಯುರೊ ಸದಸ್ಯೆ ಬೃಂದಾ ಕಾರಟ್ ತಿಳಿಸಿದರು.

‘ದೇಶದಲ್ಲಿ ಎಲ್ಲರೂ ಶಾಂತಿ, ಸೌಹಾರ್ದದಿಂದ ಬಾಳಬೇಕು. ಇತಿಹಾಸದಲ್ಲಿನ ಪ್ರಮಾದಗಳನ್ನು ಈಗ ತಿದ್ದಲು ಆಗದು ಎಂದು ಈ ಹಿಂದೆ ಸುಪ್ರಿಂಕೋರ್ಟ್ ಹೇಳಿದೆ. ಆದರೆ, ಜ್ಞಾನವಾಪಿ ಮಸೀದಿ ವಿಚಾರದಲ್ಲಿ ಇದು ಪಾಲನೆಯಾಗಿಲ್ಲ’ ಎಂದು ಅವರು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ‘ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ಎಲ್ಲ ಪೂಜಾ ಸ್ಥಳ, ಪ್ರಾರ್ಥನಾ ಸ್ಥಳ, ಧಾರ್ಮಿಕ ಸ್ಥಳಗಳನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳಬೇಕು ಎಂದು ‘ಆರಾಧನಾ ಸ್ಥಳಗಳ (ವಿಶೇಷ ನಿಬಂಧನೆ) ಕಾಯ್ದೆ 1991’ ಹೇಳುತ್ತದೆ. ಇದಕ್ಕಾಗಿ 1947ರ ಆಗಸ್ಟ್ 15ರ ದಿನಾಂಕ ಗುರುತು ಮಾಡಿದೆ. , ಇದಕ್ಕೂ ಮುಂಚೆ ಇದ್ದ ಯಾವುದೇ ಧಾರ್ಮಿಕ ಸ್ಥಳ ಭವಿಷ್ಯದಲ್ಲಿ ಬದಲಾಯಿಸಬಾರದು ಎಂದರ್ಥ. ಜ್ಞಾನವಾಪಿ ಮಸೀದಿ ವಿಚಾರದಲ್ಲೂ ಸುಪ್ರಿಂ ಕೋರ್ಟ್ ಇದೇ ಕಾನೂನು ಎತ್ತಿಹಿಡಿಯುತ್ತದೆ ಎಂಬ ನಮ್ಮ ನಿರೀಕ್ಷೆ ಹುಸಿಯಾಗಿದೆ’ ಎಂದರು.

‘ಅಯೋಧ್ಯೆ ಹೊರತುಪಡಿಸಿ ಉಳಿದೆಲ್ಲ ಧಾರ್ಮಿಕ ಸ್ಥಳಗಳಿಗೂ ‘ಆರಾಧನಾ ಸ್ಥಳಗಳ (ವಿಶೇಷ ನಿಬಂಧನೆ) ಕಾಯ್ದೆ 1991’ ಅನ್ವಯವಾಗುತ್ತದೆ ಎಂದು ಸುಪ್ರಿಂಕೋರ್ಟ್ ತೀರ್ಪು ನೀಡಿದೆ. ಆದರೆ, ಈಗ ಜ್ಞಾನವಾಪಿ ವಿಚಾರದಲ್ಲಿ ತನ್ನ ತೀರ್ಪಿನಂತೆ ದೃಢವಾಗಿ ನಿಂತಿಲ್ಲ. ಮಸೀದಿಯಲ್ಲಿ ಶಿವಲಿಂಗ ಪತ್ತೆಯಾದ ಬಗ್ಗೆ, ಪೂಜೆಗೆ ಅವಕಾಶ ನೀಡುವ ಬಗೆಗಿನ ಟಿಪ್ಪಣಿಗಳು ಬೇಸರ ಮೂಡಿಸಿವೆ’ ಎಂದೂ ಹೇಳಿದರು.

‘ದೇಶದಲ್ಲಿ ಧರ್ಮಗಳ ಮಧ್ಯೆ, ಸಮುದಾಯಗಳ ಮಧ್ಯೆ ದ್ವೇಷ ಮೂಡಿಸಿ ರಾಜಕೀಯ ಲಾಭ ಮಾಡಿಕೊಳ್ಳುವುದೇ ಬಿಜೆಪಿ, ಆರ್‌ಎಸ್‌ಎಸ್‌ನ ಉದ್ದೇಶ. ದೇಶದ ಜನ ಇದನ್ನು ವಿರೋಧಿಸಬೇಕು. ಒಂದಾಗಿ ಬಾಳಿ, ಒಗ್ಗಟ್ಟಿನಿಂದ ಕೂಡಿರಬೇಕು’ ಎಂದರು.

ಸ್ಥಳೀಯ ಸಂಸ್ಥೆಗಳ ಉಪಚುನಾವಣೆ; ಕಾಂಗ್ರೆಸ್, ಬಿಜೆಪಿಗೆ ತಲಾ ಎರಡು ಸ್ಥಾನ

ಬೆಂಗಳೂರು: ದಾವಣಗೆರೆ ಮಹಾನಗರಪಾಲಿಕೆಯ ಎರಡು ವಾರ್ಡ್‌ಗಳಿಗೆ ನಡೆದ ಉಪಚುನಾವಣೆಯಲ್ಲಿ ಎರಡೂ ಸ್ಥಾನಗಳು ಕಾಂಗ್ರೆಸ್ ಬಿಟ್ಟು ಪಕ್ಷಾಂತರ ಮಾಡಿದ್ದ ಬಿಜೆಪಿ ಅಭ್ಯರ್ಥಿಗಳ ಪಾಲಾಗಿವೆ. ಶಿರಾ ಹಾಗೂ ಬಸವಕಲ್ಯಾಣ ನಗರಸಭೆಯ ತಲಾ ಒಂದು ವಾರ್ಡ್‌ಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದ್ದಾರೆ.

ದಾವಣಗೆರೆ ಮಹಾನಗರಪಾಲಿಕೆಯ 28ನೇ ವಾರ್ಡ್ ಸದಸ್ಯ ಜೆ.ಎನ್. ಶ್ರೀನಿವಾಸ್, 37ನೇ ವಾರ್ಡ್ ಸದಸ್ಯೆ ಶ್ವೇತಾ ಎಸ್. ದಂಪತಿ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿ ಬಿಜೆಪಿಗೆ ಸೇರಿದ್ದರಿಂದಉಪಚುನಾವಣೆನಡೆದಿತ್ತು.ಬಿಜೆಪಿಯಿಂದ ಸ್ಪರ್ಧಿಸಿದ್ದ ದಂಪತಿ ಗೆದ್ದಿದ್ದಾರೆ.

28ನೇ ವಾರ್ಡ್‌ನಲ್ಲಿ ಜೆ.ಎನ್. ಶ್ರೀನಿವಾಸ್ 2,565 ಮತ ಗಳಿಸಿದರೆ, ಕಾಂಗ್ರೆಸ್‌ನ ಹುಲ್ಲುಮನಿ ಗಣೇಶ್ 1,884 ಮತ ಪಡೆದರು. 37ನೇ ವಾರ್ಡ್ ನಲ್ಲಿ ಶ್ವೇತಾ 2,096 ಮತ ಪಡೆದರೆ, ಕಾಂಗ್ರೆಸ್ ಅಭ್ಯರ್ಥಿ ರೇಖಾ ರಾಣಿ ಕೆ.ಎಸ್. 1,303 ಮತ ಪಡೆದರು.

ಶಿರಾ ನಗರಸಭೆಯ 21ನೇ ವಾರ್ಡ್‌ಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಇರ್ಷಾದ್ ಪಾಷ ಅವರು 129 ಮತಗಳ ಅಂತರದಿಂದ ಜಯಗಳಿಸಿದ್ದಾರೆ. ಇರ್ಷಾದ್ ಪಾಷ 618 ಮತಗಳನ್ನು ಪಡೆದರೆ ಸಮೀಪದ ಪ್ರತಿಸ್ಪರ್ಧಿ ಎಚ್. ವಾಸಿಲ್ ಅಹಮದ್ (ಜೆಡಿಎಸ್) 489 ಮತ ಪಡೆದರು.

ಬೀದರ್ ಜಿಲ್ಲೆಯ ಬಸವಕಲ್ಯಾಣ ನಗರಸಭೆಯ 25ನೇ ವಾರ್ಡ್‌ಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪವನ ಗಾಯಕವಾಡ 843 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಪವನ ಗಾಯಕವಾಡ 1075 ಮತ ಪಡೆದರೆ, ಪ್ರತಿಸ್ಪರ್ಧಿ ಬಿಜೆಪಿ ಅಭ್ಯರ್ಥಿ ಮನೋಜ ದಾದೆಗೆ 232 ಮತ ಪಡೆದರು.

ಜೇವರ್ಗಿ ಪುರಸಭೆ ಉಪಚುನಾವಣೆ–ಕಾಂಗ್ರೆಸ್‌ಗೆ ಗೆಲುವು: ಕಲಬುರಗಿ ಜಿಲ್ಲೆಯ ಜೇವರ್ಗಿ ಪುರಸಭೆಯ 10ನೇ ವಾರ್ಡ್‌ಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ಶಾಕೀರಾ ಬೇಗಂ ಮಹಮ್ಮದ್ ಸಲೀಮ್ 5 ಮತಗಳಿಂದ ವಿಜೇತರಾದರು. ಶಾಕೀರಾಬೇಗಂ 209 ಮತಗಳನ್ನು ಪಡೆದರೆ, ಪ್ರತಿಸ್ಪರ್ಧಿ ಜೆಡಿಎಸ್‌ನ ಹುಸೇನಬಿ ಮಹಮ್ಮದ್ ಇಸ್ಮಾಯಿಲ್ ಸಾಬ್ ಪಾನವಾಲೆ 204 ಮತಗಳು ಪಡೆದರು.

ಪಿಎಸ್‌ಐ ನೇಮಕಾತಿ: ಬಾಯ್ಬಿಡದ ಡಿವೈಎಸ್ಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಪೊಲೀಸ್ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ವಿಚಾರಣೆ ಮುಂದುವರಿಸಿದ್ದಾರೆ.

ಕೆಲ ಅಭ್ಯರ್ಥಿಗಳು ಹಾಗೂ ಮಧ್ಯವರ್ತಿಗಳ ಜೊತೆ ಒಡನಾಟವಿಟ್ಟುಕೊಂಡು ಅಕ್ರಮ ಎಸಗಿದ್ದ ಬಗ್ಗೆ ಪುರಾವೆಗಳಿದ್ದರೂ ಶಾಂತಕುಮಾರ್ ಯಾವುದೇ ಮಾಹಿತಿ ಬಾಯ್ಬಿಡುತ್ತಿಲ್ಲ. ಸಿಐಡಿ ಕಚೇರಿಯಲ್ಲಿ ಭಾನುವಾರವೂ ಶಾಂತಕುಮಾರ್ ಅವರನ್ನು ಸಿಐಡಿ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದರು.

‘ಆಂತರಿಕ ಭದ್ರತಾ ವಿಭಾಗದ (ಐಎಸ್‌ಡಿ) ಡಿವೈಎಸ್ಪಿ ಆಗಿದ್ದ ಶಾಂತಕುಮಾರ್, ನಿಯೋಜನೆ ಮೇರೆಗೆ ಪೊಲೀಸ್ ನೇಮಕಾತಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಪಿಎಸ್‌ಐ ನೇಮಕಾತಿ ಪ್ರಕ್ರಿಯೆ ಉಸ್ತುವಾರಿ ವಹಿಸಿಕೊಂಡಿದ್ದರು. ಅವರ ಮೂಲಕವೇ ಅಕ್ರಮ ನಡೆದಿರುವುದು ಪುರಾವೆಗಳಿಂದ ಗೊತ್ತಾಗಿದೆ. ಪ್ರಕರಣದಲ್ಲಿ ಮತ್ತಷ್ಟು ಆರೋಪಿಗಳ ಕೈವಾಡವಿದ್ದು, ಅವರ ಹೆಸರುಗಳನ್ನು ಶಾಂತಕುಮಾರ್ ಬಾಯ್ಬಿಡುತ್ತಿಲ್ಲ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಶಾಂತಕುಮಾರ್ ಅಧೀನದಲ್ಲಿ ಕೆಲಸ ಮಾಡುತ್ತಿದ್ದ ಹೆಡ್ ಕಾನ್‌ಸ್ಟೆಬಲ್‌ಗಳಾದ ಶ್ರೀಧರ್, ಶ್ರೀನಿವಾಸ್ ಹಾಗೂ ಇತರೆ ನೌಕರನ್ನೂ ಬಂಧಿಸಲಾಗಿದೆ. ಇವರಿಂದ ₹ 2.46 ಕೋಟಿ ಸಹ ಜಪ್ತಿ ಮಾಡಿದೆ. ಈ ಹಣದ ಬಗ್ಗೆಯೂ ಶಾಂತಕುಮಾರ್ ಮಾಹಿತಿ ನೀಡುತ್ತಿಲ್ಲ. ತನಗೇನೂ ಗೊತ್ತಿಲ್ಲವೆಂದೇ ವಾದಿಸುತ್ತಿದ್ದಾರೆ’ ಎಂದೂ ತಿಳಿಸಿವೆ.

‘ಒಎಂಆರ್ ಪ್ರತಿ ಸಂಗ್ರಹಿಸಿದ್ದ ಟ್ರಂಕ್‌ಗಳ ಬೀಗದ ಕೀಗಳು ಮನೆಯಲ್ಲಿ ಸಿಕ್ಕ ಬಗೆಗಿನ ಪ್ರಶ್ನೆಗಳಿಗೂ ಶಾಂತಕುಮಾರ್ ಉತ್ತರಿಸುತ್ತಿಲ್ಲ. ಅವರಮನೆಯಲ್ಲಿ ಸಿಕ್ಕಿರುವ ಕೆಲ ಪುರಾವೆಗಳಿಂದ ಮತ್ತಷ್ಟು ಆರೋಪಿಗಳ ಸುಳಿವು ಸಿಕ್ಕಿದೆ’ ಎಂದೂ ಮೂಲಗಳು ಹೇಳಿವೆ.

ಕಂಪ್ಯೂಟರ್ ಕ್ಷೇತ್ರದಲ್ಲಿ ಶೇ 58 ವಿದೇಶಿ ನೇರ ಹೂಡಿಕೆ

ಬೆಂಗಳೂರು: ರಾಜ್ಯದ ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಅತಿ ಹೆಚ್ಚು ಹೂಡಿಕೆ ಬಂದಿದೆ. ಶೇ 58 ರಷ್ಟು ಹೂಡಿಕೆ ಹರಿದು ಬಂದಿದ್ದು, ಕರ್ನಾಟಕ ದೇಶದಲ್ಲೇ ನಂಬರ್ ಒನ್ ಸ್ಥಾನದಲ್ಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸೋಮವಾರದಿಂದ ದಾವೋಸ್‌ನಲ್ಲಿ ಆರಂಭವಾಗುವ ವಿಶ್ವ ಆರ್ಥಿಕ ಒಕ್ಕೂಟದ ವಾರ್ಷಿಕ ಸಮಾವೇಶದಲ್ಲಿ ಭಾಗಹಿಸಲು ತೆರಳುವುದಕ್ಕೆ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಅವರು, ಕರ್ನಾಟಕದ ನಂತರದ ಸ್ಥಾನ ದೆಹಲಿ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ತಲಾ ಶೇ 17 ರಷ್ಟು ಹೂಡಿಕೆ ಆಗಿದೆ ಎಂದು ಅವರು ಹೇಳಿದರು.

‘ಕಳೆದ ನಾಲ್ಕು ತ್ರೈಮಾಸಿಕಕ್ಕೆ ಹೋಲಿಸಿದರೆ ಕೊನೆಯ ತ್ರೈಮಾಸಿಕದಲ್ಲಿ ದೇಶಕ್ಕೆ ಅತಿ ಹೆಚ್ಚು ವಿದೇಶಿ ನೇರ ಬಂಡವಾಳ ಬಂದಿದೆ. ಇದರಲ್ಲಿ ಸಿಂಹಪಾಲು ಹೂಡಿಕೆ ಕರ್ನಾಟಕಕ್ಕೇ ಹರಿದು ಬಂದಿದೆ. ರಾಜ್ಯಕ್ಕೆ ಇನ್ನಷ್ಟು ಹೆಚ್ಚು ಪ್ರಮಾಣದ ವಿದೇಶಿ ಹೂಡಿಕೆಯನ್ನು ಸ್ವಾಗತಿಸುತ್ತೇನೆ. ಹೂಡಿಕೆದಾರರಿಗೆ ರಾಜ್ಯದಲ್ಲಿ ಅತ್ಯುತ್ತಮ ಗುಣಮಟ್ಟದ ಮೂಲ ಸೌಕರ್ಯವನ್ನು ಕ್ಷಿಪ್ರಗತಿಯಲ್ಲಿ ಕಲ್ಪಿಸಲು ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು. ‘ದಾವೋಸ್ ಆರ್ಥಿಕ ಸಮಾವೇಶದಲ್ಲಿ ವಿಶ್ವದ ಹೆಸರಾಂತ ಪ್ರಮುಖರು ಮತ್ತು ಕೈಗಾರಿಕೋದ್ಯಮಿಗಳನ್ನು ಭೇಟಿ ಮಾಡಲಾಗುವುದು. ವಿಶೇಷವಾಗಿ ನವೆಂಬರ್‌ನಲ್ಲಿ ರಾಜ್ಯದಲ್ಲಿ ನಡೆಯುವ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶಕ್ಕೆ ದೊಡ್ಡ ಮಟ್ಟದಲ್ಲಿ ಪ್ರತಿಕ್ರಿಯೆ ಸಿಗುವ ವಿಶ್ವಾಸವಿದೆ’ ಎಂದೂ ತಿಳಿಸಿದರು.

ಪೂರ್ಣಾವಧಿ ಬೋಧಕರ ಕೊರತೆ–ಸಿಗದ ಪರಿಹಾರ

ಕಾವಾ: 5 ವರ್ಷದಿಂದ ಪ್ರಭಾರಿ ಡೀನ್

• ಮಹಮ್ಮದ್ ನೂಮಾನ್



ಮೈಸೂರಿನಲ್ಲಿರುವ ಚಾಮರಾಜೇಂದ್ರ ದೃಶ್ಯ ಕಲಾ ಕಾಲೇಜು

ಮೈಸೂರು: ಐದು ವರ್ಷ ಕಳೆದರೂ ನೇಮಕವಾಗದ ಡೀನ್, ಪೂರ್ಣಾವಧಿ ಬೋಧಕರ ಕೊರತೆ, ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಸಿಗದ ಸ್ಟೈಪಂಡ್, ಕ್ಯಾಂಪಸ್‌ನ ದಾರಿಯಲ್ಲಿ ವಿದ್ಯಾರ್ಥಿನಿಯರಿಗೆ ಪುಂಡರ ಕಾಟ...

ಇಲ್ಲಿನ ಚಾಮರಾಜೇಂದ್ರ ದೃಶ್ಯ ಕಲಾ ಕಾಲೇಜು (ಕಾವಾ), ಸಾಲು ಸಾಲು ಅಡ್ಡಿಗಳ ನಡುವೆಯೇ ಕಲೆಯ ಶಿಕ್ಷಣ ನೀಡುವ ಕೈಂಕರ್ಯ ಮುಂದುವರಿಸಿದೆ. ಹಲವಾರು ವರ್ಷಗಳಿಂದ ಇರುವ ಸಮಸ್ಯೆಗೆ ಮುಕ್ತಿ ಸಿಗದ ಆಕ್ರೋಶ ವಿದ್ಯಾರ್ಥಿಗಳಲ್ಲಿ ಮನೆಮಾಡಿದೆ.

2017 ರಿಂದಲೂ ಇಲ್ಲಿ ಪ್ರಭಾರಿ ಡೀನ್‌ಗಳದ್ದೇ ಕಾರುಬಾರು. ಬಿ.ಆರ್. ಪೂರ್ಣಿಮಾ ಈಗ ಪ್ರಭಾರಿ ಡೀನ್ ಆಗಿದ್ದಾರೆ. ಮೈಸೂರು ಜಿಲ್ಲಾ ಪಂಚಾಯಿತಿ ಸಿಇಒ ಆಗಿರುವ ಅವರಿಗೆ ಪುರಾತತ್ವ ಇಲಾಖೆ ಆಯುಕ್ತರ ಹೆಚ್ಚುವರಿ ಜವಾಬ್ದಾರಿಯೂ ನೀಡಲಾಗಿದೆ.

ಪೂರ್ಣಾವಧಿ ಬೋಧಕರ ಕೊರತೆಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಹಿರಿಯ ವಿದ್ಯಾರ್ಥಿಗಳೇ ಇಲ್ಲಿ ತಾತ್ಕಾಲಿಕ ಬೋಧಕರು. ಒಟ್ಟು 16 ಕಾಯಂ ಬೋಧಕರ ಹುದ್ದೆಯಲ್ಲಿ ಆರು ಮಂದಿಯಷ್ಟೇ ಇದ್ದಾರೆ. ಆರು ರೀಡರ್‌ಗಳ ಹುದ್ದೆ ಹಲವು ವರ್ಷಗಳಿಂದ ಖಾಲಿಯಿದೆ. ಹಿಂದೆ ಇದ್ದವರು ನಿವೃತ್ತಿಯಾದ ಬಳಿಕ ಹೊಸಬರನ್ನು ನೇಮಿಸಿಯೇ ಇಲ್ಲ!

ಆರು ಕಾಯಂ ಬೋಧಕರಲ್ಲಿ ಒಬ್ಬರಾಗಿರುವ ವೀರಣ್ಣ ಅರ್ಕಸಾಲಿ ಅವರನ್ನು ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರಾಗಿ ನೇಮಿಸಲಾಗಿದೆ. ರಾಜ್ಯಮಟ್ಟದಲ್ಲಿ ಕೆಲಸ ಮಾಡಬೇಕಿರುವ ಅವರಿಗೆ ಇಲ್ಲಿನ ಹುದ್ದೆಗೆ ನ್ಯಾಯ ಒದಗಿಸುವುದು ಸವಾಲಿನ ಕೆಲಸ.

‘ಬೇರೆ ಇಲಾಖೆ, ಶೈಕ್ಷಣಿಕ ಹಿನ್ನೆಲೆ ಹೊಂದಿರುವವರನ್ನು ಡೀನ್ ಆಗಿ ನೇಮಿಸಿರುವುದರಿಂದ ಶೈಕ್ಷಣಿಕ ಪ್ರಗತಿ ಕುಂಠಿತವಾಗುತ್ತಿದೆ. ಬೇರೆ 2–3 ಕಡೆ ಜವಾಬ್ದಾರಿ ಇರುವವರನ್ನು ನೇಮಿಸಿದರೆ, ಅವರಿಗೆ ನಮ್ಮ ಕಡೆ ಗಮನಹರಿಸಲು ಆಗುತ್ತಿಲ್ಲ. ಪೂರ್ಣಾವಧಿ ಡೀನ್ ನೇಮಕ ಆಗಬೇಕು’ ಎಂಬುದು ವಿದ್ಯಾರ್ಥಿಗಳ ಒತ್ತಾಯ.

‘ಸ್ಟೈಪಂಡ್ ಕಾಲ ಕಾಲಕ್ಕೆ ಸಿಗದೇ ಇರುವುದರಿಂದ ಕಲಿಕೆಗೆ ಅಗತ್ಯದ ಪರಿಕರಗಳನ್ನು ಕೊಳ್ಳಲು ಆಗುತ್ತಿಲ್ಲ. ಪ್ರತಿ ತಿಂಗಳು ಸ್ಟೈಪಂಡ್ ಸಿಗಬೇಕು. ಸಂಜೆ 4.30 ಆಗುತ್ತಲೇ ಕಾಲೇಜಿಗೆ ಬೀಗ ಹಾಕುವರು. ಈ ಹಿಂದೆಯೆಲ್ಲಾ ರಾತ್ರಿ 8ರ ವರೆಗೂ ನಾವು ಕಾಲೇಜಿನಲ್ಲಿ ಇದ್ದುಕೊಂಡು ಕಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದೆವು. ಅದಕ್ಕೆ ಅವಕಾಶ ನೀಡಬೇಕು’ ಎಂದು ಆಗ್ರಹಿಸಿದ್ದಾರೆ.

‘ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಕಾಟಾಚಾರಕ್ಕೆ ಭೇಟಿ ನೀಡುತ್ತಾರೆ. ಕಾಲೇಜು ಎದುರಿಸುತ್ತಿರುವ ನಿಜವಾದ ಸಮಸ್ಯೆಗಳನ್ನು ಅವರ ಮುಂದೆ ಮುಚ್ಚಿಡಲಾಗುತ್ತದೆ. 10 ರಿಂದ 12 ವರ್ಷಗಳಿಂದ ಇಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವವರನ್ನು ಕಾಯಂಗೊಳಿಸಬೇಕು ಎಂಬ ಬೇಡಿಕೆ ಈಡೇರಿಲ್ಲ. ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ, ರಾಜಕೀಯ ಕಾರಣಗಳಿಂದಾಗಿ ಆಗುತ್ತಿಲ್ಲ’ ಎಂಬ ಆರೋಪವೂ ಇದೆ.

ಮುಖ್ಯಾಂಶಗಳು

- ಮೈಸೂರಿನ ಚಾಮರಾಜೇಂದ್ರ ದೃಶ್ಯ ಕಲಾ ಕಾಲೇಜು
- ಹಲವು ವರ್ಷಗಳಿಂದ ಮುಂದುವರಿದ ಸಮಸ್ಯೆ
- ಆರು ರೀಡರ್ ಹುದ್ದೆಗಳು ಖಾಲಿ

ಕಾಯಂ ಬೋಧಕರ ಹುದ್ದೆ ಹಲವು ವರ್ಷಗಳಿಂದ ಖಾಲಿಯಿದೆ. ಅತಿಥಿ ಉಪನ್ಯಾಸಕರ ಮೂಲಕ ಪಾಠ ಸರಿದೂಗಿಸಿಕೊಂಡು ಹೋಗುತ್ತಿದ್ದೇವೆ

ವಿಜಯ್‌ರಾವ್
ಅಕಾಡೆಮಿಕ್ ಮುಖ್ಯಸ್ಥರು, ಕಾವಾ

ಪುಂಡರ ಕಾಟ

ಮೈಸೂರಿನ ಹೃದಯ ಭಾಗದಲ್ಲಿದ್ದ ‘ಕಾವಾ’ ಏಳು ವರ್ಷಗಳ ಹಿಂದೆ ಬನ್ನೂರು ರಸ್ತೆಯ ಸಿದ್ಧಾರ್ಥನಗರ ಬಡಾವಣೆಯ ನೂತನ ಕಟ್ಟಡಕ್ಕೆ ಸ್ಥಳಾಂತರಗೊಂಡಿತ್ತು. ಮುಖ್ಯರಸ್ತೆಯಿಂದ ಸ್ವಲ್ಪ ಒಳಭಾಗದಲ್ಲಿರುವ ಕಾಲೇಜಿಗೆ ಕಾಲ್ನಡಿಗೆಯಲ್ಲಿ ತೆರಳುವ ವಿದ್ಯಾರ್ಥಿನಿಯರು ಪುಂಡರ ಕಾಟ ಎದುರಿಸಬೇಕು.

ಬೈಕ್‌ಗಳಲ್ಲಿ ಬರುವ ಯುವಕರು ಕೀಟಲೆ ಮಾಡುತ್ತಾರೆ ಎಂಬ ವಿದ್ಯಾರ್ಥಿನಿಯರ ದೂರಿಗೆ ಸ್ಪಂದಿಸಿರುವ ಕಾಲೇಜು, ಬೆಳಿಗ್ಗೆ ಮತ್ತು ಸಂಜೆ ವೇಳೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿದೆ. ಇಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು ಎಂಬುದು ವಿದ್ಯಾರ್ಥಿನಿಯರ ಬೇಡಿಕೆ.

ಉತ್ತರಪ್ರದೇಶ: ಹಿಂದೂ ಮಹಾಸಭಾದ ಅಧ್ಯಕ್ಷರ ಸೆರೆ, ಮೆರವಣಿಗೆ ನಿಷೇಧ

ಜ್ಞಾನವಾಪಿ, ಶಾಹಿ ಮಸೀದಿ ಬಳಿಕ ಈಗ ಟೀಲೆವಾಲಿ ಮಸೀದಿ ಸರದಿ

ಪ್ರಜಾವಾಣಿ ವಾರ್ತೆ

ಲಖನೌ: ವಾರಾಣಸಿಯ ಕಾಶಿ ವಿಶ್ವನಾಥ ದೇವಸ್ಥಾನದ ಪಕ್ಕದ ಜ್ಞಾನವಾಪಿ ಮಸೀದಿ ಮತ್ತು ಮಥುರಾದ ಶ್ರೀಕೃಷ್ಣ ಜನ್ಮಭೂಮಿಯ ಪಕ್ಕದ ಶಾಹಿ ಈದ್ಗಾ ಮಸೀದಿಯ ಕುರಿತು ನಡೆಯುತ್ತಿರುವ ಕಾನೂನು ಹೋರಾಟದ ನಡುವೆಯೇ ಕೇಸರಿ ಸಂಘಟನೆಗಳ ಚಿತ್ತವು ಇದೀಗ ಲಖನೌದಲ್ಲಿರುವ ‘ಟೀಲೆವಾಲಿ ಮಸೀದಿ’ಯತ್ತ ಹರಿದಿದೆ.

‘ಟೀಲೆವಾಲಿ ಮಸೀದಿಯು ವಾಸ್ತವವಾಗಿ ಲಕ್ಷ್ಮಣ ತಿಲಾ ಆಗಿದ್ದು, ಹನುಮಾನ್ ಚಾಲೀಸಾ ಪಠಿಸಲು ಮಸಿದೀಯತ್ತ ಮೆರವಣಿಗೆ ನಡೆಸುವುದಾಗಿ’ ಉತ್ತರಪ್ರದೇಶದ ಹಿಂದೂ ಮಹಾಸಭಾದ ಕಾರ್ಯಕರ್ತರು ಪ್ರತಿಜ್ಞೆ ಮಾಡಿದ್ದರು. ಇದರ ಬೆನ್ನಲ್ಲೇ ಮಸೀದಿಯ ಇಮಾಮ್ ಸೈಯದ್ ಫಜ್ಲುಲ್ ಮನ್ನಾನ್ ಅವರು ಈ ಮೆರವಣಿಗೆಯ ವಿರುದ್ಧ ಮುಸ್ಲಿಮರು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದರು.

ವಿಷಯ ತಿಳಿದ ಪೊಲೀಸರು ಭಾನುವಾರ ನಡೆಯಬೇಕಿದ್ದ ಉದ್ದೇಶಿತ ಮೆರವಣಿಗೆಯನ್ನು ನಿಷೇಧಿಸಿದ್ದು, ಶನಿವಾರ ತಡರಾತ್ರಿ ಹಿಂದೂ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ರಿಷಿ ತ್ರಿವೇದಿ ಅವರನ್ನು ಬಂಧಿಸಿದ್ದಾರೆ. ಬಂಧನದ ಬೆನ್ನಲ್ಲೇ ಹಿಂದೂ ಮಹಾಸಭಾದ ನೂರಾರು ಕಾರ್ಯಕರ್ತರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ, ತಕ್ಷಣವೇ ತ್ರಿವೇದಿ ಅವರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

‘ಲಕ್ಷ್ಮಣ ತಿಲ ಮುಕ್ತಿಸಂಕಲ್ಪ ಯಾತ್ರೆಯನ್ನು ನಿಷೇಧಿಸಲಾಗಿದೆ. ಮಸೀದಿಗೆ ಹೋಗುವ ರಸ್ತೆಗಳಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಯಾವ ಸಂಘಟನೆಯೂ ಯಾವುದೇ ಯಾತ್ರೆಯನ್ನು ಕೈಗೊಂಡಿಲ್ಲ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ತಿಳಿಸಿದ್ದಾರೆ.

ಅವಧ್ ಇತಿಹಾಸಕಾರರ ಪ್ರಕಾರ, 16ನೇ ಶತಮಾನದಲ್ಲಿ ನಿರ್ಮಿಸಲಾದ ಟೀಲೆವಾಲಿ ಮಸೀದಿಯು ಪ್ರಸಿದ್ಧ ಇಮಾಂಬರಾ ಬಳಿಯ ಗೋಮತಿ ನದಿಯ ದಡದಲ್ಲಿದೆ. ಈ ಮಸೀದಿಯು ಉತ್ತರಪ್ರದೇಶದ ಅತಿದೊಡ್ಡ ಸುನ್ನಿ ಮಸೀದಿಯಾಗಿದ್ದು, ಇದರ ಪಕ್ಕದಲ್ಲಿರುವ ಬೃಹತ್ ಹುಲ್ಲುಹಾಸಿನಲ್ಲಿ ಏಕಕಾಲಕ್ಕೆ ಸುಮಾರು ಒಂದು ಲಕ್ಷ ಮಂದಿ ಪ್ರಾರ್ಥನೆ ಸಲ್ಲಿಸಬಹುದಾಗಿದೆ.

ಕೇಸರಿ ಸಂಘಟನೆಗಳು ಟೀಲೆವಾಲಿ ಮಸೀದಿಯನ್ನು ಲಕ್ಷಣ ತಿಲಾ ಎಂದು ಪ್ರತಿಪಾದಿಸುತ್ತಿವೆ. ಇದನ್ನು ಮೊಘಲರ ಕಾಲದಲ್ಲಿ ಮಸೀದಿಯಾಗಿ ಪರಿವರ್ತಿಸಲಾಗಿದೆ ಎಂದೂ ಹೇಳುತ್ತಿದ್ದಾರೆ. ಆದರೆ, ಈ ಮಸೀದಿಯನ್ನು 16ನೇ ಶತಮಾನದಲ್ಲಿ ನಿರ್ಮಿಸಲಾಗಿದೆ ಎನ್ನುವ ಹೇಳಿಕೆಗಳನ್ನು ಮುಸ್ಲಿಮರು ತಿರಸ್ಕರಿಸಿದ್ದು, ‘ಇದು ಕೇಸರಿ ಸಂಘಟನೆಗಳ ಪ್ರಚಾರವಲ್ಲದೆ ಬೇರೇನೂ ಅಲ್ಲ’ ಎಂದು ಮಸೀದಿಯ ಇಮಾಮ್ ಸೈಯದ್ ಫಜ್ಲುಲ್ ಮನ್ನಾನ್ ಹೇಳಿದ್ದಾರೆ.

ಇನ್ನೊಂದು ಶಿವಲಿಂಗವಿದೆ: ಜ್ಞಾನವಾಪಿ ಮಸೀದಿಯ ನೆಲಮಾಳಿಗೆಯಲ್ಲಿ ಇನ್ನೊಂದು ಶಿವಲಿಂಗ ಅಸ್ತಿತ್ವದಲ್ಲಿದ್ದು, ಇದು ವಾರಾಣಸಿಯ ಕಾಶಿವಿಶ್ವನಾಥ ದೇವಾಲಯದ ಪಕ್ಕದಲ್ಲಿದೆ ಎಂದು ಕಾಶಿ ವಿಶ್ವನಾಥ ದೇವಾಲಯದ ಮಹಾಂತ (ಮುಖ್ಯ ಅರ್ಚಕ) ಕುಲಪತಿ ತಿವಾರಿ ಭಾನುವಾರ ಹೇಳಿದ್ದಾರೆ.

ಅಲ್ಲಿ ಪೂಜೆಗೆ ಅವಕಾಶ ನೀಡಬೇಕೆಂದು ಕೋರಿ ಜಿಲ್ಲಾ ನ್ಯಾಯಾಲಯದ ಮೊರೆ ಹೋಗಲು ಚಿಂತನೆ ನಡೆಸಿರುವುದಾಗಿ ಹೇಳಿದ್ದಾರೆ.

ಎಸ್ಪಿ ಶಾಸಕರ ಸಭೆ: ಆಜಂ ಖಾನ್ ಗೈರು

ಲಖನೌ(ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಅಧಿವೇಶನದ ಹಿನ್ನೆಲೆಯಲ್ಲಿ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಭಾನುವಾರ ಕರೆದಿದ್ದ ಪಕ್ಷದ ಶಾಸಕರ ಸಭೆಗೆ ಆಜಂ ಖಾನ್ ಹಾಗೂ ಶಿವಪಾಲ್ ಯಾದವ್ ಅವರು ಗೈರು ಹಾಜರಾಗಿದ್ದಾರೆ. ಇತ್ತೀಚೆಗಷ್ಟೇ ಕಾರಾಗೃಹದಿಂದ ಬಿಡುಗಡೆಯಾದ ಆಜಂ ಅನಾರೋಗ್ಯ ಕಾರಣಕ್ಕೆ ಸಭೆಯಲ್ಲಿ ಭಾಗಿಯಾಗಿಲ್ಲ ಎಂದು ಎಸ್‌ಪಿ ಮುಖಂಡರು ತಿಳಿಸಿದ್ದಾರೆ.

ಭಾರಿ ಯಂತ್ರ ಬಳಕೆಗೆ ನಿಷೇಧ

ಮರಳು ಗಣಿಗಾರಿಕೆ: ರಾಜ್ಯ ಸರ್ಕಾರಕ್ಕೆ ಎನ್‌ಜಿಟಿ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನದಿ ಪಾತ್ರಗಳಲ್ಲಿ ಭಾರಿ ಗಾತ್ರದ ಯಂತ್ರೋಪಕರಣಗಳನ್ನು ಬಳಸಿ ಗಣಿಗಾರಿಕೆ ಮಾಡಲು ಗುತ್ತಿಗೆದಾರರಿಗೆ ಅನುಮತಿ ನೀಡದಿರಲು ಕರ್ನಾಟಕ ಸರ್ಕಾರಕ್ಕೆ ರಾಷ್ಟ್ರೀಯ ಹಸಿರು ಪೀಠ (ಎನ್‌ಜಿಟಿ) ಸೂಚಿಸಿದೆ.

‘ಮರಳು ಗಣಿಗಾರಿಕೆಗೆ ಭಾರಿ ಯಂತ್ರೋಪಕರಣಗಳನ್ನು ಬಳಸುವಂತಿಲ್ಲ ಎಂದು ಮರಳು ಗಣಿಗಾರಿಕೆಗೆ ಅನುಮತಿ ನೀಡುವ ವೇಳೆಯೇ ಸಂಬಂಧಪಟ್ಟ ಇಲಾಖೆ ಗುತ್ತಿಗೆದಾರರಿಗೆ ಕಡ್ಡಾಯವಾಗಿ ತಿಳಿಸಬೇಕು. ಭವಿಷ್ಯದಲ್ಲಿ ಗುತ್ತಿಗೆ ಕರಾರು ಪತ್ರ ರಚಿಸುವಾಗ ಅಧಿಕಾರಿಗಳು ಎಚ್ಚರಿಕೆಯಿಂದ ರಚಿಸಬೇಕು’ ಎಂದು ಎನ್‌ಜಿಟಿಯ ದಕ್ಷಿಣ ಪೀಠ ಹೇಳಿದೆ. ವಿಜಯಪುರದ ಶಾಸಕ ಸಾರ್ವಭೌಮ ಬಗಲಿ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ. ರಾಮಕೃಷ್ಣನ್ ನೇತೃತ್ವದ ಎನ್‌ಜಿಟಿ ದಕ್ಷಿಣ ಪೀಠ ಈ ಆದೇಶ ಹೊರಡಿಸಿದೆ.

‘ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜೋಳದಹಡ್ಗಿ ಗ್ರಾಮದ ಬಳಿ ಕೃಷ್ಣಾ ನದಿ ತೀರದಲ್ಲಿ ಎರಡು ಸ್ಥಳಗಳಲ್ಲಿ ಮರಳು ಗಣಿಗಾರಿಕೆ ನಡೆಸಲಾಗುತ್ತಿದೆ. ಇದಕ್ಕಾಗಿ ಜೆಸಿಬಿ ಸೇರಿ ಇತರ ದೊಡ್ಡ ಯಂತ್ರೋಪಕರಣಗಳನ್ನು ಬಳಸಲಾಗುತ್ತಿದೆ. ಇದು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ತಡೆ ಸಚಿವಾಲಯ ನೀಡಿರುವ ಮಾರ್ಗಸೂಚಿಯ ಉಲ್ಲಂಘನೆ ಆಗಿದೆ’ ಎಂದು ಸಾರ್ವಭೌಮ ಅವರು ಸಲ್ಲಿಸಿದ್ದ ಅರ್ಜಿಯಲ್ಲಿ ಹೇಳಲಾಗಿತ್ತು.

ನಿಯಮ ಉಲ್ಲಂಘಿಸಿದವರ ವಿರುದ್ಧ ಕ್ರಮ ಜರುಗಿಸಲು ಕರ್ನಾಟಕ ಗಣಿಗಾರಿಕೆ ಮತ್ತು ಭೂಗರ್ಭಶಾಸ್ತ್ರ ಇಲಾಖೆಗೆ ಎನ್‌ಜಿಟಿ ನಿರ್ದೇಶನ ನೀಡಿದೆ.

ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸಲು ಈಗಾಗಲೇ ಜಂಟಿ ಸಮಿತಿ ರಚಿಸಲಾಗಿದೆ. ಸಮಿತಿ ವಿಧಿಸುವ ದಂಡದ ಜೊತೆ, ಗಣಿಗಾರಿಕೆಗೆ ಅನುಮತಿ ನೀಡಲಾಗಿರುವ ಪ್ರದೇಶದಿಂದ ಹೊರಗೆ ಗಣಿಗಾರಿಕೆ ನಡೆಸಿದವರಿಂದ ಪರಿಸರ ಪರಿಹಾರ ಮೊತ್ತ ವಸೂಲಿ ಮಾಡುವಂತೆ ಗಣಿಗಾರಿಕೆ ಇಲಾಖೆಗೆ ಎನ್‌ಜಿಟಿ ನಿರ್ದೇಶನ ನೀಡಿದೆ.

ಸಂಗೀತ ಕಲಾನಿಧಿ ಪ್ರಶಸ್ತಿ ಘೋಷಣೆ

ಚೆನ್ನೈ: ಸಂಗೀತ ಅಕಾಡೆಮಿಯು 2020-22ನೇ ಸಾಲಿನಲ್ಲಿ ಪ್ರತಿಷ್ಠಿತ ‘ಸಂಗೀತ ಕಲಾನಿಧಿ’ ಸೇರಿದಂತೆ ಇತರ ಪ್ರಶಸ್ತಿಗಳಿಗೆ ಭಾಜನರಾದ ಕಲಾವಿದರ ಹೆಸರನ್ನು ಭಾನುವಾರ ಪ್ರಕಟಿಸಿದೆ.

ಖ್ಯಾತ ಗಾಯಕ ನೈವೇಲಿ ಆರ್. ಸಂತಾನಗೋಪಾಲನ್ (2020), ಪ್ರಖ್ಯಾತ ಮೃದಂಗ ಕಲಾವಿದ ತಿರುವಾರೂರ್ ಭಕ್ತವತ್ಸಲಂ (2021) ಹಾಗೂ ವಯಲಿನ್ ವಾದಕ ಜೋಡಿ ಲಾಲ್‌ಗುಡಿ ಜಿಟಿಆರ್ ಕೃಷ್ಣನ್ ಮತ್ತು ವಿಜಯಲಕ್ಷ್ಮೀ (2022) ಅವರು ಪ್ರತಿಷ್ಠಿತ ‘ಸಂಗೀತ ಕಲಾನಿಧಿ’ ಪ್ರಶಸ್ತಿಗೆ ಭಾಜನರಾಗಿದ್ದಾರೆ.


ಹಾಗೆಯೇ, ನಾಗಸ್ವರ ವಾದಕ ಕೀಳ್‌ವಲೂರು ಎನ್.ಜಿ.ಗಣೇಶನ್ (2020), ಸಂಗೀತಗಾರ್ತಿ ಡಾ.ರಿತಾ ರಾಜನ್(2021) ಮತ್ತು ವೀಣಾ ವಾದಕಿ ಹಾಗೂ ಗಾಯಕಿ ಡಾ.ಆರ್. ಎಸ್ ಜಯಲಕ್ಷ್ಮೀ (2022) ಅವರಿಗೆ ‘ಸಂಗೀತ ಕಲಾ ಆಚಾರ್ಯ’ ಪ್ರಶಸ್ತಿ ನೀಡುವುದಾಗಿ ಅಕಾಡೆಮಿ ಘೋಷಿಸಿದೆ.

ಖ್ಯಾತ ಗಾಯಕ ತಾಮರಕ್ಕಾಡ್ ಗೋವಿಂದನ್ ನಂಬೂದರಿ (2020), ಖ್ಯಾತ ಲಯ ವಾದ್ಯಕಾರ ನೇಮಣಿ ಸೋಮಯಾಜುಲು (2021) ಮತ್ತು ಖಂಜಿರಾ ಕಲಾವಿದ ಎ.ವಿ.ಆನಂದ್ (2022) ಅವರು ಟಿ.ಟಿ.ಕೆ ಪ್ರಶಸ್ತಿಗೆ ಪಾತ್ರರಾಗಿದ್ದಾರೆ ಎಂದು ತಿಳಿಸಿದೆ.

ಡಾ.ವಿ.ಪ್ರೇಮಲತಾ ಅವರಿಗೆ ‘ಸಂಗೀತಗಾರ್ತಿ’ ಪ್ರಶಸ್ತಿ (2020), ಭರತನಾಟ್ಯ ಕಲಾವಿದೆ ರಮಾ ವೈದ್ಯನಾಥನ್ (2020) ಮತ್ತು ನೃತ್ಯ ನಟರಾಜ (2021) ಅವರಿಗೆ ‘ನೃತ್ಯ ಕಲಾನಿಧಿ’ ಪ್ರಶಸ್ತಿ ನೀಡಲಾಗುತ್ತಿದೆ. 2022ನೇ ಸಾಲಿನಲ್ಲಿ ಈ ಪ್ರಶಸ್ತಿಗೆ ಬ್ರಾಘ ಬೆಸ್ಸೆಲ್ ಅವರು ಭಾಜನರಾಗಿದ್ದಾರೆ ಎಂದು ಅಕಾಡೆಮಿ ಘೋಷಿಸಿದೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು 2022ರ ಡಿ.15 ರಂದು ನಡೆಯಲಿರುವ 96ನೇ ವಾರ್ಷಿಕ ಸಂಗೀತ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರಸಕ್ತ ವರ್ಷದ ವಾರ್ಷಿಕ ಸಂಗೀತ ಸಮಾರಂಭವನ್ನು ಭೌತಿಕವಾಗಿ ಆಚರಿಸಲು ಯೋಚಿಸುತ್ತಿರುವುದಾಗಿ ಅಕಾಡೆಮಿ ತಿಳಿಸಿದೆ.

‘ಸರ್ಕಾರ ಬದಲಿಸುವ ಶಕ್ತಿ ರೈತರಿಗಿದೆ’



ಕೆಸಿಆರ್‌ಗೆ ಕೇಜ್ರಿವಾಲ್ ಸ್ವಾಗತ

ಚಂಡೀಗಡ/ನವದೆಹಲಿ(ಪಿಟಿಐ): ರೈತರು ಮನಸು ಮಾಡಿದರೆ, ಸರ್ಕಾರವನ್ನುಬದಲಿಸಬಹುದು ಎಂದು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ಅವರು ಹೇಳಿದ್ದಾರೆ. ಅಲ್ಲದೆ, ರೈತರು ತಮ್ಮ ಬೆಳೆಗಳಿಗೆ ಸಾಂವಿಧಾನಿಕವಾಗಿ ಖಾತ್ರಿಯಿರುವ ಲಾಭದಾಯಕ ಬೆಲೆ ಸಿಗುವವರೆಗೆ ತಮ್ಮ ಹೋರಾಟ ಮುಂದುವರಿಸಬೇಕು ಎಂದು ಸಲಹೆ ನೀಡಿದ್ದಾರೆ.

ದೆಹಲಿ ಹಾಗೂ ಪಂಜಾಬ್ ಮುಖ್ಯಮಂತ್ರಿಗಳಾದ ಅರವಿಂದ್ ಕೇಜ್ರಿವಾಲ್ ಮತ್ತು ಭಗವಂತ ಮಾನ್ ಅವರ ಜೊತೆಗೆ ಭಾನುವಾರ ಕಳೆದ ವರ್ಷ ಕೃಷಿ ಕಾಯ್ದೆಗಳ ಹಿಂಪಡೆಯುವಿಕೆಗೆ ಆಗ್ರಹಿಸಿ ನಡೆಸಿದ ಧರಣಿಯಲ್ಲಿ ಮೃತಪಟ್ಟ ರೈತರಿಗೆ ಗೌರವ ಸಲ್ಲಿಸಿದರು. ಇದಕ್ಕೂ ಮುನ್ನ ಕೆಸಿಆರ್ ಅವರು ಕೇಜ್ರಿವಾಲ್ ಅವರ ನಿವಾಸದಲ್ಲಿ ಭೇಟಿಯಾಗಿ ಮಧ್ಯಾಹ್ನದ ಭೋಜನ ಮಾಡಿದರು.

ಸಂಸದ ಅರ್ಜುನ್ ಸಿಂಗ್ ಮತ್ತೆ ಟಿಎಂಸಿಗೆ

ಕೋಲ್ಕತ್ತ(ಪಿಟಿಐ): ಪಶ್ಚಿಮ ಬಂಗಾಳ ಮೂಲದ ಬಿಜೆಪಿ ಸಂಸದ ಅರ್ಜುನ್ ಸಿಂಗ್ ಅವರು ಭಾನುವಾರ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಮತ್ತೆ ಸೇರ್ಪಡೆಯಾಗಿದ್ದಾರೆ. ಟಿಎಂಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರು, ಸಿಂಗ್ ಅವರನ್ನು ಬರಮಾಡಿಕೊಂಡರು.

2019ರ ಲೋಕಸಭೆ ಚುನಾವಣೆ ವೇಳೆ ಸಿಂಗ್ ಅವರು ಟಿಎಂಸಿ ತೊರೆದು, ಬಿಜೆಪಿ ಸೇರಿದ್ದರು. ಬರಾಕ್‌ಪೊರ್ ಲೋಕಸಭಾ ಕ್ಷೇತ್ರದಿಂದ ಸಂಸತ್ತು ಪ್ರವೇಶಿಸಿದ್ದರು. ಪಕ್ಷ ಸೇರುತ್ತಿರುವ ಸಂಸದ ಅರ್ಜುನ್ ಸಿಂಗ್ ಅವರಿಗೆ ಸ್ವಾಗತ ಎಂದು ಟಿಎಂಸಿ ಟ್ವೀಟ್ ಮಾಡಿದೆ.

ಕೋರ್ಸ್ ಆಯ್ಕೆಗೆ ಮುನ್ನ...

ಪ್ರದೀಪ್ ವೆಂಕಟರಾಮ್

ಈಗಷ್ಟೇ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಬಂದಿದೆ. ಬಹುತೇಕ ಪೋಷಕರು, ಮಕ್ಕಳಿಗೆ ಪಿಯುಸಿಯಲ್ಲಿ ಯಾವ ಕೋರ್ಸ್ ತೆಗೆದುಕೊಳ್ಳಬೇಕು? ಭವಿಷ್ಯದ ಬೆಳವಣಿಗೆಯ ದೃಷ್ಟಿಯಿಂದ ಯಾವ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕು ಎಂಬ ಪ್ರಶ್ನೆಗಳು ಕಾಡುತ್ತಿವೆ.

ಬಹಳ ವರ್ಷಗಳಿಂದ ಸಾಮಾನ್ಯವಾಗಿ ಒಂದು ರೂಢಿಯಲ್ಲಿರುವ ಕ್ರಮ ಏನೆಂದರೆ, 'ಹೆಚ್ಚಿಗೆ ಅಂಕಗಳು ಬಂದರೆ ವಿಜ್ಞಾನ, ಕಡಿಮೆ ಅಂಕ ಬಂದರೆ 'ಕಲಾ ವಿಭಾಗ' ಆಯ್ಕೆ ಮಾಡಿಕೊಳ್ಳಲು ನಿರ್ಧಾರ ಮಾಡುವುದು. ಆದರೆ, ಇದೊಂದು ಅವೈಜ್ಞಾನಿಕ ಕ್ರಮ. ಮಾತ್ರವಲ್ಲ, ವಿದ್ಯಾರ್ಥಿಗಳ ಭವಿಷ್ಯಕ್ಕೂ ಮಾರಕವಾಗುವಂತಹ ಕ್ರಮ.

> ಯಾವುದೇ ಕೋರ್ಸ್ ಆಯ್ಕೆ ಮಾಡಿಕೊಳ್ಳುವ ಮುನ್ನ ವಿದ್ಯಾರ್ಥಿಗಳು ವೃತ್ತಿ ಯೋಜನೆ ಮಾಡಿಕೊಳ್ಳಬೇಕು. ಈ ಆಯ್ಕೆ ಪ್ರಕ್ರಿಯೆಯನ್ನು ಎಸ್ಸೆಸ್ಸೆಲ್ಸಿಯಿಂದಲೇ ಆರಂಭಿಸಬೇಕು.

ಎಸ್ಸೆಸ್ಸೆಲ್ಸಿ ನಂತರ ಮುಂದೇನು?

ಯೋಚನೆಗಳು ಬದಲಾಗಬೇಕು

ಶಿಕ್ಷಣ, ಔದ್ಯೋಗಿಕ ಕ್ಷೇತ್ರಗಳಲ್ಲಾಗುತ್ತಿರುವ ಬೆಳವಣಿಗೆಗೆ ಅನುಸಾರವಾಗಿ ನಮ್ಮ ಯೋಚನೆಗಳೂ ಬದಲಾಗಬೇಕಿದೆ. ಈಗ 'ಮೊದಲು ಕೋರ್ಸ್, ನಂತರ ವೃತ್ತಿಯ ಆಯ್ಕೆ' ಎಂದು ಯೋಚಿಸುತ್ತಿದ್ದೇವೆ. ಆದರೆ, ಈಗಿನ ಸನ್ನಿವೇಶದಲ್ಲಿ ಬಹಳಷ್ಟು ವಿದ್ಯಾರ್ಥಿಗಳು ಕೋರ್ಸ್ ಮುಗಿಸಿದ ನಂತರ ಯಾವ ವೃತ್ತಿ ಆಯ್ಕೆ ಮಾಡಿಕೊಳ್ಳಬೇಕೆಂಬ ಗೊಂದಲದಲ್ಲಿದ್ದಾರೆ. ಅದರಲ್ಲೂ, ಸ್ನಾತಕೋತ್ತರ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಲ್ಲೂ ಇಂತಹ ಗೊಂದಲವಿರುವುದನ್ನು ನಾವು ಗಮನಿಸುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಮಕ್ಕಳ ಭವಿಷ್ಯದ ದೃಷ್ಟಿಯಿಂದ 'ಮೊದಲು ವೃತ್ತಿಯ ಆಯ್ಕೆ, ನಂತರ ಕೋರ್ಸ್ ಆಯ್ಕೆ' ಎಂಬ ಪದ್ಧತಿಯನ್ನು ಅನುಸರಿಸುವುದು ಒಳ್ಳೆಯದು. ಅದು ಈ ಎಸ್ಸೆಸ್ಸೆಲ್ಸಿ ನಂತರದ ಕೋರ್ಸ್ ಆಯ್ಕೆಯಿಂದಲೇ ಆರಂಭವಾಗಬೇಕು.

ಈ ಸಂದರ್ಭದಲ್ಲಿ ಕೆಲವು ವರ್ಷಗಳ ಹಿಂದೆ ನಡೆದ ಘಟನೆಯೊಂದು ನೆನಪಾಗುತ್ತಿದೆ. ಅದು ಪ್ರತಿಷ್ಠಿತ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದ ಸಮಯ. ಅಲ್ಲಿದ್ದ ಪೋಷಕರೊಬ್ಬರು ತಮ್ಮ ಮಗ ಅರುಣ್‌ಗೆ ಎಂಜಿನಿಯರಿಂಗ್‌ಗೆ ಸೇರಿಸಬೇಕು ಅಂತ ಯೋಚಿಸಿದ್ದೇವೆ ಎಂದರು. ಆದರೆ, ಆ ಹುಡುಗನಿಗೆ ಪಾಕಶಾಸ್ತ್ರಜ್ಞ (ಶೆಫ್) ಆಗುವ ಕನಸು. ನಾನು 'ನಿಮ್ಮ ಮಗನ ಆಸಕ್ತಿ ಪ್ರಕಾರ ಓದಿಸಿ' ಎಂದು ಸಲಹೆ ನೀಡಿದೆ. ಆದರೆ ಪೋಷಕರು, ಸಲಹೆಗೆ ವಿರುದ್ಧವಾಗಿ ಆತನನ್ನು ಎಂಜಿನಿಯರಿಂಗ್‌ಗೆ ಸೇರಿಸಿದರು. ತನ್ನ ಕನಸೆಲ್ಲಾ ನುಚ್ಚುನೂರಾಗಿ ತೀವ್ರವಾದ ಖಿನ್ನತೆಗೆ ಒಳಗಾದ ಅರುಣ್, ಎಂಜಿನಿಯರಿಂಗ್ ಕೋರ್ಸ್‌ನ ಮೊದಲೆರಡು ಸೆಮಿಸ್ಟರ್‌ಗಳಲ್ಲಿ ಅನುತ್ತೀರ್ಣನಾದ. ನಂತರ ಎಚ್ಚೆತ್ತ ಪೋಷಕರು, ಅರುಣ್‌ನನ್ನು ಪಾಕಶಾಸ್ತ್ರದ ಕೋರ್ಸ್‌ಗೆ ಸೇರಿಸಿದರು. ಈಗ ಅರುಣ್, ಒಂದು ಪ್ರತಿಷ್ಠಿತ ಹೋಟೆಲ್‌ನ ಸಂತೃಪ್ತ ಉದ್ಯೋಗಿ.

ಮೇಲಿನ ಘಟನೆಯನ್ನು ಉಲ್ಲೇಖಿಸಿ ಹೇಳುವುದಾದರೆ; ಬದುಕಿನ ಪಾಠಶಾಲೆಯಲ್ಲಿ ಯಶಸ್ಸು ಗಳಿಸಲು ಇಂಥದ್ದೇ ಕೋರ್ಸ್ ಅಥವಾ ವೃತ್ತಿಯನ್ನು ಅನುಸರಿಸಬೇಕೆಂಬ ನಿಯಮವೇನಿಲ್ಲ. ಆದರೆ, ತಮಗೆ ಆಸಕ್ತಿಯಿರುವ, ಒಲವಿರುವ, ಸ್ವಾಭಾವಿಕ ಪ್ರತಿಭೆಯಿರುವ ವೃತ್ತಿಯನ್ನು ಅನುಸರಿಸಿದರೆ ಯಶಸ್ಸು ಸುಲಭವೆನ್ನುವುದು ನಿರ್ವಿವಾದ.

ವೃತ್ತಿ ಯೋಜನೆ: ಏನು? ಹೇಗೆ?

ವಿದ್ಯಾಭ್ಯಾಸದ ನಂತರ ಯಾವ ವೃತ್ತಿಗೆ ಸೇರಬೇಕು ಎಂಬುದನ್ನು ಗುರುತಿಸಿ, ಅದಕ್ಕೆ ಅನುಗುಣವಾಗಿ ಯಾವ ಕೋರ್ಸ್‌ಗಳನ್ನು ಮಾಡಬೇಕು ಎಂಬ ಪರಿಕಲ್ಪನೆಯೇ ವೃತ್ತಿ ಯೋಜನೆ. ಎಸ್‌ಎಸ್‌ಎಲ್‌ಸಿ ಮುಗಿಸಿ ಮುಂದಿನ ಹಂತಕ್ಕೆ ಹೋಗಬಯಸುವ ಎಲ್ಲಾ ವಿದ್ಯಾರ್ಥಿಗಳಿಗೆ, ಈ ಕೆಳಗೆ ವಿವರಿಸಿರುವ ಕ್ರಮದಲ್ಲಿ ವೃತ್ತಿ ಯೋಜನೆಯನ್ನು ಮಾಡಬಹುದು(ವೃತ್ತಿಯೋಜನೆಯ ಪ್ರಮುಖ 9 ಹಂತಗಳನ್ನು ಪಟ್ಟಿಯಲ್ಲಿ ನೀಡಿದೆ. ಅದನ್ನು ಗಮನಿಸಿ).

- ವಿದ್ಯಾರ್ಥಿಯ ಆಸಕ್ತಿ, ಒಲವು, ಪ್ರತಿಭೆ, ಕೌಶಲಗಳನ್ನು ಗುರುತಿಸಿ, ಸ್ವಯಂ-ಮೌಲ್ಯಮಾಪನ ಮಾಡಬೇಕು.
- ವೈಯಕ್ತಿಕ/ಕುಟುಂಬದ ಮೌಲ್ಯಗಳು, ಸವಾಲುಗಳು, ಅಗತ್ಯಗಳನ್ನು ಗುರುತಿಸಿ.
- ಯಾವ ವೃತ್ತಿ ಸರಿಹೊಂದಬಹುದು ಎಂದು ಅಂದಾಜು ಮಾಡಿ, ದೀರ್ಘಾವಧಿಯಲ್ಲೂ ಆ ವೃತ್ತಿಗೆ ಬೇಡಿಕೆ ಇರುತ್ತದೆಯೇ ಎಂದು ಖಚಿತ ಪಡಿಸಿಕೊಳ್ಳಿ.
- ವೃತ್ತಿಯ ಮತ್ತು ವೈಯಕ್ತಿಕ ಬದುಕಿನ ಧ್ಯೇಯಗಳನ್ನು ನಿಶ್ಚಯಿಸಿ, ಶಿಕ್ಷಣದ ವಿವಿಧ ಹಂತಗಳ ಅವಶ್ಯಕತೆಗಳನ್ನು ತೀರ್ಮಾನಿಸಿ.
- ಅವಶ್ಯಕತೆಗಳಿಗೆ ತಕ್ಕಂತೆ ಮಾಡಬೇಕಾದ ಕೋರ್ಸ್‌ಗಳು, ಪ್ರವೇಶ ಪರೀಕ್ಷೆಗಳು, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಗುರುತಿಸಿ.
- ಅಲ್ಪಾವಧಿ ಮತ್ತು ದೀರ್ಘಾವಧಿ ಮೈಲಿಗಲ್ಲುಗಳೊಂದಿಗೆ, ವೃತ್ತಿ ಯೋಜನೆಯನ್ನು ರೂಪಿಸಿ.

ಈ ರೀತಿ, ಸುದೀರ್ಘವಾದ ವೃತ್ತಿಯೋಜನೆಯ ರೂಪುರೇಷೆಗಳನ್ನು, ಡೈರಿಯಲ್ಲಿ ಅಥವಾ ಕಂಪ್ಯೂಟರ್‌ನಲ್ಲಿ ದಾಖಲಿಸಿ, ಆಗಿಂದಾಗ್ಗೆ ಪರಿಶೀಲಿಸಿ, ಪರಿಷ್ಕರಿಸುತ್ತಿರಬೇಕು.

ವೃತ್ತಿಯ ಪ್ರಾಮುಖ್ಯವನ್ನೂ, ಶಿಕ್ಷಣದ ಅಗತ್ಯಗಳನ್ನೂ, ವಿದ್ಯಾರ್ಥಿಗಳು ಮತ್ತು ಪೋಷಕರು ಅರಿತು, ಮುಕ್ತ ಮನಸ್ಸಿನಿಂದ ಚರ್ಚಿಸಿ, ಸೂಕ್ತವಾದ ಮತ್ತು ಸಾಧಿಸಬಹುದಾದ ವೃತ್ತಿಯೋಜನೆ ರೂಪಿಸಿ, ಅದರಂತೆ ಅನುಷ್ಠಾನ ಮಾಡಬೇಕು. ಅಗತ್ಯವಿದ್ದರೆ, ವೃತ್ತಿ ಸಮಾಲೋಚಕರ ಮಾರ್ಗದರ್ಶನವನ್ನು ಪಡೆಯಿರಿ.

(ಲೇಖಕರು ಶಿಕ್ಷಣ ತಜ್ಞರು ಮತ್ತು ವೃತ್ತಿ ಸಲಹೆಗಾರರು)

ಮುಂದಿನ ವಾರ: ವೃತ್ತಿಶಿಕ್ಷಣದ ಕುರಿತ ಮಾಹಿತಿ



ವೃತ್ತಿ ಯೋಜನೆಯ ಚೌಕಟ್ಟು (ಮುಖ್ಯ ಹಂತಗಳು)

1. ಸ್ವಯಂ-ಮೌಲ್ಯಮಾಪನ: ಆಸಕ್ತಿ/ಒಲವು/ಪ್ರತಿಭೆ/ಕೌಶಲಗಳನ್ನು ಗುರುತಿಸಿ	ಸೇವಾ ಮನೋಭಾವ, ಜ್ಞಾಪಕ ಶಕ್ತಿ, ನಿಷ್ಠೆ, ಪ್ರಾಮಾಣಿಕತೆ, ಸಮಯದ ನಿರ್ವಹಣೆ, ವೃತ್ತಿ/ವೈಯಕ್ತಿಕ ಬದುಕಿನ ಸಮತೋಲನ ಇತ್ಯಾದಿ	ಗಣಿತದಲ್ಲಿ ತಜ್ಞತೆ, ವಿಶ್ಲೇಷಾತ್ಮಕ ಕೌಶಲ, ಯೋಜನೆಯ ನಿರ್ವಹಣೆ, ತಾಂತ್ರಿಕ ಕೌಶಲ ಇತ್ಯಾದಿ	ತ್ವರಿತ ಗ್ರಹಿಕೆ, ವ್ಯಾಪಾರೋದ್ಯಮ ಕೌಶಲ, ನಾಯಕತ್ವದ ಸಾಮರ್ಥ್ಯ, ಸಂವಹನ ಕೌಶಲ, ಆತ್ಮವಿಶ್ವಾಸ ಇತ್ಯಾದಿ	ಮಾನವ ಶಾಸ್ತ್ರ, ಅರ್ಥಶಾಸ್ತ್ರ, ಭಾಷೆ, ಇತಿಹಾಸ, ಸಮಾಜ ಕಲ್ಯಾಣ, ಸೃಜನಶೀಲತೆ, ಕಲೆಗಾರಿಕೆ, ಪರಿಸರ, ಕ್ರೀಡೆ, ಅಂತರ ವೈಯಕ್ತಿಕ ನೈಪುಣ್ಯ, ಅನುಭೂತಿ ಇತ್ಯಾದಿ.
2. ಆಸಕ್ತಿ, ಒಲವು, ಸ್ವಾಭಾವಿಕ ಪ್ರತಿಭೆಗೆ ಸರಿಹೊಂದುವಂತಹ ವೃತ್ತಿಗೆ ದೀರ್ಘಾವಧಿಯಲ್ಲೂ ಬೇಡಿಕೆ ಇರುತ್ತದೆಯೇ ಎಂದು ಖಚಿತ ಪಡಿಸಿಕೊಳ್ಳಿ.				
3. ವೈಯಕ್ತಿಕ/ಕುಟುಂಬದ ಮೌಲ್ಯಗಳು, ಸವಾಲುಗಳು, ಅಗತ್ಯಗಳು, ಧ್ಯೇಯಗಳನ್ನು ಗುರುತಿಸಿ, ಅಲ್ಪಾವಧಿ ಮತ್ತು ದೀರ್ಘಾವಧಿ ಮೈಲಿಗಲ್ಲುಗಳೊಂದಿಗೆ, ವೃತ್ತಿ ಯೋಜನೆಯನ್ನು ರೂಪಿಸಿ.				
4. ವೃತ್ತಿ ಯೋಜನೆಯ ಗುರಿ	ವೈದ್ಯ, ವಿಜ್ಞಾನಿ, ಕೃಷಿ ಉದ್ಯಮಿ, ಇತ್ಯಾದಿ	ಎಂಜಿನಿಯರ್, ವಿಜ್ಞಾನಿ, ಸ್ವಯಂ-ಉದ್ಯಮಿ ಇತ್ಯಾದಿ	ಬ್ಯಾಂಕರ್, ಚಾರ್ಟೆಡ್ ಅಕೌಂಟೆಂಟ್, ಕಾರ್ಪೋರೇಟ್ ಉದ್ಯೋಗಿ, ವಾಣಿಜ್ಯೋದ್ಯಮಿ, ಇತ್ಯಾದಿ	ಸರ್ಕಾರಿ ಅಧಿಕಾರಿ,ಸಾಮಾಜಿಕ ವಿಜ್ಞಾನಿ, ಪತ್ರಕರ್ತ, ಸಾಹಿತಿ, ಅಧ್ಯಾಪಕ, ಕಲಾವಿದ, ವೃತ್ತಿ ಸಲಹೆಗಾರ, ಕ್ರೀಡಾಪಟು, ಇವೆಂಟ್ಸ್ ಮ್ಯಾನೇಜರ್ ಇತ್ಯಾದಿ.
5. ಪಿಯುಸಿ ಆಯ್ಕೆಗಳು	ವಿಜ್ಞಾನ (ಸೈನ್ಸ್)	ವಿಜ್ಞಾನ (ಸೈನ್ಸ್) ಅಥವಾ ಡಿಪ್ಲೊಮಾ (ಟೆಕ್ನಿಕಲ್/ ನಾನ್ ಟೆಕ್ನಿಕಲ್)	ವಾಣಿಜ್ಯ (ಕಾಮರ್ಸ್)	ಕಲಾ ವಿಭಾಗ (ಆರ್ಟ್ಸ್)
6. ಪಿಯುಸಿ ವಿಷಯಗಳು	ಭೌತ ಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ ಇತ್ಯಾದಿ	ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಶಾಸ್ತ್ರ, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ಸ್ ಇತ್ಯಾದಿ	ಅಕೌಂಟೆನ್ಸಿ, ವ್ಯಾಪಾರೋದ್ಯಮ, ಗಣಿತ, ಕಂಪ್ಯೂಟರ್ಸ್, ಸಂಖ್ಯಾಶಾಸ್ತ್ರ ಇತ್ಯಾದಿ	ಸಮಾಜಶಾಸ್ತ್ರ, ಮಾನವ ಶಾಸ್ತ್ರ(ಆಂತ್ರೊಪಾಲಜಿ), ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ತರ್ಕಶಾಸ್ತ್ರ, ಮನೋವಿಜ್ಞಾನ, ಭಾಷೆಗಳು ಇತ್ಯಾದಿ.
7. ಪಿಯುಸಿ ನಂತರದ ಕೋರ್ಸ್‌ಗಳು	ಎಂಬಿಬಿಎಸ್, ಬಿಡಿಎಸ್, ಬಿಎಎಂಎಸ್, ಬಿವಿಎಸ್‌ಸಿ, ಬಿಪಿಟಿ, ಪ್ಯಾರ ಮೆಡಿಕಲ್, ಬಿಎಸ್‌ಸಿ (ಕೃಷಿ ಸಂಬಂಧಿತ), ಇತ್ಯಾದಿ	ಬಿಇ/ಬಿಟೆಕ್, ಬಿಆರ್ಕ್, ಬಿಎಸ್‌ಸಿ (ಹಲವಾರು ಆಯ್ಕೆಗಳಿವೆ) ಎನ್‌ಡಿಎ, ಬಿಸಿಎ, ಇತ್ಯಾದಿ	ಬಿಕಾಂ (ಹಲವಾರು ಆಯ್ಕೆಗಳಿವೆ), ಬಿಬಿಎಂ, ಸಿಎ, ಎಸಿಎಸ್, ಐಸಿಡಬ್ಲ್ಯು ಇತ್ಯಾದಿ	ಬಿಎ (ಹಲವಾರು ಆಯ್ಕೆಗಳಿವೆ), ಎಲ್‌ಎಲ್‌ಬಿ, ಬಿವಿಎ, ಬಿಎಸ್‌ಡಬ್ಲ್ಯು, ಬಿಬಿಎ, ಬಿಪಿಇಡಿ ಇತ್ಯಾದಿ
8. ಉನ್ನತ ಶಿಕ್ಷಣದ ಆಯ್ಕೆಗಳು	ಎಂಎಸ್, ಎಂಡಿ, ಎಂಎಸ್‌ಸಿ, ಪಿಎಚ್‌ಡಿ, ಇತ್ಯಾದಿ	ಎಂಇ/ಎಂಟೆಕ್, ಎಂಎಸ್‌ಸಿ, ಎಂಸಿಎ, ಪಿಎಚ್‌ಡಿ ಇತ್ಯಾದಿ	ಎಂಕಾಂ, ಎಂಬಿಎ, ಸಿಎ, ಎಸಿಎಸ್, ಪಿಎಚ್‌ಡಿ ಇತ್ಯಾದಿ	ಐಎಎಸ್/ಕೆಎಎಸ್, ಬಿಇಡಿ, ಎಂಎ, ಎಂಬಿಎ, ಎಂಎಸ್‌ಡಬ್ಲ್ಯು, ಪಿಎಚ್‌ಡಿ ಇತ್ಯಾದಿ
9. ಕೋರ್ಸ್ ಮತ್ತು ವೃತ್ತಿಗೆ ಅನುಗುಣವಾಗಿ, ವ್ಯಕ್ತಿತ್ವ ಅಭಿವೃದ್ಧಿಗಾಗಿ/ಕೌಶಲಾಭಿವೃದ್ಧಿಗಾಗಿ ಹೆಚ್ಚುವರಿ ಸರ್ಟಿಫಿಕೆಟ್ ಕೋರ್ಸ್/ಡಿಪ್ಲೊಮಾ ಮಾಡುವುದು ಸೂಕ್ತ.				
ನೆನಪಿರಲಿ: ವೃತ್ತಿ ಯೋಜನೆಯ ಈ ಉದಾಹರಣೆಗಳು ಸಂಕ್ಷಿಪ್ತವಾದ ವಿವರಣೆಗಾಗಿ ಮಾತ್ರ ಇದನ್ನೇ ವೈಯಕ್ತಿಕ ಮಾರ್ಗದರ್ಶನವೆಂದು ಭಾವಿಸಬಾರದು.				

ಸ್ವಪ್ರೇರಣೆಯೇ ಸಾಧನೆಗೆ ಸಂಜೀವಿನಿ



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

1. ಬಿಇ ಮುಗಿಸಿ ಕೆಲಸಕ್ಕೆ ಹೋಗದೆ ಸಂಪೂರ್ಣ ಸಮಯವನ್ನು ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಗೆ ಮೀಸಲಿಟ್ಟಿದ್ದೇನೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಡೆಯುತ್ತಿರುವ ಅಕ್ರಮ ನೋಡುತ್ತಿದ್ದರೆ, ಕೆಲಸ ಪಡೆಯಲು ಸಾಧ್ಯವೇ?

ಧನ್‌ರಾಜ್ ಎನ್.ಪಿ., ಬೆಂಗಳೂರು

ಸಾಧನೆಯ ಹಾದಿಯಲ್ಲಿ, ಆಂತರಿಕ ಮತ್ತು ಬಾಹ್ಯ ಅಡಚಣೆಗಳು, ವೈಫಲ್ಯಗಳು, ವಿಳಂಬಗಳು ಸಾಮಾನ್ಯ. ಇಂಥ ಸವಾಲುಗಳನ್ನು ನಿರೀಕ್ಷಿಸಿ, ಸ್ಥಿತಪ್ರಜ್ಞೆಯಿಂದಿದ್ದರೆ ಸೃಜನಶೀಲ ಚಿಂತನೆ ಸಾಧ್ಯವಾಗಿ, ಸಾಧನೆಯ ಹಾದಿ ಸುಗಮವಾಗುತ್ತದೆ. ಆತಂಕದ ಇಂದಿನ ಪರಿಸ್ಥಿತಿ ತಾತ್ಕಾಲಿಕ; ಹಾಗಾಗಿ ಎದೆಗುಂದದಿರಿ ಮತ್ತು ನಿಮ್ಮ ದೀರ್ಘಾವಧಿ ಕನಸುಗಳಿಂದ ದೂರ ಸರಿಯದಿರಿ. ಹೆಚ್ಚಿನ ಏಕಾಗ್ರತೆ, ದೃಢತೆ ಮತ್ತು ಸಮಯದ ನಿರ್ವಹಣೆಯಿಂದ ತಯಾರಾಗಿ, ಉತ್ತಮ ರ‍್ಯಾಂಕ್ ಗಳಿಸಲು ಪ್ರಯತ್ನಿಸಿ. ನಿಮ್ಮ ಕನಸುಗಳನ್ನು ಸಾಕಾರಗೊಳಿಸಬೇಕಾದರೆ, ಸ್ವಯಂಪ್ರೇರಣೆಯೇ ಸಾಧನೆಗೆ ಸಂಜೀವಿನಿಯಾಗಬೇಕು. ಹೆಚ್ಚಿನ ಮಾರ್ಗದರ್ಶನಕ್ಕಾಗಿ http://www.vpradeepkumar.com/self-motivation/

2. ನಾನು ರಸಾಯನ ವಿಜ್ಞಾನದಲ್ಲಿ ಎಂಎಸ್ಸಿ ಮಾಡಬೇಕು ಎಂದುಕೊಂಡಿದ್ದೇನೆ. ಉದ್ಯೋಗಾವಕಾಶಗಳ ಬಗ್ಗೆ ತಿಳಿಸಿ.

ಹೆಸರು, ಊರು ತಿಳಿಸಿಲ್ಲ

ಎಂಎಸ್ಸಿ ನಂತರ ಸರ್ಕಾರಿ ಮತ್ತು ಖಾಸಗಿ ವಲಯದ ರಾಸಾಯನಿಕ ಪದಾರ್ಥಗಳು, ಫಾರ್ಮಾ, ರಸಗೊಬ್ಬರ, ಡಿಸ್ಟಿಲರೀಸ್, ಜವಳಿ ಮತ್ತು ವರ್ಣದ್ರವ್ಯ, ಆಹಾರ ಮತ್ತು ಪಾನೀಯ ಸಂಸ್ಕರಣೆ, ಸಂಶೋಧನೆ, ಪ್ರಯೋಗಾಲಯಗಳು, ವಿದ್ಯಾಸಂಸ್ಥೆಗಳು ಸೇರಿದಂತೆ ಅನೇಕ ವಲಯಗಳಲ್ಲಿ ಉದ್ಯೋಗಾವಕಾಶಗಳಿವೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹುದ್ದೆಗಳನ್ನು ಪಡೆದುಕೊಳ್ಳಬಹುದು.

3. ನಾನು ಪತ್ರಿಕೋದ್ಯಮದಲ್ಲಿ ಎಂಎ ಮುಗಿಸಿ 2 ವರ್ಷವಾಗಿದೆ, ಕಳೆದ ವರ್ಷ 'ನೆಟ್', 'ಕೆಸೆಟ್' ಪರೀಕ್ಷೆ ಪಾಸ್ ಮಾಡಿರುವೆ. ವಿದೇಶದಲ್ಲಿ ಪಿಎಚ್‌ಡಿ ಮಾಡುವ ಹಂಬಲವಿದೆ. ಈಗಾಗಲೇ ವಿದೇಶಿ ವಿವಿಗಳ ವೆಬ್‌ಸೈಟ್ ನೋಡಿದೆ. ಕೊನೆಗೆ ಮಾರ್ಗದರ್ಶನವಿಲ್ಲದೆ ಕುಳಿತಿರುವೆ. ಮನೆಯಲ್ಲಿ ಬಡತನ; ಫೀಸ್ ಕಟ್ಟಲು ಹಣವಿಲ್ಲ. ಮುಂದೇನು ಮಾಡಬಹುದು?

ಸುನೀಲ, ಬಾಗಲಕೋಟೆ

ನೀವು ನೀಡಿರುವ ಕಿರು ಮಾಹಿತಿಯಿಂದ, ನಿಮ್ಮ ವೃತ್ತಿ ಜೀವನದ ಗುರಿ ತಿಳಿಯುತ್ತಿಲ್ಲ. ಸ್ಪಷ್ಟವಾದ, ಸಾಧಿಸಬಹುದಾದ, ವೃತ್ತಿ ಮತ್ತು ವೈಯಕ್ತಿಕ ಬದುಕಿನ ಗುರಿಗಳಿಂದ, ಸ್ವಯಂ ಪ್ರೇರಣೆ ತಾನೇ ತಾನಾಗಿ ಮೂಡುತ್ತದೆ. ನಿಮ್ಮ ಆಸಕ್ತಿ, ಅಭಿರುಚಿಯ ಆಧಾರದ ಮೇಲೆ ವೃತ್ತಿ ಯೋಜನೆಯನ್ನು ಮಾಡಿ, ಅದರಂತೆ ನಿಮ್ಮ ಪ್ರಯತ್ನಗಳನ್ನು ಕೇಂದ್ರೀಕರಿಸುವುದು ಉತ್ತಮ. ವೃತ್ತಿ ಯೋಜನೆ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/c/EducationalExpertManagementCareerConsultant ಅಗತ್ಯವೆನಿಸಿದರೆ, ಈ ಅಂಕಣದ ಮೂಲಕ ನಮ್ಮನ್ನು ಸಂಪರ್ಕಿಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಇಂಟರ್‌ನ್ಯಾಶನಲ್ ಡೇ ಆಫ್ ಯೋಗ ಜಿಂಗಲ್ ಕಾಂಟೆಸ್ಟ್ 2022

ವಿದ್ಯಾರ್ಥಿ ವೇತನ ಕೈಪಿಡಿ

ವಿವರ: ಇಂಟರ್‌ನ್ಯಾಶನಲ್ ಡೇ ಆಫ್ ಯೋಗ ಜಿಂಗಲ್ ಕಾಂಟೆಸ್ಟ್ 2022, 18 ವರ್ಷ ಮೇಲ್ಪಟ್ಟ ಭಾರತೀಯ ವಿದ್ಯಾರ್ಥಿಗಳಿಗೆ ಇರುವ ಸ್ಪರ್ಧೆಯಾಗಿದೆ. ಎಲ್ಲಾ ವಯಸ್ಸಿನ ಜನರಲ್ಲಿ ಯೋಗದ ಜಾಗೃತಿ ಮತ್ತು ಅಳವಡಿಕೆಗೆ ಚಾಲನೆ ನೀಡಲು ಭಾರತ ಸರ್ಕಾರದ ಆಯುಷ್ ಸಚಿವಾಲಯ (ಎಂಓಎ) ಈ ಸ್ಪರ್ಧೆಯನ್ನು ಆಯೋಜಿಸಿದೆ.

ಅರ್ಹತೆ: ಕನಿಷ್ಠ 18 ವರ್ಷ ವಯಸ್ಸಿನ ಅಭ್ಯರ್ಥಿಗಳಿಗೆ ಮುಕ್ತವಾಗಿದೆ.

ಆರ್ಥಿಕ ನೆರವು: ₹25,000 ನಗದು ಬಹುಮಾನ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಜೂನ್ 21, 2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/IDJ7

ಡಾಡರ್ ಎಂಬ ಪರಾವಲಂಬಿ ಸಸ್ಯ

ಡಾ. ಎಸ್. ಶಿಶುಪಾಲ



ಜೀವಾನ್ವೇಷಣೆ

ಸಾಮಾನ್ಯವಾಗಿ ಸಸ್ಯಗಳು ತಮ್ಮ ಆಹಾರವನ್ನು ತಾವೇ ಉತ್ಪಾದಿಸುತ್ತವೆ. ಎಲೆಗಳಲ್ಲಿರುವ ಪತ್ರಹರಿತ್ತು (Cholorophyll) ಎಂಬ ಹಸಿರು ವರ್ಣದ್ರವ್ಯವು ಸೂರ್ಯನ ಕಿರಣಗಳ ಶಕ್ತಿಯನ್ನು ಬಳಸಿಕೊಂಡು ಗಾಳಿಯಲ್ಲಿರುವ ಇಂಗಾಲದ ಡೈ ಆಕ್ಸೈಡ್‌ನ್ನು ಮತ್ತು ನೀರಿನಲ್ಲಿರುವ ಜಲಜನಕವನ್ನು ಪಡೆದು ಶರ್ಕರವನ್ನು ಉತ್ಪಾದಿಸುತ್ತದೆ. ಇದನ್ನು ದ್ಯುತಿಸಂಶ್ಲೇಷಣೆ (Photosynthesis) ಎನ್ನುವರು. ಹಾಗಾಗಿ ಎಲ್ಲಾ ಸಸ್ಯಗಳನ್ನು ಸ್ವಯಂಪೋಷಣೆ ಜೀವಿಗಳೆಂದು ಪರಿಗಣಿಸಲಾಗಿದೆ. ಆದ್ದರಿಂದ ಜಗತ್ತಿನ ಎಲ್ಲಾ ಜೀವಿಗಳು ಸಸ್ಯಗಳನ್ನೇ ಅವಲಂಬಿಸಿವೆ.

ಸಸ್ಯಗಳ ಬೆಳವಣಿಗೆ ಕುಂಠಿತವಾಗಲು ಹಲವಾರು ಜೈವಿಕ ಮತ್ತು ಅಜೈವಿಕ ಅಂಶಗಳಿವೆ. ಹಲವಾರು ಸೂಕ್ಷ್ಮ ಜೀವಿಗಳು ಮತ್ತು ಕೀಟಗಳು ಸಸ್ಯಗಳನ್ನು ತಿಂದು ಹಾಳುಮಾಡುತ್ತವೆ. ಕೆಲವು ಪರವಾಲಂಬಿ ಸಸ್ಯಗಳು ಇತರೆ ಸಸ್ಯಗಳ ಆಸರೆಯಲ್ಲಿಯೇ ಜೀವನ ನಡೆಸುತ್ತವೆ. ಅಂತಹ ಒಂದು ಸಸ್ಯವೇ ಡಾಡರ್. ಇದನ್ನು ಸಸ್ಯಶಾಸ್ತ್ರೀಯವಾಗಿ ಕಸ್ಕ್ಯುಟ (Cuscuta) ಎಂದು ಕರೆಯುತ್ತಾರೆ. ಇದರಲ್ಲಿ ಸುಮಾರು 200 ಪ್ರಭೇಧಗಳನ್ನು ಗುರುತಿಸಲಾಗಿದೆ. ಇವೆಲ್ಲವೂ ಕನ್ವಾಲ್ಯುಲೆಸಿ ಕುಟುಂಬದ ಸದಸ್ಯರು.

ಸಸ್ಯಗಳ ಸ್ವಯಂಪೋಷಣೆಗೆ ಅಪವಾದವೆಂಬಂತೆ ಹಲವಾರು ಸಸ್ಯಗಳು ಪರಾವಲಂಬಿ ಜೀವನ ನಡೆಸುತ್ತವೆ. ಡಾಡರ್ ಒಂದು ಸಂಪೂರ್ಣ ಪರವಾಲಂಬಿ ಸಸ್ಯವಾಗಿದ್ದು ಆಹಾರ ತಯಾರಿಕೆಯ ಕ್ಷಮತೆ ಇಲ್ಲದೆ ಅಧಿಸಸ್ಯವಾಗಿ (Epiphyte) ಬೆಳೆಯುತ್ತದೆ. ಈ ಸಸ್ಯದಲ್ಲಿ ಎಲೆಗಳಿಲ್ಲ. ಆಹಾರ ತಯಾರಿಕೆಗೆ ಬೇಕಾದ ಪತ್ರಹರಿತ್ತೂ ಇಲ್ಲ. ಆದರೆ ತನ್ನ ಅತಿಥೇಯ ಗಿಡದ ಅಂಗಾಶಗಳ ಜೀವಕೋಶಗಳೊಳಗೆ ತನ್ನ ವಿಶಿಷ್ಟ ಬೇರುಗಳಂತಹ ಹೀರುಪಾತ್ರೆ (ಹಾಸ್ಟೋರಿಯಾ) ಗಳನ್ನು ಬೆಳೆಸುತ್ತದೆ. ಇವು ಅತಿಥೇಯ ಸಸ್ಯ ತಯಾರು ಮಾಡಿದ ಆಹಾರವನ್ನು ಕಬಳಿಸಲು ಸಹಾಯ ಮಾಡುತ್ತವೆ. ಗಿಡ ಬೆಳೆದಂತೆ ಕಿತ್ತಳೆ-ಹಳದಿ ಬಣ್ಣದ ತೆಳುವಾದ ದಾರದಂತಹ ಕಾಂಡವು ಅತಿಥೇಯ ಗಿಡವನ್ನು ಎಲ್ಲಾ ಕಡೆಯಿಂದ ಆವರಿಸುತ್ತದೆ. ಕೆಲವೊಂದು ಪ್ರಭೇದಗಳಲ್ಲಿ ಕಾಂಡವು ತಿಳಿಗುಲಾಬಿ ಅಥವ ಕಂದು ಬಣ್ಣದ್ದಾಗಿರುತ್ತದೆ. ಬೇರೆಲ್ಲಾ ಆವೃತ ಬೀಜ (Angiosperm) ಸಸ್ಯಗಳಂತೆ ಡಾಡರ್ ಸಹ ಹೂವುಗಳನ್ನು ಬಿಡುತ್ತದೆ. ಸಣ್ಣ ಹಳದಿ ಅಥವಾ ಬಿಳಿ ಬಣ್ಣದ, ಗಂಟೆಯಾಕಾರದ ಗಂಟುಗಳಂತೆ ಕಾಣುವ ಹೂಗಳನ್ನು ಅರಳಿಸುತ್ತದೆ.



ಡಾಡರ್ ಗಿಡ (ಚಿತ್ರ: ಲೇಖಕರದ್ದು)

ಮಣ್ಣಿನಲ್ಲಿ ಅಥವಾ ತನ್ನ ಅತಿಥೇಯ ಗಿಡಗಳ ಮೇಲೆ ಬಿದ್ದ ಡಾಡರ್ ಸಸ್ಯದ ಬೀಜಗಳು ಮೊಳಕೆಯೊಡೆದು ಮೊದಲಿಗೆ ಬೇರುಗಳನ್ನು ಬಿಡುತ್ತದೆ. ಅದು ಆ ಗಿಡದ ಕಾಂಡವನ್ನು ಗಟ್ಟಿಯಾಗಿ ಹಿಡಿದುಕೊಂಡ ನಂತರ ಡಾಡರ್ ಸಸ್ಯದ ತೆಳುವಾದ ಕಾಂಡವು ಟಿಸಿಲೊಡೆದು ಸುರುಳಿ ಸುರುಳಿಯಾಗಿ ಸುತ್ತುವರಿಯುತ್ತದೆ. ತನ್ನ ಕಾಂಡದಿಂದ ಮೊಳಕೆಯೊಡದಂತೆ ಬರುವ ಹೀರುಪಾತ್ರೆಗಳನ್ನು ಅತಿಥೇಯ ಗಿಡದ ಕಾಂಡದ ಅಂಗಾಂಶಗಳಿಗೆ ಕಳಿಸುತ್ತದೆ. ಆ ಸಸ್ಯದ ಅಕ್ಷದಿಂಡು (Steel) ವಿನಿಂದ ನೀರು ಮತ್ತು ಪೋಷಕಾಂಶಗಳನ್ನು ಹೀರುತ್ತದೆ. ಡಾಡರ್‌ನ ಬೇರುಗಳು ಕೊಳೆತು ಹೋಗುತ್ತವೆ. ಆದರೆ ಈಗಾಗಲೇ ಅತಿಥೇಯ ಗಿಡವನ್ನು ಆಕ್ರಮಿಸಿರುವ ಕಾಂಡವೇ ಬೇರಿನ ಕೆಲಸವನ್ನು ನಿರ್ವಹಿಸುತ್ತದೆ. ದಿನಕಳೆದಂತೆ ಅಕ್ಕಪಕ್ಕದ ಗಿಡಗಳನ್ನು ಆವರಿಸಿ ಅವುಗಳನ್ನು ತನ್ನ ಅತಿಥೇಯ ಗಿಡಗಳನ್ನಾಗಿ ಮಾಡಿಕೊಳ್ಳುತ್ತದೆ. ತನ್ನ ದಾರದಂತಹ ಕಾಂಡವನ್ನು ಜೇಡದ ಬಲೆಯಂತೆ ಹಬ್ಬಿಸುತ್ತಾ ಸಂಪೂರ್ಣವಾಗಿ ಅತಿಥೇಯ ಗಿಡವನ್ನು ಆಕ್ರಮಿಸಿಬಿಡುತ್ತದೆ.

ಅತಿಥೇಯ ಸಸ್ಯಗಳಾಗಿ ಆಲೂಗೆಡ್ಡೆ, ಹುರುಳಿಕಾಯಿ, ಸೆಣಬು, ಸೇವಂತಿಗೆ, ಡೇರೆ, ಕ್ಲೋವರ್, ನರಿಬಾಲದ ಹೊನ್ನೆ, ಲುಸರ್ನೆ ಸೊಪ್ಪು ಮುಂತಾದವುಗಳಿಗೆ ಗಣನೀಯವಾಗಿ ಹಾನಿ ಉಂಟುಮಾಡಬಲ್ಲದು. ನಮ್ಮ ಗದ್ದೆ ತೋಟಗಳಲ್ಲಿ ಅವಶ್ಯ ಸಸ್ಯಗಳ ಮೇಲೆ ಡಾಡರ್ ಬೆಳೆದಿರುವುದು ಕಾಣಿಸಿದರೆ ಅದನ್ನು ಕೈಯಿಂದ ಕಿತ್ತು ಸುಟ್ಟು ಹಾಕುವುದೊಂದೆ ಪರಿಹಾರೋಪಯ. ಇಲ್ಲದಿದ್ದರೆ ತನ್ನ ಕಬಂದ ಬಾಹುಗಳನ್ನು ಎಲ್ಲಾ ಕಡೆ ಚಾಚಿ ಆದಷ್ಟು ಹೆಚ್ಚು ಗಿಡಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಸಾಮರ್ಥ ಡಾಡರ್‌ಗೆ ಇದೆ.

ಆವೃತಬೀಜ ಸಸ್ಯವಾದರೂ ತನ್ನ ಜೀವನವೆಲ್ಲಾ ಬೇರೆ ಸಸ್ಯಗಳಲ್ಲಿ ಪರಾವಲಂಬಿಯಾಗಿ ಕಳೆಯುವಂತಹ ವಿಶಿಷ್ಟ ಸಸ್ಯವಿದು. ಪ್ರಕೃತಿಯ ಮೂಸೆಯಲ್ಲಿ ಹೊರಬಂದ ಜೀವವೈವಿಧ್ಯದಲ್ಲಿ ಇಂತಹ ಅನೇಕ ವಿಶೇಷಗಳನ್ನು ಗಮನಿಸಬಹುದು. ಪ್ರತಿಯೊಂದು ಜೀವಿಯೂ ಒಂದಕ್ಕೊಂದು ಅವಲಂಬಿಸಿಯೇ ಜೀವನದ ಸಾರ್ಥಕತೆ ಕಾಣುವುದು ಪ್ರಕೃತಿಯ ವಿಶಿಷ್ಟತೆ.

(ಲೇಖಕರು ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರು)



ಸುಭಾಷಿತ

ಅದೃಷ್ಟವಂತ ಎಂದರೆ ಅವಕಾಶವನ್ನು ಪಡೆಯುವವನು.
ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವವನು.
-ಸ್ವಾಮಿ ವಿವೇಕಾನಂದ

ಕೇಂದ್ರದಿಂದ ಎಕ್ಸೈಸ್ ಸುಂಕ ಇಳಿಕೆ ರಾಜ್ಯಗಳೂ ಅನುಕರಿಸಿದರೆ ಉತ್ತಮ

ಹಣದುಬ್ಬರ ಹೆಚ್ಚಳ ಎಂಬುದು ಈಗ ಅರ್ಥಶಾಸ್ತ್ರಜ್ಞರ ನಡುವಿನ ಚರ್ಚೆಗಳಲ್ಲಿ, ಪತ್ರಿಕೆಗಳ ವರದಿಗಳಲ್ಲಿ ಮಾತ್ರ ಉಲ್ಲೇಖವಾಗುವ ವಿಚಾರವಾಗಿ ಉಳಿದಿಲ್ಲ. ಅದು ಪ್ರತಿನಿತ್ಯದ ಜೀವನದಲ್ಲಿ ಅರಿವಿಗೆ ಬರುತ್ತಿದೆ. ಹಣದುಬ್ಬರದ ಬಿಸಿ ಎಷ್ಟಿದೆಯೆಂದರೆ, ಜನವರಿಯಿಂದ ಈಚೆಗೆ ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗರಿಷ್ಠ ಮಟ್ಟವನ್ನೂ ಮೀರಿ ನಿಂತಿದೆ. ಇದೇ ಕಾರಣಕ್ಕೆ ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಈ ತಿಂಗಳ ಆರಂಭದಲ್ಲಿ ಹಠಾತ್ತನೆ ರೆಪೊ ದರವನ್ನು ಶೇಕಡ 0.40ರಷ್ಟು ಜಾಸ್ತಿ ಮಾಡಿತು. ಹಣದುಬ್ಬರವನ್ನು ನಿಯಂತ್ರಣದಲ್ಲಿ ಇರಿಸುವ ಹೊಣೆಯು ಆರ್‌ಬಿಐ ಮೇಲಿದೆ ಎಂಬುದು ನಿಜವಾದರೂ, ಹಣದುಬ್ಬರ ವಿರುದ್ಧದ ಯುದ್ಧವನ್ನು ಆರ್‌ಬಿಐ ಏಕಾಂಗಿಯಾಗಿ ನಡೆಸಲಾಗದು. ಅದಕ್ಕೆ ಸರ್ಕಾರಗಳ ನೆರವು ಬೇಕೇ ಬೇಕು. ಮೇ ತಿಂಗಳಲ್ಲಿ ರೆಪೊ ದರ ಏರಿಸುವ ಮೊದಲು ಆರ್‌ಬಿಐ, 'ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ತಗ್ಗಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನದಟ್ಟು ಮಾಡಲು ಯತ್ನಿಸಿತ್ತು' ಎಂದು ವರದಿಯಾಗಿದೆ. ಅದು ಸಾಧ್ಯವಾಗದ ಕಾರಣ ರೆಪೊ ದರವನ್ನು ಹಠಾತ್ತನೆ ಜಾಸ್ತಿ ಮಾಡುವ ತೀರ್ಮಾನ ಕೈಗೊಂಡಿರಬಹುದು. ಮಾರ್ಚ್ 22ರಿಂದ 10 ದಿನಗಳ ಅವಧಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರಿಗೆ ತಲಾ ₹ 10ರಷ್ಟು ಹೆಚ್ಚಿಸಲಾಗಿತ್ತು. 'ಎಕ್ಸೈಸ್ ಸುಂಕ ತಗ್ಗಿಸುವಂತೆ ಆರ್‌ಬಿಐ ಕೇಂದ್ರಕ್ಕೆ ಮನವಿ ಮಾಡಿಕೊಂಡಿತು, ಬೇಡಿಕೊಂಡಿತು, ಕಿವಿಮಾತು ಹೇಳಿತು. ಆದರೆ ಪ್ರತಿಕ್ರಿಯೆ ಸಿಗಲಿಲ್ಲ. ಇದೇ ರೀತಿ ಮಾಡುವಂತೆ ರಾಜ್ಯ ಸರ್ಕಾರಗಳನ್ನೂ ಕೇಳಿಕೊಂಡಿತು. ಆದರೆ ಪರಿಣಾಮ ಆಗಲಿಲ್ಲ' ಎಂದು ಕೂಡ ವರದಿಯಾಗಿತ್ತು. ಈಗ ಕೇಂದ್ರವು ಮುಂದಡಿ ಇರಿಸಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ತಗ್ಗಿಸಿದೆ. ಇದು ಸ್ವಾಗತಾರ್ಹ. ಈ ಇಳಿಕೆಯ ಪರಿಣಾಮವಾಗಿ ಎಕ್ಸೈಸ್ ಸುಂಕದ ಮೊತ್ತವು ಕೋವಿಡ್ ಪೂರ್ವದ ಹಂತವನ್ನು ತಲುಪಿದೆ. ಚಿಲ್ಲರೆ ಹಣದುಬ್ಬರ ಹಾಗೂ ಸಗಟು ಹಣದುಬ್ಬರ ಪ್ರಮಾಣವು ದಾಖಲೆಯ ಮಟ್ಟದಲ್ಲಿ ಇರುವ ಈ ಸಂದರ್ಭದಲ್ಲಿ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ತಗ್ಗಿಸುವುದು ಅನಿವಾರ್ಯವಾಗಿತ್ತು.



ಚಿಲ್ಲರೆ ಹಣದುಬ್ಬರ ಹಾಗೂ ಸಗಟು ಹಣದುಬ್ಬರ ಪ್ರಮಾಣವು ದಾಖಲೆಯ ಮಟ್ಟದಲ್ಲಿ ಇರುವ ಈ ಸಂದರ್ಭದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ತಗ್ಗಿಸುವುದು ಅನಿವಾರ್ಯವಾಗಿತ್ತು

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಸಂಗ್ರಹವಾಗುವ ಮಾಸಿಕ ವರಮಾನದ ಮೊತ್ತವು ಹಿಂದಿನ ವರ್ಷದ ಜುಲೈನಿಂದ ₹ 1 ಲಕ್ಷ ಕೋಟಿಗಿಂತ ಹೆಚ್ಚಿನ ಮಟ್ಟದಲ್ಲಿಯೇ ಇದೆ. 2022ರ ಏಪ್ರಿಲ್‌ನಲ್ಲಿ ದಾಖಲೆಯ ₹ 1.68 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಜಿಎಸ್‌ಟಿ ವರಮಾನ ದಾಖಲೆಯ ಮಟ್ಟದಲ್ಲಿ ಇದ್ದಿದ್ದು, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಸುಂಕವನ್ನು ಕಡಿಮೆ ಮಾಡಬೇಕು ಎಂಬ ಆಗ್ರಹಕ್ಕೆ ಬಲವಾದ ನೆಲೆಗಟ್ಟನ್ನು ಒದಗಿಸಿ ಕೊಟ್ಟಿತ್ತು. ಅದಲ್ಲದೆ, ಹಣದುಬ್ಬರವು ಹೆಚ್ಚಿನ ಮಟ್ಟದಲ್ಲಿಯೇ ಬಹುಕಾಲ ಉಳಿದರೆ ದೇಶದ ಆರ್ಥಿಕ ಬೆಳವಣಿಗೆಯು ಮಂದವಾಗುತ್ತದೆ ಎಂದು ಅರ್ಥಶಾಸ್ತ್ರಜ್ಞರು ಎಚ್ಚರಿಸಿದ್ದರು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಪ್ರತೀ ಬ್ಯಾರೆಲ್‌ಗೆ 100 ಡಾಲರ್‌ಗಿಂತ ಹೆಚ್ಚಿನ ಮಟ್ಟದಲ್ಲಿಯೇ ಉಳಿದಿದೆಯಾದರೂ, ರಷ್ಯಾ-ಉಕ್ರೇನ್ ಯುದ್ಧ ಆರಂಭವಾದ ನಂತರದಲ್ಲಿ ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಹೆಚ್ಚಾಗಿದೆ. ಭಾರತಕ್ಕೆ ರಷ್ಯಾ ರಿಯಾಯಿತಿ ದರದಲ್ಲಿ ತೈಲ ಪೂರೈಸುತ್ತಿದೆ. ಭಾರತಕ್ಕೆ ತೈಲ ಪೂರೈಕೆ ಮಾಡುವ ದೇಶಗಳ ಸಾಲಿನಲ್ಲಿ ರಷ್ಯಾ ನಾಲ್ಕನೆಯ ಸ್ಥಾನಕ್ಕೆ ಏರಿದೆ ಎಂದು ಈಚಿನ ವರದಿಯೊಂದು ಹೇಳಿದೆ. ರಷ್ಯಾದಿಂದ ಮಾರುಕಟ್ಟೆ ದರಕ್ಕಿಂತ ಕಡಿಮೆಗೆ ತೈಲ ಸಿಗುತ್ತಿರುವುದು ಕೂಡ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಇಳಿಸಬೇಕು ಎಂಬ ಆಗ್ರಹಕ್ಕೆ ಪುಷ್ಟಿ ನೀಡಿತ್ತು. ರಷ್ಯಾದಿಂದ ಎಷ್ಟು ಬೆಲೆಗೆ ಕಚ್ಚಾ ತೈಲ ಪೂರೈಕೆ ಆಗುತ್ತಿದೆ ಎಂಬುದನ್ನು ಕೇಂದ್ರ ಸರ್ಕಾರವು ಬಹಿರಂಗಪಡಿಸಿಲ್ಲ. ಅಲ್ಲಿಂದ ಸಿಗುತ್ತಿರುವ ರಿಯಾಯಿತಿ ದರದ ತೈಲ ಕೂಡ ಕೇಂದ್ರಕ್ಕೆ ಈಗಿನ ತೀರ್ಮಾನ ಕೈಗೊಳ್ಳಲು ಒಂದು ಒತ್ತಾಸೆಯಾಗಿ ಕೆಲಸ ಮಾಡಿರುವ ಸಾಧ್ಯತೆ ಇದೆ. ಕೇಂದ್ರವು ಎಕ್ಸೈಸ್ ಸುಂಕ ಕಡಿತ ಮಾಡಿದ ನಂತರದಲ್ಲಿ ಮಹಾರಾಷ್ಟ್ರ, ಕೇರಳ, ಒಡಿಶಾ ಹಾಗೂ ರಾಜಸ್ಥಾನ ಸರ್ಕಾರಗಳು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು (ವ್ಯಾಟ್) ಇಳಿಕೆ ಮಾಡಿವೆ. ಆದರೆ, ಕರ್ನಾಟಕವು ಇದುವರೆಗೂ ಈ ವಿಚಾರವಾಗಿ ತೀರ್ಮಾನ ತೆಗೆದುಕೊಂಡಿಲ್ಲ. ರಾಜ್ಯ ಸರ್ಕಾರ ಕೂಡ ವ್ಯಾಟ್ ಇಳಿಕೆ ಮಾಡಿ, ರಾಜ್ಯದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಇನ್ನಷ್ಟು ತಗ್ಗುವಂತೆ ಮಾಡುವ ದಿಸೆಯಲ್ಲಿ ಆಲೋಚಿಸಬೇಕು.

ಈಗಿನ ತಾಯ್ತನದ ಪರಿಕಲ್ಪನೆಯು ಹೆಣ್ಣಿನ ಮೇಲೆ ಹೇರುವ ಸಾಮಾಜಿಕ ಒತ್ತಡವಾಗಿ ಪರಿಣಮಿಸಿದೆ

ಪ್ರಜನನ ಹಕ್ಕು ಮತ್ತು ಸಮಾಜದ ನಿರೀಕ್ಷೆ



ವಿಶ್ಲೇಷಣೆ

ಡಾ. ಗೀತಾ ಕೃಷ್ಣಮೂರ್ತಿ

ಹರಿದ್ವಾರದಲ್ಲಿರುವ ಒಬ್ಬ ನಿವೃತ್ತ ಅಧಿಕಾರಿ ಮತ್ತು ಅವರ ಪತ್ನಿ ನ್ಯಾಯಾಲಯದ ಮುಂದೆ ಒಂದು ವಿಚಿತ್ರವಾದ ಬೇಡಿಕೆಯನ್ನಿಟ್ಟಿದ್ದಾರೆ. 'ನಿವೃತ್ತಿಯ ನಂತರ ನಾವು ಮೊಮ್ಮಗನೊಡನೆ ಆಡುತ್ತಾ ಕಾಲ ಕಳೆಯಬಹುದೆಂಬ ಆಸೆಯಿಂದ ನಮ್ಮ ಮಗನಿಗೆ 2016ರಲ್ಲಿ ಮದುವೆ ಮಾಡಿದೆವು. ಅದಾಗಿ ಆರು ವರ್ಷಗಳಾಗಿದ್ದರೂ ನಮಗೆ ಒಂದು ಮೊಮ್ಮಗುವನ್ನು ಕೊಡಲು ಅವರು ವಿಫಲರಾಗಿದ್ದಾರೆ. ಇದು ನಮಗೆ ಅತೀವವಾದ ಮಾನಸಿಕ ಹಿಂಸೆಯನ್ನು ಉಂಟುಮಾಡಿದೆ. ನಮಗೆ ಒಂದು ವರ್ಷದ ಒಳಗೆ ಮೊಮ್ಮಗು ಬೇಕು. ಇಲ್ಲದಿದ್ದರೆ ನಮ್ಮ ಮಗ, ಸೊಸೆ ನಮಗೆ ₹ 5 ಕೋಟಿ ಪರಿಹಾರ ನೀಡಬೇಕು. ಹಾಗೆಂದು ಮಗ, ಸೊಸೆಗೆ ಆದೇಶಿಸಬೇಕು' ಎಂದು ಕೋರಿ ದಂಪತಿ ಉತ್ತರಾಖಂಡದ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ.


ಇದೊಂದು ವಿಚಿತ್ರವಾದ ಪ್ರಕರಣ. ಹೀಗೂ ಒಂದು ದಾವೆಯನ್ನು ಹೂಡಬಹುದೇ ಎಂಬುದು ಸಹಜವಾಗಿ ಮೂಡಬಹುದಾದ ಪ್ರಶ್ನೆ. 'ನನ್ನ ಮಗನ ವಿದ್ಯಾಭ್ಯಾಸಕ್ಕಾಗಿ, ಅವನ ಅಭ್ಯುದಯಕ್ಕಾಗಿ, ಅವನ ಮದುವೆಗಾಗಿ ನಮ್ಮಲ್ಲಿರುವ ಹಣವನ್ನೆಲ್ಲಾ ವ್ಯಯ ಮಾಡಿದ್ದೇವೆ. ಆದರೆ ಅವರು ನಮಗೆ ವೃದ್ಧಾಪ್ಯದಲ್ಲಿ ಮೊಮ್ಮಗು ಬೇಕೆನ್ನುವ ಕೋರಿಕೆಯನ್ನು ಪೂರೈಸುತ್ತಿಲ್ಲ. ಇದರಿಂದ ತುಂಬ ನೊಂದಿದ್ದೇವೆ, ಮಾನಸಿಕವಾಗಿ ಕುಗ್ಗಿದ್ದೇವೆ. ನಮ್ಮ ಆಕಾಂಕ್ಷೆಯನ್ನು ಮಗ, ಸೊಸೆ ಸಂಪೂರ್ಣವಾಗಿ ಕಡೆಗಣಿಸಿದ್ದಾರೆ' ಎಂಬುದು ಅವರ ಆರೋಪ.

ಭಾರತೀಯರ ಮನೋವೃತ್ತಿಯ ಹಿನ್ನೆಲೆಯಿಂದ ನೋಡಿದಾಗ, ಅವರ ಬಯಕೆ ಅತ್ಯಂತ ಸಹಜವಾದುದು ಎಂಬುದೇ ಬಹುಜನರ ಅಭಿಪ್ರಾಯವಾಗಿರುತ್ತದೆ. ಆದರೆ, ಸಮಾನತೆಯ ಈ ಯುಗದಲ್ಲಿ, ಹೆಣ್ಣು ಮಕ್ಕಳನ್ನೂ ಗಂಡು ಮಕ್ಕಳಿಗೆ ಸರಿಸಮನಾಗಿ ಬೆಳೆಸಿ, 'ನೀನು ಯಾವ ಗಂಡು ಮಗನಿಗೂ ಕಡಿಮೆಯಿಲ್ಲ' ಎಂದು ಹೆಮ್ಮೆಪಡುವ ತಂದೆ ತಾಯಿಯರ ಸಂಖ್ಯೆಯೂ ಕಡಿಮೆಯೇನಿಲ್ಲ. ಇದು, ಬದಲಾಗುತ್ತಿರುವ ಸಮಾಜ ಹಾಗೂ ಬದಲಾಗುತ್ತಿರುವ ದೃಷ್ಟಿಕೋನದ ದ್ಯೋತಕವೂ ಹೌದು. ಇದು, ಗಂಡು ಮಕ್ಕಳಿಗೆ ಇರುವ ಆಯ್ಕೆಯ ಸ್ವಾತಂತ್ರ್ಯವನ್ನು ಹೆಣ್ಣು ಮಕ್ಕಳಿಗೂ ನೀಡುತ್ತದೆ. ಅದನ್ನು ಗೌರವಿಸಬೇಕಾದದ್ದು ಇತರರ ಕರ್ತವ್ಯವೂ ಆಗಿರುತ್ತದೆ.

ಸಮಾನತೆಯನ್ನು ಗೌರವಿಸುವ ಸಮಾಜವು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಬೇಕು. ಆದರೆ ದೀರ್ಘ ಹೋರಾಟಗಳಿಲ್ಲದೆ ಈ ಹಕ್ಕುಗಳನ್ನು ನೀಡಿರುವ ಉದಾಹರಣೆಗಳೇ ಇಲ್ಲ. ಹಿಂಸೆಯಿಂದ ಮುಕ್ತರಾಗಲು ಒಂದು ಹೋರಾಟ, ಉದ್ಯೋಗ ಸ್ಥಳದಲ್ಲಿ ಲೈಂಗಿಕ ಕಿರುಕುಳಗಳಿಲ್ಲದೆ ನೆಮ್ಮದಿಯಿಂದ ಕೆಲಸ ಮಾಡುವ ವಾತಾವರಣ ಕಲ್ಪಿಸಿಕೊಳ್ಳಲು ಒಂದು ಹೋರಾಟ, ಕುಟುಂಬದ ಜನರಿಂದಲೇ ನಡೆಯುವ ಹಿಂಸೆಯಿಂದ ರಕ್ಷಣೆ ಪಡೆಯಲು ಒಂದು ಹೋರಾಟ, ನೀಡಿರುವ ಹಕ್ಕುಗಳನ್ನು ಪಡೆದುಕೊಳ್ಳಲು ನ್ಯಾಯಾಲಯಗಳಿಗೆ ಅಲೆದಾಟ, ಹೀಗೆ ಮುಗಿಯದ ಬವಣೆಗಳ ನಡುವೆ, ತನ್ನ ದೇಹ ತನ್ನದು, ಅದರ ಮೇಲೆ ತನ್ನದೇ ಸಂಪೂರ್ಣ ಹಕ್ಕು ಎಂದು ಹೇಳಿಕೊಳ್ಳಲೂ ಒಂದು ಆಂದೋಲನದ ಅಗತ್ಯ ಉಂಟಾಗಿರುವುದೇ ವಿಪರ್ಯಾಸ.

ಎರಡು ದಶಕಗಳ ಹಿಂದೆ 'ನನ್ನ ದೇಹ ನನ್ನ ಹಕ್ಕು' ಎಂಬ ಘೋಷವಾಕ್ಯದ ಅಡಿಯಲ್ಲಿ ಮಹಿಳಾ ಹಕ್ಕು ಹೋರಾಟಗಾರರು ಪ್ರಾರಂಭಿಸಿದ ಆಂದೋಲನ ಬಹಳಷ್ಟು ಚರ್ಚೆಗಳನ್ನು ಹುಟ್ಟುಹಾಕಿತು. ಪ್ರಜನನ ಹಕ್ಕುಗಳು ಮತ್ತು ಇತರ ಹಕ್ಕುಗಳಿಗೆ ಸಂಬಂಧಿಸಿದಂತೆ ಮಹಿಳೆಯರು ತಮ್ಮ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳುವ ಪ್ರಯತ್ನವಾಗಿ ಹಮ್ಮಿಕೊಂಡ ಈ ಆಂದೋಲನ ಬರೀ ಭಾರತಕ್ಕೆ ಸೀಮಿತವಾದುದಲ್ಲ. ಮಹಿಳೆ ಒಳಗಾಗುವ ವಿವಿಧ ಬಗೆಯ ದೌರ್ಜನ್ಯಗಳ ಪೈಕಿ ಅತಿ ಹೆಚ್ಚಾಗಿ ಒಳಗಾಗುವುದು ಲೈಂಗಿಕ ದೌರ್ಜನ್ಯಕ್ಕೆ. ಆದರೆ, ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ಅವಳ ದೇಹವನ್ನು ಬಳಸುವ, ಶೋಷಿಸುವ ಮತ್ತು ಲೈಂಗಿಕ ದೌರ್ಜನ್ಯ ಎಸಗುವ ಅಧಿಕಾರ ಯಾರಿಗೂ ಇಲ್ಲ. ಮಹಿಳಾ ಹೋರಾಟಗಾರರ ಈ ನಿಲುವು ಪಿತೃಪ್ರಧಾನ ಸಾಮಾಜಿಕ ಸಂರಚನೆಯನ್ನು ಬುಡದಿಂದಲೇ ಪ್ರಶ್ನಿಸುವಂಥದ್ದು, ಹಾಗಾಗಿ ಇದು ಅಪಥ್ಯ. ಈ ನಿಲುವನ್ನು ವಿರೋಧಿಸುವವರೆಲ್ಲರೂ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಬಾಲ್ಯವಿವಾಹ, ದೈಹಿಕ ಹಿಂಸೆ, ಕೌಟುಂಬಿಕ ಹಿಂಸೆ, ಹೆಣ್ಣು ಮಕ್ಕಳ ಕಳ್ಳಸಾಗಾಣಿಕೆ, ಜೀತ ಪದ್ಧತಿಯಂಥ ಅನಾಗರಿಕ ಪದ್ಧತಿಗಳನ್ನು ಬೆಂಬಲಿಸುವವರು ಎಂದೇ ಅರ್ಥೈಸಬೇಕಾಗುತ್ತದೆ ಎಂಬುದು ಈ ಆಂದೋಲನದ ವಕ್ತಾರರು ಹೇಳುವ ಮಾತು. ಆದರೆ, ವಿವಾಹವಾದ ಒಂದೆರಡು ವರ್ಷದೊಳಗೆ ಒಂದು ಮಗುವನ್ನು ಹೆರದಿದ್ದರೆ, 'ಬಂಜೆಂಬ ಶಬುದ ಹೊರಲಾರೆ' ಎಂದು ಇಂದಿಗೂ ಹೆಣ್ಣನ್ನು ಕನಲುವಂತೆ ಮಾಡುವ ನಮ್ಮ ಸಮಾಜ, ಆಧುನಿಕ ಮಹಿಳೆಯು ಈ ನಿಲುವನ್ನು ಒಪ್ಪಬೇಕು ಎಂದು ನಿರೀಕ್ಷಿಸುವುದಾದರೂ ಹೇಗೆ? ಮದುವೆಯ ಮೂಲ ಉದ್ದೇಶವೇ ಸಂತತಿಯನ್ನು ಮುಂದುವರಿಸುವುದು ಎಂಬ ನಂಬಿಕೆ ಈಗಲೂ ನಮ್ಮ ಸಮಾಜದಲ್ಲಿ ಬಲವಾಗಿ ಬೇರೂರಿದೆ. ಬದಲಾದ ಕಾಲಕ್ಕೆ ಅನುಗುಣವಾಗಿ ಕುಟುಂಬದ ಸ್ವರೂಪ ಬದಲಾಗುತ್ತಿದ್ದರೂ, ಕುಟುಂಬದ ಸದಸ್ಯರ ಮನೋಭಾವ ಬದಲಾಗದೇ ಇರುವುದು ಅನೇಕ ಸಂಘರ್ಷಗಳಿಗೆ ಎಡೆಮಾಡಿಕೊಡುತ್ತಿದೆ.

'ಮಕ್ಕಳಿರಲವ್ವ ಮನೆತುಂಬ' ಎಂಬ ಮಾತು ಈಗಿನ ಮಹಿಳೆಯರಿಗೆ ತಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಮಾತಾಗಿ ಅವರ ಅಸಹನೆಗೆ ಕಾರಣವಾಗುತ್ತಿದೆ.



ಇವರ ನಡುವೆಯೇ, ಸಹಜವಾಗಿ ಮಕ್ಕಳಾಗದಿದ್ದಾಗ ಹತಾಶರಾಗಿ ಕಂಡ ಕಂಡ ದೇವರುಗಳನ್ನು ಬೇಡುವ, ಫರ್ಟಿಲಿಟಿ ಕ್ಲಿನಿಕ್ಕುಗಳನ್ನು ಹುಡುಕಿಕೊಂಡು ಹೊರಡುವ ದಂಪತಿಗಳ ಸಂಖ್ಯೆಯೇನೂ ಕಡಿಮೆಯಾಗಿಲ್ಲ.

ತಾಯ್ತನದ ಈಗಿನ ಪರಿಕಲ್ಪನೆಯು ಹೆಣ್ಣಿನ ಬಗ್ಗೆ ಕಾಳಜಿಯಿಲ್ಲದ, ತಾಯ್ತನದ ಬಗ್ಗೆ ಮಾತ್ರ ಕಾಳಜಿ ಇರುವ ಸಾಮಾಜಿಕ ಒತ್ತಡವಾಗಿ, ಹೆಣ್ಣಿನ ಮೇಲೆ ಹೇರುವ ನಿರೀಕ್ಷೆಯಾಗಿ ಪರಿಣಮಿಸಿದೆ. ಎಲ್ಲ ಕ್ಷೇತ್ರಗಳಲ್ಲೂ ಗಂಡಿಗೆ ಸರಿಸಮನಾಗಿ ಗುರುತಿಸಿಕೊಳ್ಳಬಲ್ಲ ಮಹಿಳೆಗೆ ಕುಟುಂಬದ ಬೆಂಬಲ ದೊರೆಯುವ ಬಗ್ಗೆ ಖಾತರಿ ಇರುವುದಿಲ್ಲ. ಅಂಥ ಸಂದರ್ಭಗಳಲ್ಲಿ ತನ್ನ ಅಭಿವೃದ್ಧಿಗೆ ಮಗು ಅಡ್ಡಿಯಾಗಬಹುದು ಎನ್ನಿಸಬಹುದು.

ಹುಟ್ಟುವ ಮಕ್ಕಳಿಗೆ ಸೂಕ್ತವಾದ ಸ್ವಚ್ಛ ಪರಿಸರವನ್ನು, ಮೌಲ್ಯಯುತ ಜೀವನವನ್ನು, ಅನುಕೂಲಕರ ವಾತಾವರಣವನ್ನು ಕೊಡಲು ಸಾಧ್ಯವಿಲ್ಲದಿರುವಾಗ ಮಕ್ಕಳಿಗೆ ಜನ್ಮನೀಡುವುದು ನೈತಿಕವಾಗಿ ಸರಿಯೇ? ಯಾಕೆ ಜನ್ಮ ನೀಡಬೇಕು ಎಂಬ ಪ್ರಶ್ನೆಗಳಿಗೆ ನಿರುತ್ತರರಾಗಬೇಕಾಗುತ್ತದೆ. ಹಾಗಾಗಿ, ಮಗುವನ್ನು ಪಡೆಯದಿರುವ ಹಕ್ಕೂ ಅವಳಿಗಿರುತ್ತದೆ. ಈ ಹಿನ್ನೆಲೆಯಲ್ಲಿ, 'ಮಗು ಬೇಡ' ಎಂಬ ನಿರ್ಧಾರವು ಭಾರತದಲ್ಲಿ 2019ರಲ್ಲಿ 'ಆ್ಯಂಟಿ ನೇಟಲಿಸ್ಟ್' ಆಂದೋಲನವಾಗಿ ರೂಪುಗೊಂಡು, ಸಾಮಾಜಿಕ ಜಾಲತಾಣಗಳ ಮೂಲಕ ಈಗ ಜಗತ್ತಿನಾದ್ಯಂತ ಹಬ್ಬಿದೆ.

ಮಗುವನ್ನು ಪಡೆಯುವ ಅಥವಾ ಪಡೆಯದಿರುವ ಬಗ್ಗೆ ನಿರ್ಧಾರ ಕೈಗೊಳ್ಳಲು ಮಹಿಳೆಗಿರುವ ಸ್ವಾತಂತ್ರ್ಯಕ್ಕೆ ಭಾರತದಲ್ಲಿ ಕಾನೂನಿನ ಬೆಂಬಲವಂತೂ ದೊರೆತೇ ದೊರೆಯುತ್ತದೆ. ಭಾರತದ ಸಂವಿಧಾನ ಅವರಿಗೆ ಸಮಾನತೆಯ ಹಕ್ಕನ್ನು ನೀಡಿದೆ, ಘನತೆಯಿಂದ ಜೀವಿಸುವ ಹಕ್ಕನ್ನು ನೀಡಿದೆ. ಹಾಗೆಯೇ ಖಾಸಗಿತನದ ಹಕ್ಕನ್ನೂ ನೀಡಿದೆ. ಕರ್ನಾಟಕ ಹೈಕೋರ್ಟ್ ಇತ್ತೀಚೆಗೆ ಕೊಟ್ಟ ಒಂದು ತೀರ್ಪಿನಲ್ಲಿ ಇದೇ ಅಭಿಪ್ರಾಯವನ್ನು ಪುನರುಚ್ಚರಿಸಿದೆ. ಮಹಿಳೆಗಿರುವ ಪ್ರಜನನ ಹಕ್ಕು ಅವಳಿಗಿರುವ ವೈಯಕ್ತಿಕ ಸ್ವಾತಂತ್ರ್ಯದ ಮತ್ತೊಂದು ಆಯಾಮ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಸುಪ್ರೀಂ ಕೋರ್ಟ್ ಸಹ ಅನೇಕ ಪ್ರಕರಣಗಳಲ್ಲಿ ಇದನ್ನು ಸ್ಪಷ್ಟಪಡಿಸಿದೆ.

ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಪ್ರತಿಯೊಬ್ಬರಿಗೂ ಘನತೆಯಿಂದ ಜೀವಿಸುವ ಹಕ್ಕಿದೆ. ಇದೇ ಹಕ್ಕು ಪ್ರತಿಯೊಬ್ಬ ಮಹಿಳೆಗೂ ಮಗುವನ್ನು ಹೆರಲು ಅಥವಾ ಹೆರದಿರಲು ನಿರ್ಧರಿಸುವ ಹಕ್ಕನ್ನೂ ನೀಡುತ್ತದೆ. ಪ್ರತಿಯೊಬ್ಬ ಮಹಿಳೆಗೆ ಇರುವ ಈ ಹಕ್ಕು, ನಮ್ಮ ಸಂವಿಧಾನವು ಘನತೆಯಿಂದ ಬಾಳಲು ನೀಡಿರುವ ಮೂಲಭೂತ ಹಕ್ಕಿನ ವಿಸ್ತರಣೆಯೇ ಆಗಿದೆ ಎಂಬುದನ್ನು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಬೇಡದಿರುವ ಮಗುವನ್ನು ಹೆರುವಂತೆ ಅವಳನ್ನು ಒತ್ತಾಯಿಸುವುದು ಈ ವೈಯಕ್ತಿಕ ಸ್ವಾತಂತ್ರ್ಯದ ಉಲ್ಲಂಘನೆಯೇ ಆಗುತ್ತದೆ.

ಮಹಿಳೆಯರ ಮೇಲೆ ಧಾರ್ಮಿಕ ಕಟ್ಟುಕಟ್ಟಲೆಗಳು, ಸಂಪ್ರದಾಯಗಳು ಹಾಗೂ ನಿರೀಕ್ಷೆಗಳು ವಿಧಿಸುವ ಕಟ್ಟುಪಾಡುಗಳು ಮತ್ತು ಸಂವಿಧಾನಾತ್ಮಕವಾಗಿ ಆಕೆಗೆ ದೊರೆತಿರುವ ಸ್ವಾತಂತ್ರ್ಯ ಹಾಗೂ ಹಕ್ಕುಗಳ ನಡುವೆ ಇಂಥ ಸಂಘರ್ಷಗಳು ಉಂಟಾಗುವುದು ನಿರೀಕ್ಷಿತವೇ. ಆದರೆ ಸ್ತ್ರೀಯರ ಬದಲಾದ ಪಾತ್ರವನ್ನು ಒಪ್ಪಿಕೊಂಡು, ಅವರ ವೈಯಕ್ತಿಕ ಹಕ್ಕುಗಳು ಮತ್ತು ಭಾವನೆಗಳನ್ನು ಗೌರವಿಸಿದಲ್ಲಿ ಮಾತ್ರವೇ ವೈಯಕ್ತಿಕ ನೆಲೆಯಲ್ಲಿ ಉಂಟಾಗುವ ಇಂಥ ಸಂಘರ್ಷಗಳನ್ನು ನ್ಯಾಯಾಲಯದ ಮೆಟ್ಟಿಲೇರದೆಯೇ ಬಗೆಹರಿಸಿಕೊಳ್ಳುವುದು ಸಾಧ್ಯ.

ಚುರುಮುರಿ



ಭವಿಷ್ಯ ಚಿತ್ರಾಸನ

• ಸುಮಂಗಲಾ

ಬೆಕ್ಕಣ್ಣ ಕೈಯಲ್ಲಿ ಚಿಕ್ಕ ಕೋಲಿನಂಥದನ್ನು ಹಿಡಿದುಕೊಂಡು ಏನೋ ಚಿತ್ರವಿಚಿತ್ರ ಆಸನಗಳನ್ನು ಮಾಡುತ್ತಿತ್ತು. ತುಸುಹೊತ್ತಿನ ನಂತರ ಹತ್ತಾರು ವಿವಿಧ ಭಂಗಿಯ ಯೋಗಾಸನಗಳ ರೇಖಾಚಿತ್ರವನ್ನು ಬಲೇ ಸೊಗಸಾಗಿ ಬಿಡಿಸಿತ್ತು.

'ಏನಲೇ... ಯಾವ ಯೋಗ ಗುರುಗಳ ಹತ್ರ ಇವೆಲ್ಲ ಕಲಿತ್ಯಲೇ...' ಅಚ್ಚರಿಯಿಂದ ಕೇಳಿದೆ.

'ಯಾರ್ ಹತ್ರ ಏನ್ ಕಲಿಯದು? ನಾನೇ ಎಲ್ಲ ಕಂಡುಹಿಡಿದೀನಿ. ಮುಂದಿನ ತಿಂಗಳು ಮೈಸೂರಿನಾಗೆ ಯೋಗ ದಿನಾಚರಣೆಗೆ ಮೋದಿ ಮಾಮಾ ಬರತಾನ... ಆವಾಗ ಇವೆಲ್ಲ ಮಾಡಿ ತೋರಿಸತೀನಿ' ಎಂದು ಹೆಮ್ಮೆಯಿಂದ ಉಲಿಯಿತು.

'ಇನ್ನಾ ಒಂದ್ ತಿಂಗಳು ಐತಲ್ಲ'.

'ತ್ರಿಶೂಲಾಸನ, ಬಂದೂಕಾಸನ, ಫರ್ಜಿಸಾಸನ, ಬಾಯಿಮುಚ್ಚಿಸಾಸಣ, ವಿತಂಡವಾದಾಸನ, ಹೀಂಗ ಇವೆಲ್ಲ ಹೊಸ ನಮೂನಿ ಆಸನಗಳು. ಇವನ್ನು ಯಾರು, ಯಾವಾಗ, ಹೆಂಗ ಮಾಡಬಕು, ಅಂದರ ಕಾರ್ಯಕರ್ತರು, ಶಾಸಕರು, ಸಚಿವರು ಯಾವ ಆಸನಗಳನ್ನು ಯಾವಾಗ ಮಾಡಬಕು ಅಂತ ಬ್ರೋಶರ್ ತಯಾರಿ ಮಾಡಬಕು. ಜೊತಿಗಿ ನಾನೇ ಇವನ್ನೆಲ್ಲ ಮಾಡಿ ತೋರಿಸಿ ವಿಡಿಯೊ ಮಾಡಬಕು. ಭಯಂಕರ ಕೆಲಸ ಐತಿ'.

'ಬರೀ ಕಮಲಕ್ಕನ ಮನಿಯೋರಿಗಷ್ಟೇ ಏನು?'

'ಹಂಗೇನಿಲ್ಲ... ಕುಮಾರಣ್ಣಂಗೆ ಕಣ್ಣೀರಾಸನ, ಕಾಂಗಿಗಳಿಗೆ ಜಡಾಸನ... ಹೀಂಗ ಇನ್ನೂ ಭಾಳ ಅದಾವು'.

'ಮತ್ತ ಶ್ರೀಸಾಮಾನ್ಯರಿಗೆ?'

'ನೀವು ಶ್ರೀಸಾಮಾನ್ಯರು ಎದ್ದು ಪ್ರತಿಭಟನೆ ಮಾಡೂ ಕಾಲಕ್ಕೆ ಶವಾಸನ, ಮಾತನಾಡೂ ಕಾಲಕ್ಕೆ ಮೌನಾಸನ ಮಾಡ್ತಾನೇ ಇದೀರಲ್ಲ, ನಿಮಗ ಇನ್ಯಾವ ಹೊಸ ಆಸನವೂ ಬ್ಯಾಡ. ಮೋದಿಮಾಮಾ, ನಿರ್ಮಲಕ್ಕ, ಶಾಣೇ ಅಂಕಲ್ಲಿಗೆ ಭಾರೀ ಸ್ಪೆಷಲ್ ಆಸನಾ ಐತಿ. ಭವಿಷ್ಯ ಚಿತ್ರಾಸನ... ಮುಂದಿನ 25 ವರ್ಷಗಳಲ್ಲಿ ದೇಶ ಅವರ ಕೈಯಾಗೆ ಹೆಂಗ ವಿಕಾಸ ಆಗತೈತಿ ಅಂತ ಈ ಆಸನದಾಗೆ ಅವರು ತೋರಿಸಿ, ಮೋಡಿ ಮಾಡತಾರ'. ನಾನು ಬೆಚ್ಚಿಬಿದ್ದು ಮೌನಾಸನಕ್ಕೆ ಶರಣಾದೆ!

ದಿನದ ಟ್ವೀಟ್

ಹೂಡಿಕೆ ಮಾಡಬಯಸುವಿರಾದರೆ...



ನೀವು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಲು ಬಯಸಿದರೆ, ಆಸ್ತಿಯನ್ನು ಖರೀದಿಸಿ. ನೀವು ಚಿನ್ನದಲ್ಲಿ ಹೂಡಿಕೆ ಮಾಡಲು ಬಯಸಿದರೆ, ಚಿನ್ನವನ್ನೇ ಖರೀದಿಸಿ (ಚಿನ್ನದ ಆಭರಣವನ್ನಲ್ಲ). ಸರಳವಾದ ಉತ್ಪನ್ನವೊಂದು ಹೆಚ್ಚು ಸಂಕೀರ್ಣ ಸಂಶ್ಲೇಷಣಾ ಪ್ರಕ್ರಿಯೆಗೆ ಒಳಗಾದಷ್ಟೂ ಕಮಿಷನ್‌ಗಳು ಹೆಚ್ಚಾಗುತ್ತವೆ ಮತ್ತು ನಿಮ್ಮ ಗಳಿಕೆಯ ಪ್ರಮಾಣ ಕಡಿಮೆಯಾಗುತ್ತದೆ. ಇದು ಮೂಲಭೂತವಾದ ಕಾಮನ್‌ಸೆನ್ಸ್.

ಅಕ್ಷತ್ ಶ್ರೀವಾಸ್ತವ, ಶಿಕ್ಷಕ, ಉದ್ಯಮಿ

ಕಿಡಿನುಡಿ



ಸರ್ವಜನಾಂಗದ ಶಾಂತಿಯ ಬೀಡಾದ ಕರ್ನಾಟಕದ ಮಕ್ಕಳಿಗೆ ಒಳ್ಳೆಯ ಪಠ್ಯಪುಸ್ತಕ ಕೊಡುವಂಥ ಬಲಪಂಥೀಯ ವಿದ್ವಾಂಸರನ್ನು ಹುಡುಕಲು ಸರ್ಕಾರಕ್ಕೆ ಅಸಾಧ್ಯವಾದುದು ಅವರ ಬೌದ್ಧಿಕ ದಾರಿದ್ರ್ಯವನ್ನು ಸೂಚಿಸುವುದೇ? ಚಕ್ರತೀರ್ಥ ಬಿಟ್ಟರೆ ಅವರಲ್ಲಿ ಯಾರೂ ಇಲ್ಲವೇ?

ಪುರುಷೋತ್ತಮ ಬಿಳಿಮಲೆ, ಲೇಖಕ

25 ವರ್ಷಗಳ ಹಿಂದೆ

ಶುಕ್ರವಾರ, 23-5-1997

• ರಾಜ್ಯದ ಎಲ್ಲ ಅಣೆಕಟ್ಟುಗಳ ದುರಸ್ತಿ ಪರಿಶೀಲನೆಗೆ ಮುಖ್ಯಮಂತ್ರಿ ಆದೇಶ

ಮೈಸೂರು, ಮೇ 22- ರಾಜ್ಯದ ಎಲ್ಲಾ ಅಣೆಕಟ್ಟುಗಳನ್ನು ವಿವರವಾಗಿ ಪರಿಶೀಲಿಸಿ ಕಾಲಕ್ರಮದಲ್ಲಿ ಕಾಣಿಸಿಕೊಂಡಿರಬಹುದಾದ ಯಾವುದೇ ರೀತಿಯ ಲೋಪದೋಷಗಳನ್ನು ದುರಸ್ತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಮುಖ್ಯಮಂತ್ರಿ ಜೆ. ಎಚ್.ಪಟೇಲ್ ನೀರಾವರಿ ವಿಭಾಗದ ಇಂಜಿನಿಯರುಗಳಿಗೆ ಆದೇಶ ನೀಡಿದ್ದಾರೆ.

ಸರ್ ಎಂ. ವಿಶ್ವೇಶ್ವರಯ್ಯ ನಾಲೆಯನ್ನು ಆಧುನೀಕರಣಗೊಳಿಸುವ ಉದ್ದೇಶದಿಂದ ಅದನ್ನು ಕಳೆದ ಕೆಲ ತಿಂಗಳ ಹಿಂದೆ ಮುಚ್ಚಲಾಯಿತು. ಆ ರೀತಿ ಮುಚ್ಚಿದ ನಂತರ ನಾಲೆಯಲ್ಲಿ ಕೃಷ್ಣರಾಜ ಸಾಗರ ಜಲಾಶಯದ ತೂಬಿನ ಬಳಿ ಕಾಣಿಸಿಕೊಂಡಿರುವ ದೊಡ್ಡ ಪ್ರಮಾಣದ ಹೊಂಡ ಪರಿಶೀಲಿಸಿದ ನಂತರ ಅವರು ಈ ರೀತಿ ಆದೇಶ ನೀಡಿದರು.

• ವಾಸ್ತವ ಅರಿತಾಗ ಜಾತಿರಹಿತ ಸಮಾಜ ಸಾಧ್ಯ- ಕಾರಂತ

ಬೆಂಗಳೂರು, ಮೇ 22- ಸಮಾಜದ ವಾಸ್ತವಿಕತೆಯನ್ನು ಅರಿತಾಗ ಮಾತ್ರ ಜಾತಿ ರಹಿತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಸಾಹಿತಿ ಡಾ.ಕೆ. ಶಿವರಾಮ ಕಾರಂತ ಅವರು ಇಂದು ಇಲ್ಲಿ ಅಭಿಪ್ರಾಯಪಟ್ಟರು.

'ಮಾನವ ಮಂಟಪ' ಏರ್ಪಡಿಸಿದ್ದ ಅಂತರಜಾತಿ ವಿವಾಹಿತರ ರಾಜ್ಯ ಮಟ್ಟದ ಪ್ರಥಮ ಸಮಾವೇಶ ಉದ್ಘಾಟಿಸಿದ ಅವರು, ಗಂಡು-ಹೆಣ್ಣಿನ ಆತ್ಮಗಳು ಬೆರೆತಾಗಲೇ ಅದಕ್ಕೊಂದು ಅರ್ಥ ಸಿಗುತ್ತದೆ ಎಂದರು.

ಪ್ರೀತಿಸಿ ಮದುವೆಯಾದ ಯಾರೊಬ್ಬರಿಗೂ ಸಮಾಜದಿಂದ ಯಾವ ಅಡೆತಡೆಗಳೂ ಬರಬಾರದು. ಸರ್ಕಾರದಿಂದಲಂತೂ ಬರಲೇ ಬಾರದು. ಅವರಿಗೆ ಧೈರ್ಯ ತುಂಬಿ ಸಮಸ್ಯೆಗಳನ್ನು ಎದುರಿಸುವಂತೆ ಮಾಡಬೇಕು. ಜಾತಿಯನ್ನು ತೊಡೆದುಹಾಕಲು ಯಾವುದೇ ಕಾನೂನು ಹಾಗೂ ಅಂತರಜಾತಿ ವಿವಾಹಗಳಿಂದ ಸಾಧ್ಯವಿಲ್ಲ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಡಾ. ಜಿ. ಎಸ್. ಶಿವರುದ್ರಪ್ಪ, ಸಮಾಜದಲ್ಲಿನ ಬದಲಾವಣೆ ಯುವಕರಿಂದ ಮಾತ್ರ ಸಾಧ್ಯ. ಆದರೆ, ಪ್ರಸ್ತುತ ಯುವಶಕ್ತಿ ಮೊದಲಿನ ಶಕ್ತಿಯನ್ನು ಕಳೆದುಕೊಂಡಿದೆ. ಜಾತಿಯಂಥ ಸಮಸ್ಯೆಗಳ ವಿರುದ್ಧ ಹೋರಾಡದೆ, ಕೇವಲ ಮಾರುಕಟ್ಟೆ ವಸ್ತುವಾಗಿದೆ ಎಂದು ಮಾತಿನಲ್ಲೇ ಚುರುಕು ಮುಟ್ಟಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 23-5-1972

• ಮುಖ್ಯಮಂತ್ರಿಗಳ ಸಂಧಾನಕ್ಕೆ ಗಡಿನಾಡು ಕನ್ನಡಿಗರ ವಿರೋಧ

ಬೆಂಗಳೂರು, ಮೇ 22- ಗಡಿ ಸಮಸ್ಯೆ ಪರಿಹಾರ ಪ್ರಶ್ನೆಯನ್ನು ಉಭಯ ಮುಖ್ಯಮಂತ್ರಿಗಳ ಸಮಾಲೋಚನೆಗೆ ಬಿಡುವ ಈಚಿನ ಕೇಂದ್ರದ ನಿಲುವನ್ನು ಉಗ್ರವಾಗಿ ವಿರೋಧಿಸಿರುವ ಗಡಿನಾಡು ಕನ್ನಡಿಗರ ಸಮ್ಮೇಳನವು, 'ಮಹಾಜನ್ ವರದಿಯೇ ಏಕಮಾತ್ರ ಪರಿಹಾರ' ಎಂದು ಕೇಂದ್ರಕ್ಕೂ ರಾಜ್ಯಕ್ಕೂ ಸ್ಪಷ್ಟಪಡಿಸಿದೆ.

ನಗರದಲ್ಲಿ ಇಂದು ಮುಕ್ತಾಯಗೊಂಡ ಎರಡು ದಿನಗಳ ಸಮ್ಮೇಳನವು 'ಮಹಾಜನ್ ಆಯೋಗದ ಶಿಫಾರಸುಗಳನ್ನು ಒಪ್ಪಿಕೊಂಡು, ಜಾರಿಗೆ ತರಲು ಅಗತ್ಯವಾದ ಎಲ್ಲ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು' ಎಂದು ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದೆ.

ಸಂಗತ

ಭರ್ತಿ ಅಂಕದಿಂದ ಸಿಕ್ಕಿದ್ದೇನು?!

ಮಕ್ಕಳು ಪರೀಕ್ಷೆಗಳಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಪಡೆಯುತ್ತಿದ್ದರೂ ಅಷ್ಟೇ ಪ್ರಮಾಣದಲ್ಲಿ ಸೃಜನಶೀಲ ವ್ಯಕ್ತಿತ್ವಗಳು ಸೃಷ್ಟಿಯಾಗುತ್ತಿಲ್ಲವೇಕೆ?

• ಸದಾಶಿವ್ ಸೊರಟೂರು

ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೊರಬಿದ್ದಿದೆ. ಮಳೆಯೋಪಾದಿಯಲ್ಲಿ ಅಂಕಗಳು ಸುರಿದಿವೆ. ಸಾಮಾಜಿಕ ಜಾಲತಾಣಗಳಲ್ಲಿ ಅಂಕಗಳ ಅತಿವೃಷ್ಟಿ ಕಾಡಿದೆ. ಕಣ್ಣುಗಳಿಗೆ ಕಂಡಿದ್ದು ತೊಂಬತ್ತು, ನೂರು ಅಂಕಗಳೇ. ಈ ಪೀಳಿಗೆಯವರು ಎಷ್ಟೊಂದು ಬುದ್ಧಿವಂತರಾಗಿಬಿಟ್ಟರಲ್ಲ ಅಂತ ಅನಿಸದೇ ಇರದು. ಇತ್ತೀಚಿನ ದಶಕಗಳಲ್ಲಿ ಮಕ್ಕಳು ತೆಗೆಯಲು ಇನ್ನೇನೂ ಉಳಿದಿಲ್ಲ ಅನ್ನುವಂತೆ ಅಂಕಗಳನ್ನು ಬಾಚುತ್ತಿದ್ದಾರೆ. ಪಿಯುಸಿಯದು ಕೂಡ ಇದಕ್ಕಿಂದ ತೀರಾ ಭಿನ್ನವೇನಲ್ಲ. ಅಂಕಗಳು ಹೇಗೆ ಬಂದವು ಅನ್ನುವುದಕ್ಕಿಂತ, ಅಷ್ಟು ಅಂಕ ಪಡೆದ ಅವರ ಬುದ್ಧಿವಂತಿಕೆ ಏನಾಯಿತು ಎಂಬುದು ಪ್ರಶ್ನಾರ್ಹ.

ಕಳೆದ ಬಾರಿ ಹತ್ತು ಸಾವಿರ ಶಿಕ್ಷಕರನ್ನು ನೇಮಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಆದರೆ ಅರ್ಹ ಅಭ್ಯರ್ಥಿಗಳು ಸಿಗದೇ ಸೀಟುಗಳು ಖಾಲಿ ಉಳಿದವು. ಈ ಬಾರಿ ಮತ್ತೆ ಹದಿನೈದು ಸಾವಿರ ಶಿಕ್ಷಕರ ಹುದ್ದೆಗೆ ಅರ್ಜಿ ಕರೆಯಲಾಗಿದೆ. ಆದರೆ ಸೂಕ್ತ ಅಭ್ಯರ್ಥಿಗಳು ಸಿಗುವ ಬಗ್ಗೆ ಅನುಮಾನ ವ್ಯಕ್ತಪಡಿಸಿದ ಇಲಾಖೆ, ಮಾನದಂಡದ ಅಂಕ ಇಳಿಸಿದೆ. ಇಂದಿಗೂ ಹಳ್ಳಿಯ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಅಭಾವ ಕಂಡು ಬರುತ್ತಿದೆ. ಜಾಗತಿಕ ಮಟ್ಟದಲ್ಲಿ ಸವಾಲೆನಿಸುವ ಎಂಜಿನಿಯರ್‌ಗಳ ಕೊರತೆ ನಮ್ಮಲ್ಲಿದೆ. ಇಡೀ ತಲೆಮಾರು ಇಂಗ್ಲಿಷ್... ಇಂಗ್ಲಿಷ್... ಎಂದು ಅದರ ಹಿಂದೆ ಓಡುತ್ತಿದೆ. ಆದರೆ ಒಬ್ಬನೇ ಒಬ್ಬ ವರ್ಡ್ಸ್‌ವರ್ಥ್, ಶೇಕ್ಸ್‌ಪಿಯರ್ ಹುಟ್ಟಲಿಲ್ಲ. ಸೈನ್ಸ್... ಸೈನ್ಸ್... ಎಂದು ಪೋಷಕರು ಮಕ್ಕಳಿಗೆ ಕಾಟ ಕೊಡುತ್ತಿದ್ದಾರೆ. ಆದರೆ ಒಬ್ಬ ಐನ್‌ಸ್ಟೀನ್ ಹುಟ್ಟಲಿಲ್ಲ. ಇದೇ ನೆಲದ ಮತ್ತೊಬ್ಬ ಕುವೆಂಪು ಕಾಣಿಸಲಿಲ್ಲ. ಹೌದು, ಅಷ್ಟೊಂದು ಅಂಕ ಪಡೆದವರೆಲ್ಲ ಎಲ್ಲಿ ಹೋಗುತ್ತಿದ್ದಾರೆ?

ಕಳೆದ ವಾರವಷ್ಟೇ ಕೆಲಸದ ನಿಮಿತ್ತ ಒಂದು ಕೋರ್ಟಿಗೆ ಹೋಗಿದ್ದೆ. ಅಲ್ಲಿ ದ್ವಿತೀಯ ದರ್ಜೆ ಸಹಾಯಕಿಯೊಬ್ಬಳು ಅದೆಷ್ಟು ಚುರುಕಾಗಿ ಕೆಲಸ ಮಾಡುತ್ತಿದ್ದಳು ಗೊತ್ತೇ? ಚಿಕ್ಕ ವಯಸ್ಸು. ಓದು, ಊರು ಕೇರಿಯ ಬಗ್ಗೆ ಮಾತಾಡಿಸಿದೆ. ಅವಳು ಎಸ್‌ಎಸ್‌ಎಲ್‌ಸಿ ಶೇ 95, ಪಿಯುಸಿ ವಿಜ್ಞಾನದಲ್ಲಿ ಶೇ 90ರಷ್ಟು ಅಂಕ ಪಡೆದು ಈಗ ಅಲ್ಲಿ ಕೆಲಸದಲ್ಲಿದ್ದಾಳೆ. 'ಮುಂದೆ ಓದಬಹುದಿತ್ತಲ್ಲಮ್ಮ, ಬಂಗಾರದಂಥ ಬಾಳಿತ್ತು!' ಅಂದಾಗ (ಹಾಗಂತ ಅವಳ ಆ ಕೆಲಸ ಕಡಿಮೆಯದು ಅಂತಲ್ಲ, ಅವಳ ಪ್ರತಿಭೆಗೆ ಅದಲ್ಲ ಎಂಬುದು ನನ್ನ ವಾದ), 'ಬಡತನವಿತ್ತು ಸರ್, ತುರ್ತಿಗೆ ನನಗೊಂದು ನೌಕರಿ ಬೇಕಿತ್ತು. ಇಲ್ಲಿ ಸಿಕ್ತು, ಇಲ್ಲಿಯೇ ಉಳಿದುಬಿಟ್ಟೆ' ಅಂದಳು.

ತುಂಬಾ ಮಾರ್ಕ್ಸ್ ತೆಗೆದುಕೊಂಡ ಹೆಚ್ಚಿನ ಮಕ್ಕಳು ಎಲ್ಲಿ ಹೋಗುತ್ತಾರೆ ಅನ್ನುವ ಬಹುದಿನದ ಪ್ರಶ್ನೆಗೆ ಉತ್ತರ ಸಿಕ್ಕಿತ್ತು. ಅಂತಹ ಮಕ್ಕಳು ಹೀಗೆ ಎಲ್ಲೆಲ್ಲಿ ಉಳಿದು ಹೋಗಿದ್ದಾರೊ!

ನೆಹರೂ ಅವರು ಈ ದೇಶವನ್ನು ಕರಗಿಸುವ ಮೂಸೆ (melting pot) ಅಂದಿದ್ದರು. ಎಲ್ಲಾ ಜಾತಿ, ಧರ್ಮ, ಭಾಷೆ, ಸಂಸ್ಕೃತಿಗಳನ್ನು ಈ ದೇಶ ತನ್ನೊಳಗೆ ಕರೆಸಿಕೊಂಡು ತಾನು ಭಾರತವಾಗಿದೆ. ಅದೇ ರೀತಿ ಈ ದೇಶ ನನಗೆ ಇನ್ನೊಂದು ತರಹದಲ್ಲಿ ಕರಗಿಸುವ ಮೂಸೆ ಎಂಬಂತೆ ಅರ್ಥವಾಗುತ್ತಿದೆ. ಎಂತಹ ಪ್ರತಿಭೆಗಳಿದ್ದರೂ ಅವು ಈ ದೇಶದ ಒಡಲಲ್ಲಿ ಉಳಿದು ಹೋಗಿರುವ ಬಡತನ, ಅನಕ್ಷರತೆ, ನಿರುದ್ಯೋಗದೊಳಗೆ ಕರಗಿ ಹೋಗಿಬಿಡುತ್ತವೆ. ಮಗುವನ್ನು ಎಲ್ಲಿ ತೊಡಗಿಸಬೇಕು, ಅದನ್ನು ಹೇಗೆ ದೇಶದ, ಸಮಾಜದ ಆಸ್ತಿಯನ್ನಾಗಿ ಮಾಡಬೇಕು ಎಂಬುದು ಎಷ್ಟೋ ಪೋಷಕರಿಗೂ ಗೊತ್ತಿಲ್ಲ.

ಇವುಗಳಲ್ಲದೆ ಇನ್ನೊಂದು ವರ್ಗವಿದೆ. ಅವರು ಕೋರ್ಸ್ ಸೇರುವ ಮುನ್ನವೇ ಆ ಕೋರ್ಸಿಗೆ ಬೇರೆ ದೇಶಗಳಲ್ಲಿ ಎಷ್ಟು ಅವಕಾಶಗಳಿವೆ ಅನ್ನುವುದನ್ನು ನೋಡಿಕೊಳ್ಳುತ್ತಾರೆ. ಅದರಂತೆ ಓದಿ ದೇಶ ಬಿಟ್ಟು ಹೊರಟುಬಿಡುತ್ತಾರೆ.



ಪ್ರತಿವರ್ಷ ಹೊಸ ವೈದ್ಯರು ನದಿಯಂತೆ ಹರಿದು ಬರುತ್ತಿದ್ದರೂ ಹಳ್ಳಿಗಾಡಿನಲ್ಲಿ ವೈದ್ಯರ ಅಭಾವವಿದೆ. ಅವರೆಲ್ಲ ಹಣಕ್ಕಾಗಿ ಬದುಕಿದವರು, ಸೇವೆಗಾಗಿ ಅಲ್ಲ. ಒಬ್ಬ ವಿದ್ಯಾರ್ಥಿಯನ್ನು ಡಾಕ್ಟರ್ ಮಾಡಲು ಸರ್ಕಾರ ಮಾಡುವ ವೆಚ್ಚದ ಅನುಕೂಲ ಜನಸಾಮಾನ್ಯರಿಗೆ ತಲುಪದೇ ಹೋಗುತ್ತದೆ. ಅವರ ಪ್ರತಿಭೆ ಅವರು ಮಾಡಿಕೊಳ್ಳುವ ಹಣಕ್ಕಷ್ಟೇ ಸೀಮಿತವಾಗುತ್ತದೆ. ನಾವೆಲ್ಲ ಸನ್ನಿ ಹಿಡಿದವರಂತೆ ಇಂಗ್ಲಿಷ್‌ನ ಬಾಲ ಹಿಡಿದು ಓಡುತ್ತಿದ್ದೇವೆ. ಇತ್ತ ತಾಯಿ ಭಾಷೆಯಲ್ಲೂ ಉಳಿಯದೆ ಅತ್ತ ಇಂಗ್ಲಿಷು ಕೂಡ ರಕ್ತಗತವಾಗದೆ ವ್ಯಕ್ತಿತ್ವವೊಂದು ಎಡಬಿಡಂಗಿ ಆಗಿಬಿಡುತ್ತದೆ. ಇಂಥವರಿಂದ ಎಂಥ ಸೃಜನಾತ್ಮಕತೆ ಹುಟ್ಟಲು ಸಾಧ್ಯ? ನಾವು ಇಂಗ್ಲಿಷ್ ಅನ್ನು ಈ ಪರಿ ಪ್ರೀತಿಸಿದರೂ ಯಾಕೆ ಇಂಗ್ಲಿಷ್ ಭಾಷೆಯಲ್ಲಿ ಅಂತಹ ಸೃಜನಾತ್ಮಕತೆ ಸಾಧ್ಯವಾಗುತ್ತಿಲ್ಲ?

ಎಂಜಿನಿಯರಿಂಗ್ ಪದವಿ ಇಲ್ಲವೇ ಮೆಡಿಕಲ್ ಓದಿಗೆ ಮುಗಿಯುತ್ತದೆ ಸೈನ್ಸ್ ಹುಚ್ಚು ಹತ್ತಿಸಿಕೊಂಡವರ ಅಭಿಮಾನ. ಮಾತೃಭಾಷೆಯಲ್ಲಿ ಕರತಲಾಮಲಕ ಅಂದವರು ಕೂಡ ಅಂತಹ ಹೇಳಿಕೊಳ್ಳುವಂಥ ಭಾಷಾ ಸಾಧನೆ ಮಾಡಿದ್ದಾದರೂ ಎಲ್ಲಿ? ಇವುಗಳಿಗೆಲ್ಲ ಉತ್ತರಗಳು ನಾವು ಕಲಿಸುತ್ತಿರುವ ವ್ಯವಸ್ಥೆಯಲ್ಲಿ, ಜನರು ಬೆಳೆಸಿಕೊಂಡಿರುವ ಮನಃಸ್ಥಿತಿಯಲ್ಲಿ, ದೇಶವನ್ನು ಕಾಡುತ್ತಿರುವ ಸಮಸ್ಯೆಗಳಲ್ಲಿದೆ. ನಾವು ನೋಡಿಕೊಳ್ಳಬೇಕು ಅಷ್ಟೇ!

ವಾಚಕರ ವಾಣಿ

ಕರ್ನಾಟಕವನ್ನು ಪ್ರತಿನಿಧಿಸುವ ನೈತಿಕತೆ ಇದೆಯೇ?

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕರ್ನಾಟಕದಿಂದ ಮತ್ತೊಮ್ಮೆ ರಾಜ್ಯಸಭೆಗೆ ಆಯ್ಕೆಯನ್ನು ಬಯಸಿದ್ದಾರೆ. ಆದರೆ ಕರ್ನಾಟಕದಿಂದ ಆಯ್ಕೆಯಾಗಲು ಇವರಿಗೆ ಯಾವ ನೈತಿಕತೆಯಿದೆ ಎಂಬುದು ನಾವು ಕೇಳಬೇಕಾದ ಪ್ರಶ್ನೆ. 15ನೆಯ ಹಣಕಾಸು ಆಯೋಗವು ಕರ್ನಾಟಕಕ್ಕೆ 2020-21ನೇ ಸಾಲಿಗೆ ವಿಶೇಷ ಅನುದಾನ ₹ 5,495 ಕೋಟಿ ಶಿಫಾರಸು ಮಾಡಿತ್ತು. ಕೇಂದ್ರ ಸರ್ಕಾರವು ಇದನ್ನು ನೀಡಲಿಲ್ಲ. ಒಕ್ಕೂಟ ತೆರಿಗೆ ರಾಶಿಯಲ್ಲಿ ರಾಜ್ಯಕ್ಕೆ 2019-20ರಲ್ಲಿ ₹ 30,919 ಕೋಟಿ ದೊರೆತಿತ್ತು. ಇದು 2022-23ರಲ್ಲಿ ₹ 29,783 ಕೋಟಿಗಿಳಿದಿದೆ. ಇದೇ ರೀತಿ 2019- 20ರಲ್ಲಿ ಒಕ್ಕೂಟ ಸರ್ಕಾರವು ರಾಜ್ಯಕ್ಕೆ ನೀಡಿದ್ದ ಸಹಾಯಾನುದಾನ ₹ 19,982 ಕೋಟಿ. ಇದು 2022-23ರಲ್ಲಿ ₹ 17,281 ಕೋಟಿಗಿಳಿದಿದೆ.

ಇದೆಲ್ಲವೂ ಕರ್ನಾಟಕವನ್ನು ಪ್ರತಿನಿಧಿಸುವ ನಿರ್ಮಲಾ ಅವರು ಹಣಕಾಸು ಸಚಿವೆಯಾಗಿರುವ ಅವಧಿಯಲ್ಲಿ ನಡೆದ ಅನ್ಯಾಯ. ಇವರನ್ನು ಕರ್ನಾಟಕವು ಮತ್ತೆ ರಾಜ್ಯಸಭೆಗೆ ಆಯ್ಕೆ ಮಾಡಬೇಕೆ? ಈ ಬಗ್ಗೆ ನಮ್ಮ ಶಾಸಕರು ವಿವೇಚನಾಶೀಲರಾಗಿ ತೀರ್ಮಾನ ತೆಗೆದುಕೊಳ್ಳಬೇಕಾದ ಸಮಯ ಬಂದಿದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಕಳಪೆ ಬಿತ್ತನೆ ಬೀಜದ ಹಾವಳಿ ನಿಲ್ಲಲಿ

ರೈತರು ಅನುಭವಿಸುತ್ತಿರುವ ತೊಂದರೆ, ತಾಪತ್ರಯ ಒಂದೆರಡಲ್ಲ. ಪ್ರತಿವರ್ಷ ಬಿತ್ತನೆ ಸಮಯದಲ್ಲಿ ರೈತರಿಗೆ ಕಳಪೆ ಬೀಜ ವಿತರಣೆ ಮಾಡುವುದು ಸಾಮಾನ್ಯವಾಗಿದೆ. ಸರ್ಕಾರ ಎಷ್ಟೇ ಕ್ರಮ ಕೈಗೊಂಡರೂ ನಕಲಿ ಬಿತ್ತನೆ ಬೀಜ ವಿತರಣೆಯು ಆಗಾಗ ಬೆಳಕಿಗೆ ಬರುತ್ತಲೇ ಇರುತ್ತದೆ. ಕೆಲವು ಖಾಸಗಿ ಕಂಪನಿಗಳು ಕಡಿಮೆ ದರದಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಮಾರಾಟ ಮಾಡುತ್ತಿವೆ. ಇಂತಹ ಬೀಜಗಳನ್ನು ನಾಟಿ ಮಾಡಿದ ರೈತ ಸರಿಯಾಗಿ ಬೆಳೆ ಬರದೆ ಸಾಲದ ಸುಳಿಗೆ ಸಿಲುಕಿ ಒದ್ದಾಡುವಂತಾಗಿದೆ. ರಾಜ್ಯ ಸರ್ಕಾರ ಮತ್ತು ರಾಜ್ಯ ಬೀಜ ನಿಗಮವು ನಕಲಿ ಬೀಜ ಜಾಲಕ್ಕೆ ಕಡಿವಾಣ ಹಾಕಬೇಕಾಗಿದೆ.

ಕಳಪೆ ಬಿತ್ತನೆ ಬೀಜ, ಕ್ರಿಮಿನಾಶಕ ಮಾರಾಟ ಮಾಡುವ ಅಂಗಡಿಗಳ ಪರವಾನಗಿ ರದ್ದು ಮಾಡಿ ಸುಮ್ಮನೆ ಕೂರುವುದಲ್ಲ. ಇಂತಹವುಗಳ ವಿತರಣೆ ಮತ್ತು ಪೂರೈಕೆಯ ಜಾಲದ ಮೂಲವನ್ನು ಪತ್ತೆ ಹಚ್ಚಬೇಕು. ಇಲ್ಲವಾದರೆ ಪ್ರತಿವರ್ಷ ಇದು ಪುನರಾವರ್ತನೆ ಆಗುತ್ತಲೇ ಇರುತ್ತದೆ.

ನಬಿಸಾಬ ಆರ್.ಬಿ. ದೋಟಿಹಾಳ, ಕುಷ್ಟಗಿ

ವೀರ ಕನ್ನಡಿಗ

ಭಲೆ ಭಲೇ! ಧೀರ ಕನ್ನಡಿಗ ಚಂದ್ರ ಆರ್ಯ
ಜಗಕೆ ಸಾರಿದಿರಿ ಕನ್ನಡದ ಹಿರಿಮೆಗರಿಮೆಯನು
ಕನ್ನಡದಲಿ ಮಾತನಾಡಿ ಕೆನಡಾದ ಸಂಸತ್ತಿನಲಿ
ನಿಮ್ಮದು ಹುಟ್ಟು ಕನ್ನಡಪ್ರೇಮ, ವೀರಕನ್ನಡಿಗ ನೀವು
ಮಾರ್ದನಿಸುವುದೇ ಕನ್ನಡ ಕಹಳೆ ನಮ್ಮ ಸಂಸತ್ತಿನಲಿ!
ಕಲಿಕಾ ಮಾಧ್ಯಮವಾಗುವುದೇ ಕನ್ನಡವು ನಾಡಿನಲಿ?
ನುಡಿಯು ಸಂಸ್ಕೃತಿಯ ಪ್ರತೀಕ ಎಂದೆಂದಿಗೂ

ಸಿ.ಪಿ.ಸಿದ್ಧಾಶ್ರಮ, ಮೈಸೂರು

ರಾಷ್ಟ್ರಪತಿ ಆಯ್ಕೆ: ಪೌರ ಸೇನಾನಿಯನ್ನು ಪರಿಗಣಿಸಿ

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಅಧಿಕಾರಾವಧಿ ಜುಲೈ 25ಕ್ಕೆ ಪೂರ್ಣಗೊಳ್ಳಲಿದೆ. ರಾಷ್ಟ್ರಪತಿ ಸೇರಿದಂತೆ ದೇಶದ ಎಲ್ಲ ಸಾಂವಿಧಾನಿಕ ಹುದ್ದೆಗಳಲ್ಲೂ (ನ್ಯಾಯಾಲಯವನ್ನು ಹೊರತುಪಡಿಸಿ) ರಾಜಕೀಯದ ನೆರಳು ಇರುವುದು ಸುಳ್ಳಲ್ಲ. ಇದು ಪಕ್ಷಾತೀತವಾಗಿ ನಡೆದುಬಂದಿದೆ. ಆದರೆ ಈ ಬಾರಿ ದೇಶದ ಪ್ರಥಮ ಪ್ರಜೆಯ ನೇಮಕದ ಸಂದರ್ಭದಲ್ಲಿ 'ಪೌರ ಸೇನಾನಿ'ಯನ್ನು ಅಥವಾ ಅವರ ಹಿತಕ್ಕಾಗಿ ದುಡಿಯುವ ವ್ಯಕ್ತಿಯನ್ನು ಪರಿಗಣಿಸಿ ಹೊಸ ಇತಿಹಾಸವನ್ನು ಬರೆಯಬೇಕಾದ ಅಗತ್ಯ ಇದೆ.

ಮೇಲ್ನೋಟಕ್ಕೆ ಈ ಬೇಡಿಕೆ ಅತಿ ಆದರ್ಶದ್ದು ಅನಿಸಬಹುದು. ಆದರೆ ಅದು ಅಸಾಧ್ಯವಾದುದೇನೂ ಅಲ್ಲ. ದೇಶದ ನಗರ- ಪಟ್ಟಣ ಪ್ರದೇಶಗಳನ್ನು ಶುಚಿಯಾಗಿ ಇಡುವವರು ಇದೇ ಪೌರ ಕಾರ್ಮಿಕರು. ಅವರಿಲ್ಲದೇ ಇದ್ದರೆ ನಮ್ಮ ನಗರಗಳ ಪರಿಸ್ಥಿತಿಯನ್ನು ಊಹಿಸುವುದಕ್ಕೂ ಅಸಾಧ್ಯ. ಬಿಜೆಪಿ ಈ ಹಿಂದೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ, ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪೌರ ಸೇನಾನಿಗಳು ಪ್ರತಿಭಟನೆಗೆ ಇಳಿದಿದ್ದರು. ಆಗ ತ್ಯಾಜ್ಯ ವಿಲೇವಾರಿ ಕಾರ್ಯ ಅಸ್ತವ್ಯಸ್ತವಾಗಿ ಬೆಂಗಳೂರನ್ನು 'ಗಾರ್ಬೇಜ್ ಸಿಟಿ' ಎಂದು ಅಂತರರಾಷ್ಟ್ರೀಯ ಮಾಧ್ಯಮಗಳು ಬಣ್ಣಿಸಿದ್ದವು. ಪೌರ ಸೇನಾನಿಗಳು ಇಲ್ಲದೇ ಇದ್ದರೆ ನಮ್ಮ ದಿನನಿತ್ಯದ ಬದುಕು ಅಸಹನೀಯವಾಗಿ ಬಿಡುತ್ತದೆ. ಆದರೆ ಸಮಾಜದ ಕೊಳೆ ತೊಳೆಯುವ ಈ ವರ್ಗಕ್ಕೆ ನಾವು ನಿಜವಾಗಿಯೂ ಏನಾದರೂ ಮಾಡಿದ್ದೇವೆಯೇ? ವೇತನ, ಭತ್ಯೆಯಂಥ ಸೌಲಭ್ಯಗಳನ್ನು ಹೊರತುಪಡಿಸಿಯೂ ಈ ವರ್ಗದ ಪ್ರತಿನಿಧಿಗಳಿಗೆ ಒಂದು ಗೌರವಯುತ ಸೇವೆ ಮಾಡುವ ಹೊಣೆಗಾರಿಕೆ ಎಲ್ಲ ರಾಜಕೀಯ ಪಕ್ಷಗಳಿಗೂ ಇದೆ.

ಪ್ರಧಾನಿ ನರೇಂದ್ರ ಮೋದಿ ಅವರು ಹಿಂದೆ ವಾರಾಣಸಿಯಲ್ಲಿ ಪೌರ ಸೇನಾನಿಯೊಬ್ಬರ ಪಾದವನ್ನು ತೊಳೆದು ಪೂಜೆ ಮಾಡಿದ್ದರು. ಆದರೆ ಈ ಕಷ್ಟಜೀವಿಗಳ ಸಂಕಷ್ಟ ತೊಳೆಯುವುದಕ್ಕೆ ನಿಜವಾದ ಪ್ರಯತ್ನಗಳು ಮಾತ್ರ ನಡೆಯಲಿಲ್ಲ. ದೇಶದ ಆರೋಗ್ಯ ಕಾಪಾಡುವ ಪೌರಸೇನಾನಿಗಳಿಗೆ 'ಭಾರತರತ್ನ'ದಂಥ ಪ್ರಶಸ್ತಿ ನೀಡಿ ಆ ವರ್ಗದ ಜನರಲ್ಲಿ ಆತ್ಮವಿಶ್ವಾಸ ಹಾಗೂ ತಲೆಯೆತ್ತಿ ನಿಲ್ಲುವ ಚೈತನ್ಯ ನೀಡಬೇಕೆಂಬ ಬೇಡಿಕೆಯನ್ನೂ ಸರ್ಕಾರ ಮನ್ನಿಸಿಲ್ಲ. ಇನ್ನು ರಾಜ್ಯಸಭೆ, ವಿಧಾನಸಭೆ, ವಿಧಾನಪರಿಷತ್ತಿನಲ್ಲಿ ಪೌರ ಸೇನಾನಿಗಳಿಗೆ ಸ್ಥಾನ ನೀಡಿ ಎಂಬ ಒತ್ತಾಯವನ್ನು ರಾಜಕೀಯ ಪಕ್ಷಗಳು ಕಿವಿಗೆ ಹಾಕಿಕೊಳ್ಳುವುದಿಲ್ಲ. ಇದೀಗ ರಾಷ್ಟ್ರಪತಿ ಚುನಾವಣೆ ಸಂದರ್ಭದಲ್ಲಿ ಈ ವರ್ಗದ ಪ್ರತಿನಿಧಿಯನ್ನು ಕಣಕ್ಕೆ ಇಳಿಸುವ ಮೂಲಕ ರಾಜಕೀಯ ಪಕ್ಷಗಳು ನಿಜವಾದ ಅರ್ಥದಲ್ಲಿ ಅವರ ಶ್ರೇಯೋಭಿವೃದ್ಧಿಗೆ ಮುಂದಾಗಬೇಕಿದೆ. ಪೌರ ಸೇನಾನಿಗೆ ದೇಶದ ಪ್ರಥಮ ಪ್ರಜೆಯ ಗೌರವ ಕೊಡುವ ಧರ್ಮವನ್ನು ಪಾಲಿಸಬೇಕಿದೆ.

ಡಾ. ಬಿ.ಎಸ್.ಶಿವಣ್ಣ, ಮಳವಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವೇತನದ ಅಸಮಾನ ಹಂಚಿಕೆ

ದೇಶದಲ್ಲಿ ಲಭ್ಯವಿರುವ ಕಾರ್ಮಿಕ ಬಲದಲ್ಲಿ ಒಂದು ಭಾಗದಷ್ಟು ಜನರಿಗಷ್ಟೇ ವೇತನ ದೊರೆಯುವ ಕೆಲಸವಿದೆ. ಹೀಗೆ ದುಡಿಮೆಯಲ್ಲಿ ತೊಡಗಿಕೊಂಡಿರುವ ಕಾರ್ಮಿಕರಲ್ಲಿ ವೇತನ ಹಂಚಿಕೆ ಅಸಮಾನವಾಗಿದೆ. ದುಡಿಮೆಯಲ್ಲಿ ತೊಡಗಿಕೊಂಡಿರುವ ಕಾರ್ಮಿಕರು 2019–20ನೇ ಸಾಲಿನಲ್ಲಿ ಒಟ್ಟು ₹1,869 ಕೋಟಿಯಷ್ಟು ವೇತನ ಪಡೆದಿದ್ದಾರೆ. ಇದರಲ್ಲಿ ಶೇ 1ರಷ್ಟು ಜನರು ಶೇ 6.48ರಷ್ಟು ವೇತನದ ಪಾಲು ಹೊಂದಿದ್ದಾರೆ. ಅತಿಹೆಚ್ಚು ವೇತನ ಪಡೆಯುವ ಮೊದಲ ಶೇ 10ರಷ್ಟು ಜನರು ಒಟ್ಟು ವೇತನದ ಶೇ 32ರಷ್ಟನ್ನು ಗಳಿಸುತ್ತಾರೆ. ಆದರೆ, ದುಡಿಯುವ ವರ್ಗದಲ್ಲಿ ಅತ್ಯಂತ ಕಡಿಮೆ ವೇತನ ಪಡೆಯುವ ಕೊನೆಯ ಶೇ 50ರಷ್ಟು ಮಂದಿಗೆ ದೊರೆಯುವ ವೇತನದ ಪ್ರಮಾಣ ಶೇ 22ರಷ್ಟು ಮಾತ್ರ. 2019–20ರ ಆರ್ಥಿಕ ವರ್ಷದಲ್ಲಿ ದೇಶದಲ್ಲಿ ಪಡೆಯಲಾದ ಒಟ್ಟು ವೇತನದಲ್ಲಿ ಮೊದಲ ಶೇ 50ರಷ್ಟು ಮಂದಿ 78ರಷ್ಟು ವೇತನವನ್ನು ಹಂಚಿಕೊಂಡಿದ್ದಾರೆ. ಉಳಿದ ಶೇ 50ರಷ್ಟು ಮಂದಿಗೆ ದೊರೆತದ್ದು ಒಟ್ಟು ವೇತನದ ಶೇ 22ರಷ್ಟು ಮಾತ್ರ. 2016–17, 2017–18, 2018–19 ಮತ್ತು 2019–20ರ ಆರ್ಥಿಕ ವರ್ಷಗಳಲ್ಲಿ ಈ ವರ್ಗಕ್ಕೆ ದೊರೆಯುತ್ತಿರುವ ವೇತನದ ಪ್ರಮಾಣದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಹೀಗೆ ವೇತನದ ಹಂಚಿಕೆಯಲ್ಲಿನ ಅಸಮಾನತೆ ಮುಂದುವರಿಯುತ್ತಲೇ ಇದೆ ಎಂದು ‘ಭಾರತದಲ್ಲಿ ಅಸಮಾನತೆಯ ಸ್ಥಿತಿಗತಿ’ ಕುರಿತ ವರದಿಯಲ್ಲಿ ಹೇಳಲಾಗಿದೆ. ಈ ವರದಿಯನ್ನು ಪ್ರಧಾನ ಮಂತ್ರಿಯ ಆರ್ಥಿಕ ಸಲಹಾ ಪರಿಷತ್ ಸಿದ್ಧಪಡಿಸಿದೆ. ವರದಿಯನ್ನು ಇತ್ತೀಚೆಗೆ ಪ್ರಧಾನಿಗೆ ಸಲ್ಲಿಸಲಾಗಿದೆ

₹1,457.81 ಕೋಟಿ ದುಡಿಯುವ ವರ್ಗದ ಮೊದಲ ಶೇ 50ರಷ್ಟು ಮಂದಿ ಪಡೆದ ವೇತನ

₹1,869 ಕೋಟಿ 2019-20ರಲ್ಲಿ ದೇಶದಲ್ಲಿ ಕಾರ್ಮಿಕರು/ನೌಕರರು ಪಡೆದ ಒಟ್ಟು ವೇತನದ ಮೊತ್ತ

₹411.18 ಕೋಟಿ ದುಡಿಯುವ ವರ್ಗದ ಕೊನೆಯ ಶೇ 50ರಷ್ಟು ಮಂದಿ ಪಡೆದ ವೇತನ

₹127.4 ಕೋಟಿ ದುಡಿಯುವ ವರ್ಗದ ಮೊದಲ ಶೇ 1ರಷ್ಟು ಮಂದಿ ಪಡೆದ ವೇತನ

₹607.7 ಕೋಟಿ ದುಡಿಯುವ ವರ್ಗದ ಮೊದಲ ಶೇ 10ರಷ್ಟು ಮಂದಿ ಪಡೆದ ವೇತನ

₹850.12 ಕೋಟಿ ದುಡಿಯುವ ವರ್ಗದ ಮೊದಲ ಶೇ 10ರಿಂದ ಶೇ50ರವರೆಗಿನ ಮಂದಿ ಪಡೆದ ವೇತನ

₹411.18 ಕೋಟಿ ದುಡಿಯುವ ವರ್ಗದ ಕೊನೆಯ ಶೇ 50ರಷ್ಟು ಮಂದಿ ಪಡೆದ ವೇತನ

₹32 ಕೋಟಿ ದುಡಿಯುವ ವರ್ಗದ ಅತ್ಯಂತ ಕೊನೆಯ ಶೇ 10ರಷ್ಟು ಮಂದಿ ಪಡೆದ ವೇತನ

ಕಡಿಮೆ ವೇತನ ವರ್ಗ: ಸ್ವಉದ್ಯೋಗಿಗಳ ಪ್ರಮಾಣ ಹೆಚ್ಚು

ವೇತನ ವರ್ಗ	ಕಾಯಂ ಕೆಲಸ ಇರುವವರ ಪ್ರಮಾಣ	ಕಾಯಂ ಅಲ್ಲದ ಕೆಲಸ ಇರುವವರ ಪ್ರಮಾಣ	ಸ್ವ ಉದ್ಯೋಗಿಗಳ ಪ್ರಮಾಣ
₹5,000ಕ್ಕೂ ಕಡಿಮೆ	21.62%	1.80%	76.58%
₹5,000-₹10,000	14.33%	13.12%	72.55%
₹10,000-₹15,000	13.86%	14.86%	71.29%
₹15,000-₹20,000	15.03%	20.11%	64.85%
₹20,000-₹50,000	19.35%	31.40%	49.26%
₹50,000-₹1,00,000	26.40%	28.23%	45.37%
₹1,00,000ಕ್ಕೂ ಹೆಚ್ಚು	41.59%	14.41%	43.99%

- 20,000ದಿಂದ ₹ 1 ಲಕ್ಷದವರೆಗೆ ವೇತನ ಪಡೆಯುವವರಲ್ಲಿ ಕಾಯಂ ಉದ್ಯೋಗದಲ್ಲಿ ಇರುವವರ ಪ್ರಮಾಣವು ದೊಡ್ಡದಾಗಿಯೇ ಇದೆ. ಇಷ್ಟು ದೊಡ್ಡ ಪ್ರಮಾಣದ ಕಾರ್ಮಿಕ ವರ್ಗದ ಉದ್ಯೋಗ ಭದ್ರತೆ ಅನಿಶ್ಚಿತವಾಗಿದೆ ಎಂಬುದನ್ನು ಈ ದತ್ತಾಂಶ ತೋರುತ್ತದೆ


- ದೇಶದ ಕಾರ್ಮಿಕರನ್ನು ಏಳು ವೇತನ ವರ್ಗಗಳಾಗಿ ವರ್ಗೀಕರಿಸಲಾಗಿದೆ. ಈ ವರ್ಗಗಳಲ್ಲಿ ಕಾಯಂ ಉದ್ಯೋಗದಲ್ಲಿ ಇರುವವರು, ಕಾಯಂ ಅಲ್ಲದ ಉದ್ಯೋಗದಲ್ಲಿ ಇರುವವರು ಮತ್ತು ಸ್ವಉದ್ಯೋಗಿಗಳು ಎಂದು ಮರು ವರ್ಗೀಕರಣ ಮಾಡಲಾಗಿದೆ. ಅತ್ಯಂತ ಕಡಿಮೆ ವೇತನ ಪಡೆಯುತ್ತಿರುವವ ವರ್ಗದಲ್ಲಿ ಸ್ವ ಉದ್ಯೋಗಿಗಳ ಪ್ರಮಾಣ ಅತಿಹೆಚ್ಚು. ವೇತನದ ಮೊತ್ತ ಹೆಚ್ಚುತ್ತಾ ಹೋದಂತೆ ಸ್ವ ಉದ್ಯೋಗಿಗಳ ಪ್ರಮಾಣ ಕಡಿಮೆಯಾಗಿದೆ. ಅಂದರೆ, ಉತ್ತಮ ಗಳಿಕೆಯ ಸ್ವಉದ್ಯೋಗಿಗಳ ಸಂಖ್ಯೆ ಮತ್ತು ಪ್ರಮಾಣ ಕಡಿಮೆ ಎಂಬುದನ್ನು ಇದು ಸೂಚಿಸುತ್ತದೆ
- ಪ್ರತಿ ತಿಂಗಳು ₹5,000ಕ್ಕಿಂತ ಕಡಿಮೆ ವೇತನ/ಗಳಿಕೆ ಪಡೆಯುವ ಕಾರ್ಮಿಕರಲ್ಲಿ ಸ್ವಉದ್ಯೋಗಿಗಳ ಪ್ರಮಾಣ ಶೇ 76ಕ್ಕಿಂತ ಹೆಚ್ಚು. ಇಷ್ಟು ಕಡಿಮೆ ವೇತನ ಪಡೆಯುವ ವರ್ಗದಲ್ಲಿ ಸಣ್ಣ-ಪುಟ್ಟ ಸ್ವಉದ್ಯೋಗ ಮಾಡುವವರ ಪ್ರಮಾಣ ಹೆಚ್ಚು. ಅಂದರೆ, ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಕಾಗುವಷ್ಟು ಗಳಿಕೆ ಕೊಡುವ ಸ್ವಉದ್ಯೋಗವೂ ಇವರಿಗೆ ಇಲ್ಲ ಎಂಬುದನ್ನು ಇದು ಸೂಚಿಸುತ್ತದೆ. ₹5,000ದಿಂದ ₹10,000ರದವರೆಗೆ ವೇತನ/ಗಳಿಕೆ ಪಡೆಯುವ ಕಾರ್ಮಿಕ ವರ್ಗದ ಸ್ಥಿತಿಯೂ ಇದಕ್ಕಿಂತ ಹೆಚ್ಚು ಭಿನ್ನವಾಗಿಲ್ಲ
- ಮಾಸಿಕ ₹5,000ಕ್ಕಿಂತ ಕಡಿಮೆ ವೇತನ ಪಡೆಯುವ ವರ್ಗದಲ್ಲಿ ಕಾಯಂ ಉದ್ಯೋಗದಲ್ಲಿ ಇರುವವರ ಪ್ರಮಾಣ ಶೇ 21.36ರಷ್ಟಿದೆ. ಅಂದರೆ, ಕಾಯಂ ಉದ್ಯೋಗದಲ್ಲಿ ಇದ್ದೂ, ಬಹಳ ಮಂದಿಗೆ ಕನಿಷ್ಠ ವೇತನ ದೊರೆಯುತ್ತಿಲ್ಲ. ಕನಿಷ್ಠ ವೇತನದ ನಿಯಮಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗಿಲ್ಲ ಎಂಬುದನ್ನು ಈ ದತ್ತಾಂಶ ತೋರಿಸುತ್ತದೆ
- ₹5,000ದಿಂದ ₹10,000ದವರೆಗೆ ವೇತನ ಪಡೆಯುವ ವರ್ಗದಲ್ಲಿ ಶೇ 14.33ರಷ್ಟು ಮಂದಿ ಕಾಯಂ ಉದ್ಯೋಗದಲ್ಲಿ ಇದ್ದಾರೆ. ಇವರಲ್ಲಿ ಬಹುಪಾಲು ಮಂದಿ, ಕನಿಷ್ಠ ವೇತನವನ್ನೂ ಪಡೆಯುತ್ತಿಲ್ಲ ಎಂಬುದನ್ನು ಈ ದತ್ತಾಂಶ ಸೂಚಿಸುತ್ತದೆ. ಕನಿಷ್ಠ ವೇತನದ ನಿಯಮಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗಿಲ್ಲ ಎಂಬುದರತ್ತ ಈ ದತ್ತಾಂಶ ಬೊಟ್ಟು ಮಾಡುತ್ತದೆ

ಕಾರ್ಮಿಕ ಬಲದಲ್ಲಿ ಭಾಗವಹಿಸುವಿಕೆ ಪ್ರಮಾಣ

2017-18	49.8%
2018-19	50.2%
2019-20	53.5%

2017ರಿಂದ 2020ರವರೆಗಿನ ಮೂರು ವರ್ಷಗಳಲ್ಲಿ ಕಾರ್ಮಿಕ ಬಲದಲ್ಲಿ ಜನರ ಭಾಗವಹಿಸುವಿಕೆ ಪ್ರಮಾಣವು ಅಲ್ಪ ಏರಿಕೆಯಾಗಿದೆ. ಆದರೆ, ಗಮನಿಸಬೇಕಾದ ಅಂಶ ಎಂದರೆ, ಸುಮಾರು ಶೇ 50ರಷ್ಟು ಜನರು ಕಾರ್ಮಿಕ ಬಲದ ಹೊರಗೇ ಇದ್ದಾರೆ. ಜನರಿಗೆ ಕೆಲಸ ಸಿಗದೇ ಇರುವುದು ಅಸಮಾನತೆ ಹೆಚ್ಚಳಕ್ಕೆ ಕಾರಣವಾಗುತ್ತದೆ. ಕುಟುಂಬಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರಿಯುವುದಕ್ಕೆ ಅಡ್ಡಿಯಾಗುತ್ತದೆ. ಹಾಗಾಗಿ, ಹೆಚ್ಚು ಸಂಬಳವಿರುವ, ಸುರಕ್ಷಿತವಾದ ಹಾಗೂ ಕೌಶಲ ಆಧಾರಿತವಾದ ಕೆಲಸಗಳನ್ನು ಹೆಚ್ಚು ಹೆಚ್ಚು ಸೃಷ್ಟಿಸಬೇಕಾಗಿದೆ ಎಂದು ಸಲಹೆ ಕೊಡಲಾಗಿದೆ.

ಭಾಗವಹಿಸುವಿಕೆಯಲ್ಲಿ ಪುರುಷ, ಮಹಿಳೆಯರ ಪ್ರಮಾಣ



ಕಾರ್ಮಿಕ ಬಲದಲ್ಲಿ ಮಹಿಳೆಯರ ಪ್ರಮಾಣವು ಪುರುಷರಿಗೆ ಹೋಲಿಸಿದರೆ ಬಹಳ ಕಡಿಮೆ ಇದೆ. ಇದು 2017–20ರ ನಡುವಣ ವರ್ಷಗಳಲ್ಲಿ ಸ್ವಲ್ಪ ಏರಿಕೆ ಆಗಿದೆ. ಹಾಗಿದ್ದರೂ, ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಶೇ 30ರಷ್ಟು ಜನರು ಮಾತ್ರ ಕೆಲಸ ಪಡೆದುಕೊಂಡಿದ್ದಾರೆ. ಕಾರ್ಮಿಕ ಬಲದಲ್ಲಿ ಪುರುಷರ ಪ್ರಮಾಣವು ಶೇ 75ಕ್ಕಿಂತ ಹೆಚ್ಚೇ ಇದೆ




ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 127

ಮನ್ಮಥನಿಗೆ ಶಾಪವಿತ್ತ ಬ್ರಹ್ಮ

ಬ್ರಹ್ಮನ ಬೆವರಿನಿಂದ ಅಗ್ನಿಷ್ವಾತ್ತರು ಎಂಬ ಪಿತೃದೇವತೆಗಳೂ ಬರ್ಹಿಷದರು ಎಂಬ ಪಿತೃಗಣಗಳೂ ಜನಿಸಿದವು. ಈ ಸಂದರ್ಭದಲ್ಲಿ ದಕ್ಷಪ್ರಜಾಪತಿ ಬೆವರಿನಿಂದ ರತಿದೇವಿ ಜನಿಸಿದಳು. ಅವಳನ್ನು ನೋಡಿದ ಮರೀಚಿ ಸೇರಿದಂತೆ ಆರು ಜನ ಮುನಿಗಳು ತಮ್ಮ ಇಂದ್ರಿಯಗಳನ್ನು ನಿಗ್ರಹಿಸಿದರು. ಆದರೆ ಕ್ರತುಮುನಿ, ವಸಿಷ್ಠ , ಪುಲಸ್ತ್ಯ, ಅಂಗಿರಸ್ಸು ಕಾಮವಿಕಾರಕ್ಕೆ ತುತ್ತಾದರು. ಈ ನಾಲ್ವರ ವೀರ್ಯವು ಭೂಮಿ ಮೇಲೆ ಬಿದ್ದಾಗ, ಕ್ರತುಮುನಿಯಿಂದ ಸೋಮಪರು, ವಸಿಷ್ಠನಿಂದ ಸುಕಾಲಿಪಿತೃಗಳು, ಪುಲಸ್ತ್ಯನಿಂದ ಆಜ್ಯಪರು, ಮತ್ತು ಅಂಗಿರಸ್ಸು ವೀರ್ಯದಿಂದ ಹವಿಷ್ಮಂತ ಎಂಬ ನಾಲ್ಕು ವಿಧದ ಪಿತೃದೇವತೆಗಳು ಜನಿಸಿದರು. ಇವರೆಲ್ಲರೂ ಶ್ರಾದ್ಧದಲ್ಲಿನ ಕವ್ಯವನ್ನು ಸೇವಿಸುವವರು.

ಬ್ರಹ್ಮನ ಬೆವರಿನಿಂದ ಹುಟ್ಟಿದ ಅಗ್ನಿಷ್ವಾತ್ತರು ಎಂಬ ಪಿತೃದೇವತೆಗಳಿಗೆ ಸಂಧ್ಯೆಯೇ ತಾಯಿಯಾದಳು. ಏಕೆಂದರೆ, ಬ್ರಹ್ಮನ ಬೆವರಿನಲ್ಲಿ ಅವರು ಹುಟ್ಟಲು ಪ್ರೇರಣೆ ನೀಡಿದ್ದೆ ಸಂಧ್ಯೆಯಾಗಿದ್ದರಿಂದ ಅಗ್ನಿಷ್ವಾತ್ತರುಗಳಿಗೆ ತಾಯಿಯಾದಳು. ಅಲ್ಲದೆ, ಅವಳು ಶಂಕರನಿಂದ ಅನುಗ್ರಹಿಸಲ್ಪಟ್ಟವಳಾಗಿದ್ದರಿಂದ ಧರ್ಮಕರ್ಮಗಳಲ್ಲಿ ನಿರತಳಾಗಿ ಪರಿಶುದ್ಧಳಾಗಿದ್ದಳು. ಈ ಘಟನೆಗಳೆಲ್ಲ ನಡೆದ ನಂತರ ಮಹಾಶಿವ ಧರ್ಮಮಾರ್ಗದಿಂದ ನಡೆಯುವಂತೆ ಬ್ರಹ್ಮ ಮತ್ತವನ ಪರಿವಾರಕ್ಕೆ ಮತ್ತೆ ತಿಳಿವಳಿಕೆ ಹೇಳಿ ಅಂತರ್ಧಾನನಾದ.

ಶಿವನ ನಿರ್ಗಮನದ ನಂತರ ಜಗತ್ಪಿತಾಮಹನಾದ ಬ್ರಹ್ಮನ ಕೋಪ ಮನ್ಮಥನ ಕಡೆಗೆ ತಿರುಗಿತು. ತನ್ನನ್ನು ಮತ್ತು ತನ್ನ ಮಕ್ಕಳನ್ನು ಕಾಮವಿಕಾರಗೊಳಿಸಿ, ಶಿವನ ಮುಂದೆ ತಲೆತಗ್ಗಿಸುವಂತೆ ಮಾಡಿದ ಮನ್ಮಥನನ್ನು ಶಪಿಸಿದ. ‘ಮುಂದೊಂದು ದಿನ ನಿನ್ನ ಬಾಣಗಳು ಮಹಾದೇವನ ಮೇಲೆ ಎರಗಿದಾಗ, ಆ ಶಿವನ ಮೂರನೆ ನೇತ್ರಾಗ್ನಿಯಿಂದ ಸುಟ್ಟುಹೋಗು’ ಎಂದು ಶಾಪಕೊಟ್ಟ.

ಬ್ರಹ್ಮನ ಶಾಪವನ್ನು ಕೇಳಿ ಭಯಭೀತನಾದ ಮನ್ಮಥ ಕೂಡಲೇ ಬ್ರಹ್ಮನ ಮುಂದೆ ಪ್ರತ್ಯಕ್ಷನಾಗಿ ‘ಓ ಬ್ರಹ್ಮದೇವನೇ! ನೀನು ನ್ಯಾಯಮಾರ್ಗದಲ್ಲಿ ನಡೆಯುವವನು. ನನ್ನನ್ನು ಕ್ರೂರವಾಗಿ ಏಕೆ ಶಪಿಸಿದೆ? ನೀನು ಯಾವ ಕಾರ್ಯವನ್ನು ನನಗೆ ನಿಯೋಜಿಸಿರುವೆಯೋ ಅದನ್ನೇ ನಾನು ಮಾಡಿರುವೆ. ಇನ್ನಾವ ತಪ್ಪನ್ನೂ ನಾನು ಮಾಡಿಲ್ಲ. ಹೀಗಿದ್ದು ನೀನು ನನ್ನನ್ನು ಶಪಿಸಿದ್ದು ಸರಿಯಲ್ಲ. ನೀನೂ ಸೇರಿದಂತೆ ವಿಷ್ಣು, ರುದ್ರ ಎಲ್ಲರೂ ನನ್ನ ಬಾಣಗಳಿಗೆ ಅಧೀನರಾಗಿರುವರೆಂದು ನೀನೇ ಹೇಳಿದ್ದೆ. ಈ ನಿನ್ನ ಮಾತು ನಿಜವೋ ಅಲ್ಲವೋ ಎಂದು ಪರೀಕ್ಷಿಸಲು ನಿನ್ನ ಮೇಲೆ ಬಾಣ ಪ್ರಯೋಗಿಸಿದೆ ಅಷ್ಟೆ. ಆದುದರಿಂದ ನನ್ನಲ್ಲಿ ಅಪರಾಧವಿಲ್ಲ. ನಿರಪರಾಧಿಯಾದ ನನ್ನಲ್ಲಿ ಕ್ರೂರವಾದ ನಿನ್ನ ಶಾಪವು ಯುಕ್ತವಾದುದಲ್ಲ’ ಎಂದು ಪ್ರಲಾಪಿಸಿದ.

ಈ ರೀತಿ ಮನ್ಮಥ ದುಃಖಭರಿತನಾಗಿ ಹೇಳಿದ ಮಾತುಗಳನ್ನು ಕೇಳಿದ ಜಗದೊಡೆಯನಾದ ಬ್ರಹ್ಮನಿಗೆ ಒಂದಿಷ್ಟು ಕೋಪ ತಣ್ಣಗಾಯಿತು. ವಿನೀತನಾಗಿ ತನ್ನ ಮುಂದೆ ತಲೆತಗ್ಗಿಸಿ ನಿಂತಿದ್ದ ಮನ್ಮಥನನ್ನು ಉದ್ದೇಶಿಸಿ ಹೇಳಿದ ‘ಎಲೈ ಕಾಮನೇ! ಈ ಸಂಧ್ಯೆ ನನ್ನ ಪುತ್ರಿ. ಇವಳಲ್ಲಿ ನನಗೆ ಅನುರಾಗ ಬರುವಂತೆ ನೀನು ಬಾಣವನ್ನು ಪ್ರಯೋಗಿಸಿದ್ದು ಸರಿಯೇ? ಇದು ನ್ಯಾಯವಲ್ಲವಾದುದರಿಂದ ನಿನ್ನನ್ನು ಶಪಿಸಿದೆ. ಈಗ ನಾನು ಕೋಪವಿಲ್ಲದೆ ಶಾಂತನಾಗಿರುವೆ. ಈಗ ನಿನಗೆ ಹಿತವಾದುದನ್ನು ಹೇಳುವೆನು ಕೇಳು, ಸಂದೇಹವನ್ನು ಬಿಟ್ಟು ನಿಶ್ಚಿಂತನಾಗಿರು. ಭಯವನ್ನು ತ್ಯಜಿಸು’ ಎಂದು ಸಮಾಧಾನಿಸಿದ.

ಮಾತು ಮುಂದುವರೆಸಿದ ಬ್ರಹ್ಮ ‘ಎಲೈ ಮನ್ಮಥ! ಮುಂದೆ ನೀನು ಶಂಕರನ ತೃತೀಯ ನೇತ್ರಾಗ್ನಿಯಿಂದ ದಗ್ಧನಾಗುವೆ. ಆದರೆ ಸ್ವಲ್ಪ ಕಾಲಾನಂತರದಲ್ಲಿಯೇ ಶಿವನ ಕರುಣೆಯಿಂದ ಮತ್ತೆ ನಿನ್ನ ಶರೀರವನ್ನು ಪಡೆಯುವೆ. ಶಂಕರ ಯಾವಾಗ ಮದುವೆ ಮಾಡಿಕೊಳ್ಳುವನೋ, ಆಗ ಶಂಕರನೇ ನಿನಗೆ ಪುನಃ ಶರೀರವನ್ನು ಕರುಣಿಸುವನು’ ಎಂದು ಹೇಳಿದ ಬ್ರಹ್ಮ, ತನ್ನ ಮಾನಸಪುತ್ರರಾದ ಮರೀಚಿ ಮೊದಲಾದವರು ನೋಡುತ್ತಿರುವಂತೆಯೇ ಅಲ್ಲಿಂದ ಅಂತರ್ಧಾನನಾದ.

ಬ್ರಹ್ಮನ ಮಾತುಗಳನ್ನು ಕೇಳಿದ ಮನ್ಮಥ ಹರ್ಷಚಿತ್ತನಾದರೆ, ಬ್ರಹ್ಮನ ಮಾನಸಪುತ್ರರೂ ಸಂತೋಷಗೊಂಡು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು ಎಂಬಲ್ಲಿಗೆ ಸತೀಖಂಡದ ಮೂರನೆ ಅಧ್ಯಾಯ ಮುಕ್ತಾಯವಾಗುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

‘ವಾರಾಣಸಿಯ ಜ್ಞಾನವಾಪಿ ಮಸೀದಿಯ ನೆಲಮಾಳಿಗೆಯಲ್ಲಿ ಬೃಹತ್ ಶಿವಲಿಂಗ ಪತ್ತೆಯಾಗಿದೆ. ಜತೆಗೆ ಹಿಂದೂ ದೇವಾಲಯದ ಹಲವು ಕುರುಹುಗಳು ಪತ್ತೆಯಾಗಿವೆ. ಮೊಘಲ್ ಕಾಲದ ಮಸೀದಿಗಳ ವಾಸ್ತುಶಿಲ್ಪ ಅತ್ಯದ್ಭುತವಾಗಿವೆ. ಅವೆಲ್ಲವುಗಳ ನೆಲಮಾಳಿಗೆ ಮತ್ತು ತಳಪಾಯದಲ್ಲಿ ಹಿಂದೂ ದೇವಾಲಯಗಳಿವೆ’ ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಇವುಗಳ ಜತೆಗೆ ಗುಂಡಿಯೊಂದರಲ್ಲಿ ಬೃಹತ್ ಶಿವಲಿಂಗವಿರುವ ಚಿತ್ರವೂ ವೈರಲ್ ಆಗಿದೆ.



‘ಇದು ಸುಳ್ಳು ಸುದ್ದಿ’ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ‘ವಿಯೆಟ್ನಾಂನ ಮೈ ಸಾನ್ ಸೈಟ್‌ನ ಇಂದ್ರವರ್ಮ ಎಂಬ ರಾಜ ನಿರ್ಮಿಸಿದ್ದ ದೇವಾಲಯಗಳ ಸಂಕೀರ್ಣದ ಜೀರ್ಣೋದ್ಧಾರ ಕಾರ್ಯ 2020ರಲ್ಲಿ ಆರಂಭವಾಗಿತ್ತು. ಭಾರತೀಯ ಪುರಾತತ್ವ ಇಲಾಖೆಯು ಈ ಕಾರ್ಯದ ನೇತೃತ್ವ ವಹಿಸಿಕೊಂಡಿತ್ತು. ಈ ಬಗ್ಗೆ ಕೇಂದ್ರ ಸಚಿವರಾಗಿದ್ದ ಪ್ರಹ್ಲಾದ್ ಸಿಂಗ್ ಪಟೇಲ್ ಅವರು 2020ರ ಮೇ 29ರಂದು ಟ್ವೀಟ್ ಮಾಡಿದ್ದರು. ಅವರು ಟ್ವೀಟ್ ಮಾಡಿದ್ದ ಶಿವಲಿಂಗದ ಚಿತ್ರವನ್ನು ಬಳಸಿಕೊಂಡು, ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ. ಅದನ್ನು ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ’ ಎಂದು ಆಲ್ಟ್ ನ್ಯೂಸ್ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಕರ್ಮಶೇಷನಾಶಕ್ಕೆ ತಾಳ್ಮೆ

ಸಾಧ್ಯಪಡದಾರಿಗಂ ನರಭಾಲಪಟ್ಟವನು |
ಶುದ್ಧಪಡಿಸಲು ತೊಡೆದು ಪೂರ್ವದೆಲ್ಲವನು ||
ಹೊದ್ದೆ ಹರಿಯಲಿ ಬೇಕು ಕರ್ಮಶೇಷದ ಪಟವ |
ಬುದ್ಧಿನುಡಿ ಸೈರಣೆಯೆ – ಮಂಕುತಿಮ್ಮ || 633 ||

ಪದ-ಅರ್ಥ: ಸಾಧ್ಯಪಡದಾರಿಗಂ = ಸಾಧ್ಯಪಡದು-(ಸಾಧ್ಯವಾಗದು) + ಆರಿಗಂ(ಯಾರಿಗೂ), ನರಭಾಲಪಟ್ಟವನು = ಮನುಷ್ಯನ ಹಣೆಯಬರಹವನ್ನು, ಪೂರ್ವದೆಲ್ಲವನು = ಪೂರ್ವದ (ಹಿಂದಿನ) + ಎಲ್ಲವನು, ಹೊದ್ದೆ = ಹೊದ್ದುಕೊಂಡೇ, ಕರ್ಮಶೇಷದ = ಕರ್ಮದ ಬಾಕಿ, ಪಟವ = ಬಟ್ಟೆಯನ್ನು, ಸೈರಣೆ = ತಾಳ್ಮೆ.

ವಾಚ್ಯಾರ್ಥ: ಹಣೆಯಬರಹದಲ್ಲಿದ್ದುದನ್ನು ಅಳಿಸಿ ಹಿಂದಿನದೆಲ್ಲವನ್ನು ಶುದ್ಧಮಾಡಲು ಯಾರಿಂದಲೂ ಸಾಧ್ಯವಿಲ್ಲ. ಕರ್ಮಶೇಷವೆಂಬ ಬಟ್ಟೆಯನ್ನು ನಾವು ಹೊದ್ದೇ ಹರಿಯಬೇಕು. ಇದನ್ನು ಅನುಭವಿಸಲು ಬೇಕಾದ ಬುದ್ಧಿಯ ಮಾತೆಂದರೆ – ತಾಳ್ಮೆ.

ವಿವರಣೆ: ಕರ್ಮ ಎಂಬುದು ಹಿಂದೂ ಧರ್ಮದ ಒಂದು ಕಲ್ಪನೆ. ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲ, ಕೆಟ್ಟ ಕರ್ಮದಿಂದ ಕೆಟ್ಟ ಫಲ. ಬಿತ್ತಿದಂತೆ ಬೆಳೆ ಎಂಬಂತೆ ಇದು. ಹಿಂದೂ ಧರ್ಮದ ಇನ್ನೊಂದು ಪರಿಕಲ್ಪನೆ ಪುನರ್ಜನ್ಮ, ದೇಹ ನಾಶವಾದರೂ ಅವಿನಾಶಿಯಾದ ಆತ್ಮ ಬಂದು ಶರೀರವನ್ನು ತೊರೆದು ಮತ್ತೊಂದು ಶರೀರವನ್ನು ಪಡೆದುಕೊಳ್ಳುವುದು. ಒಂದು ಜನ್ಮದಲ್ಲಿ ಮಾಡಿದ ಕರ್ಮಕ್ಕೆ ತಕ್ಷಣವೇ ಪ್ರತಿಕ್ರಿಯೆ ದೊರಕಲಿಕ್ಕಿಲ್ಲ. ಆಗ ಸಂಗ್ರಹಗೊಂಡ ಕರ್ಮದ ಬಾಕಿಯನ್ನು ಮುಂದಿನ ಜನ್ಮದಲ್ಲಿ ತೀರಿಸಲೇಬೇಕಾಗುತ್ತದೆಂಬುದು ಕರ್ಮಸಿದ್ಧಾಂತ. ನಮ್ಮ ಕರ್ಮದ ಫಲವನ್ನು ನಾವೇ ತೀರಿಸಬೇಕು. ಅದನ್ನು ಮತ್ತೊಬ್ಬರೊಡನೆ ಹಂಚಿಕೊಳ್ಳಲಾಗುವುದಿಲ್ಲ. ಹೀಗೆ ಜನ್ಮಜನ್ಮಾಂತರಗಳಲ್ಲಿ ಕರ್ಮ ಬೆಂಬತ್ತಿ ಬರುತ್ತದೆ.

ನಾವು ಕೆಲವು ವಿಶೇಷಗಳನ್ನು ಕಂಡಿದ್ದೇವೆ. ತುಂಬ ಒಳ್ಳೆಯವರಾದವರು ಬದುಕಿನುದ್ದಕ್ಕೂ ಕಷ್ಟವನ್ನು ಅನುಭವಿಸಿದಾಗ, ಅಷ್ಟು ಒಳ್ಳೆಯ ಕರ್ಮಗಳನ್ನು ಮಾಡಿದವರಿಗೆ ಯಾಕೆ ಈ ರೀತಿಯ ತೊಂದರೆ ಎನ್ನಿಸಿಲ್ಲವೆ? ಒಂದು ಪುಟ್ಟ ಮಗು ಯಾವುದೋ ವಿಚಿತ್ರವಾದ ರೋಗದಿಂದ ಒದ್ದಾಡುವಾಗ, ಇಷ್ಟು ಚಿಕ್ಕ ಮಗು ಅದಾವ ಪಾಪಕರ್ಮ ಮಾಡಲು ಸಾಧ್ಯ? ಅದಕ್ಕೇಕೆ ಈ ಕಷ್ಟ? ಎಂದು ಮರುಗಿಲ್ಲವೆ? ಅದನ್ನು ಮನಸ್ಸಿಗೆ ಒಪ್ಪಿಸಲು ಈ ಕರ್ಮಸಿದ್ಧಾಂತದ ವಿಚಾರ ಬಂದಿತು ಎನ್ನಿಸುತ್ತದೆ. ಯಾವುದಕ್ಕೆ ವೈಚಾರಿಕವಾಗಿ ಉತ್ತರಿಸಲು ಕಷ್ಟವೋ, ಆಗ ನಂಬಿಕೆ ಮುಂದೆ ತೂರಿ ಬರುತ್ತದೆ. ಈ ಜನ್ಮದಲ್ಲಿ ಒಳ್ಳೆಯ ಕರ್ಮಗಳನ್ನು ಮಾಡಿದ್ದರೂ, ಹಿಂದಿನ ಜನ್ಮದಲ್ಲಿ ಏನು ಮಾಡಿದ್ದರೋ? ಅದರ ಫಲವನ್ನು ಈಗ ಅನುಭವಿಸುತ್ತಿದ್ದಾರೆ ಎಂಬುದು ಸಮಜಾಯಿಷಿ. ಇದರಿಂದ ಮುಕ್ತಿ ಇಲ್ಲ. ಇಲ್ಲಿ ಯಾವುದೇ ನ್ಯಾಯಾಧಿಕರಣ, ಶಿಕ್ಷೆ, ತಪ್ಪೊಪ್ಪಿಗೆ, ಪಶ್ಚಾತ್ತಾಪ, ದೈವಾನುಗ್ರಹದಿಂದ ಕ್ಷಮಾದಾನ ಯಾವುದೂ ಇಲ್ಲ. ಅದನ್ನು ಸತ್ಕರ್ಮ ಮಾಡಿಯೇ ಸವೆಸಬೇಕು. ಇದೊಂದು ರೀತಿಯಲ್ಲಿ ಜೀವನವನ್ನು ಸತ್ಕರ್ಮದೆಡೆಗೆ ತಿರುಗಿಸಲು, ಕೆಟ್ಟಕೆಲಸಗಳಿಂದ ವಿಮುಖ ಮಾಡಲು ಮಾಡಿದ ಉಪಾಯವೂ ಇರಬಹುದು.

ಕಗ್ಗ ಅದರ ಬಗ್ಗೆ ಮಾತನಾಡುತ್ತದೆ. ನಮ್ಮ ಪೂರ್ವಕರ್ಮವನ್ನು ಹಣೆಯಬರಹ ಎನ್ನುತ್ತೇವೆ. ಆ ಹಣೆಯಬರಹವನ್ನು ಯಾರಿಂದಲೂ ಅಳಿಸಲು ಸಾಧ್ಯವಿಲ್ಲ. ಹಿಂದೆ ಮಾಡಿದ್ದೆಲ್ಲವನ್ನು ಶುದ್ಧಮಾಡಿ ಅಳಿಸಲಾಗುತ್ತದೆಯೆ? ಹಿಂದಿನ ಕರ್ಮ ಸಂಗ್ರಹವೆಂಬ ಬಟ್ಟೆಯನ್ನು ನಾವು ಹೊದ್ದುಕೊಂಡೇ ಸವೆಸಿ ಹರಿಯಬೇಕು. ಅಂದರೆ ಸತ್ಕರ್ಮಗಳಿಂದಲೇ ಹಿಂದಿನ ದುಷ್ಕರ್ಮಗಳ ಬಾಕಿಯನ್ನು ಸವೆಸಬೇಕು. ಸವೆಸುವುದು ದು:ಖದಾಯಕವಾದದ್ದು. ಆ ಸಮಯದಲ್ಲಿ ನಮಗೆ ಸಹಾಯಕವಾಗುವುದು ತಾಳ್ಮೆ ಮಾತ್ರ. ಅದೊಂದೇ ಬುದ್ಧಿಯ ಮಾತು ನಮಗೆ ಬೇಕಾದದ್ದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮೇ 23, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣ ಅಷ್ಟಮಿ ಗಂ. 11-35, ನಕ್ಷತ್ರ: ಶತಭಿಷ ಗಂ. 22-22 ಯೋಗ: ವೈಧೃತಿ ಗಂ. 25-05, ಕರಣ: ಕೌಲವ ಗಂ. 11-35, ವೃಷಭ ಮಾಸದ 08 ನೇ ದಿನ. ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-07 ಸೂರ್ಯಾಸ್ತ : 06-48 ಮುಸ್ಲಿಂ ದಿನಾಂಕ : 21 ಶವ್ವಾಲ್ ದಿನ ವಿಶೇಷ : ಝುರ್ತೋಸ್ಟ್-ನೊ-ಡಿಸೊ (ಪಾರ್ಸಿ)
ಅದೃಷ್ಟ ಸಂಖ್ಯೆ : 5, 12

ಮೇಷ: ನಿಮ್ಮ ವ್ಯವಹಾರಗಳನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳಲು ಈ ದಿನ ಪ್ರಯತ್ನ ಪಡುವುದು ಒಳ್ಳೆಯದು. ಕೃಷಿಗೆ ಸಂಬಂಧಿಸಿದ ಯಂತ್ರಗಳ ಖರೀದಿಯಿಂದ ಅನುಕೂಲಕರ ವಾತಾವರಣ.

ವೃಷಭ: ಕೆಲಸದ ಮೇಲಿನ ಹೆಚ್ಚಿನ ತರಬೇತಿ ಅನಿವಾರ್ಯ. ಕೆಲಸ ಬದಲಿಸುವ ಯೋಜನೆಯಿಂದ ಹೊರ ಬರುವುದು ಉತ್ತಮ. ನಿಮ್ಮ ಮಾತುಗಳಿಗೆ ಎಲ್ಲರಿಂದಲೂ ಮನ್ನಣೆ ದೊರೆಯಲಿದೆ. ದೇವರಲ್ಲಿ ನಂಬಿಕೆ ಹೆಚ್ಚಲಿದೆ.

ಮಿಥುನ: ದಂತ ವೈದ್ಯರಿಗೆ ಲಾಭದಾಯಕ ದಿನ. ಆರ್ಥಿಕವಾಗಿ ಲೇವಾದೇವಿ ವ್ಯವಹಾರದಲ್ಲಿ ಜಾಗರೂಕತೆ ಇರಲಿ. ನಿಮ್ಮ ಸತ್ಕಾರ್ಯದ ಯತ್ನಗಳು ಕೈಗೂಡಲು ತಾಳ್ಮೆ ವಹಿಸುವುದು ಸೂಕ್ತ. ಮನಸ್ಸಿಗೆ ನೆಮ್ಮದಿ ನೀಡುವ ಸುದ್ದಿ ಕೇಳುವಿರಿ.

ಕರ್ಕಾಟಕ: ಸ್ನೇಹಿತರಿಂದ ಅಪೇಕ್ಷಿಸುವ ಸಹಕಾರ ಸಿಗಲಿದೆ. ಬಂಧುಗಳ ಮನೆಯ ಸತ್ಕಾರಕೂಟಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿರಿ. ಅಂದುಕೊಂಡ ಕೆಲಸಗಳು ಉತ್ತಮವಾಗಿ ನೆರವೇರಿವುದರಿಂದ ನೆಮ್ಮದಿ.

ಸಿಂಹ: ಎಲ್ಲ ಕೆಲಸಗಳಲ್ಲೂ ಮುನ್ನಡೆ ಸಾಧಿಸುವಿರಿ. ವೃತ್ತಿಯಲ್ಲಿ ನಿಮ್ಮ ಅನುಭವ ಹಾಗು ಪರಿಶ್ರಮ ಸೂಕ್ತ ಸಮಯದಲ್ಲಿ ಬೆಳಕಿಗೆ ಬಂದು ಉಪಯೋಗವಾಗುವುದು. ಅದರಿಂದಾಗಿ ಹಿರಿಯ ಅಧಿಕಾರಿಗಳಿಂದ ಪ್ರಶಂಸೆ ಸಿಗಲಿದೆ.

ಕನ್ಯಾ: ಅನೇಕ ರೀತಿಯಲ್ಲಿ ಅದೃಷ್ಟದ ದಿನ. ಸರ್ಕಾರಿ ಗುತ್ತಿಗೆ ಕೆಲಸಗಳು ನಿಮ್ಮದಾಗಲಿದೆ. ಅಪೇಕ್ಷಿತರಿಗೆ ಸಾಧಾರಣವಾದ ಉದ್ಯೋಗ ದೊರೆಯಲಿದೆ, ಆ ಕೆಸಲ ಅಗೌರವವೆಂದು ಭಾವಿಸಿ ಅದನ್ನು ತಿರಸ್ಕರಿಸುವುದು ಸರಿಯಲ್ಲ.

ತುಲಾ: ಆತ್ಮೀಯರೊಂದಿಗೆ ಭಾವನೆಗಳನ್ನು ಹಂಚಿಕೊಳ್ಳುವಿರಿ. ಬದುಕಿನಲ್ಲಿ ನೆಲೆ ನಿಂತ ನೆಮ್ಮದಿ ಸಿಗಲಿದೆ. ಕುಟುಂಬದ ಇತಿಹಾಸದ ಬಗ್ಗೆ ಹಿರಿಯರಿಂದ ತಿಳಿದುಕೊಂಡಿದ್ದ ಕೆಲ ವಿಷಯಗಳು ಈಗ ನಿಮ್ಮ ಉಪಯೋಗಕ್ಕೆ ಬರಲಿದೆ.

ವೃಶ್ಚಿಕ: ಬರಲಿರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವ ವಿಚಾರದಲ್ಲಿ ವಿಫಲರಾಗುವಿರಿ. ವೈದ್ಯರಲ್ಲಿ ರಕ್ತದೊತ್ತಡ ಪರೀಕ್ಷಿಸಿಕೊಳ್ಳಿ. ಬ್ಯಾಂಕ್ ನೌಕರರಿಗೆ ಕೆಲಸಗಳಲ್ಲಿ ಒತ್ತಡ ಕಡಿಮೆಯಾಗಿ ಮನಸ್ಸಿಗೆ ನೆಮ್ಮದಿ.

ಧನು: ಉದ್ಯೋಗಕ್ಕೆ ಅನುಕೂಲವಾಗುವ ಹೊಸ ಜನರ ಪರಿಚಯ. ಪ್ರಯಾಣದಲ್ಲಿ ಎಚ್ಚರದಿಂದಿರಿ. ವೃತ್ತಿಯಲ್ಲಿ ಅಪಾದನೆಗಳು ಎದುರಾಗಿ ಮಾನಸಿಕ ಕಿರಿಕಿರಿ. ಉಮಾ ಮಹೇಶ್ವರನ ಆರಾಧನೆ ಮಾಡಿ.

ಮಕರ: ಮನೆಯಲ್ಲಿನ ಆಗು ಹೋಗುಗಳ ಬಗೆಗೆ ಹೆಚ್ಚು ಗಮನ ನೀಡಿ. ಆಫೀಸಿನಲ್ಲಿ ಉಂಟಾಗಿದ್ದ ಸಮಸ್ಯೆಗಳು ತನ್ನಂತಾನೆ ಬಗೆಹರಿದು ಮನಸ್ಸಿಗೆ ನಿರಾಳ. ದೃಢ ನಿರ್ಧಾರವನ್ನು ಕೈಗೊಂಡ ಫಲದಿಂದ ಉತ್ತಮ ಫಲಿತಾಂಶ.

ಕುಂಭ: ನಿಮ್ಮ ವಿರುದ್ಧದ ಆರೋಪಗಳು ನಿರಾಧಾರ ಎಂದು ಸಾಬೀತುಗೊಂಡು ಮನಸ್ಸಿಗೆ ನೆಮ್ಮದಿ. ನಿಮ್ಮಂತೆಯೇ ಇತರರೂ ಸಂತೋಷವಾಗಿರಬೇಕೆಂಬ ನಿಮ್ಮ ಮನೋಭಾವದಿಂದಾಗಿ ಹೆಚ್ಚಿನ ಗೌರವ.


ಮೀನ: ಜರುಗಲಿರುವ ಸಂಗತಿಯೊಂದು ಗಾಢ ಪರಿಣಾಮ ಬೀರಿ ವೃತ್ತಿಗೆ ಸಂಬಂಧಿಸಿ ಉತ್ತಮ ನಿರ್ಧಾರ ಕೈಗೊಳ್ಳಲು ಸಹಾಯವಾಗಲಿದೆ. ಉತ್ಪಾದನಾ ಕೆಲಸಗಳು ಚುರುಕುಗತಿಯಿಂದ ಸಾಗುವುದು ಲಾಭವನ್ನು ತರಲಿದೆ.

ಪದಬಂಧ 4966

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಅಂತರವಿರಿಸಿ ಮಾಡಿದ ತರ್ಜುಮೆ! (4)
5.ಮಲಯದಲ್ಲಿರುವ ಶ್ರೀಗಂಧ (4)
6.ಯಮನಿದ್ದಾಗಿನ ಸೂತ್ರ! (3)
9.ಜನರೊಳಗೆ ಕಾಣಿಸಿದ ಆಳು (3)
10.ಅಶ್ವದ ಮುಖವಿದು (5)
11.ಕಡ ಪಡೆದು ನೋಡುತ್ತಿರುವ ಸಮುದ್ರ (3
12.ಕರದಿಂದ ಪ್ರಾರಂಭಿಸಿದ ಉತ್ಸವ (3)
14.ಉಪಯೋಗಿಸುವ ನೀರಿನಪಾತ್ರೆ (4)
15.ರಕ್ತ ವರ್ಣದ ಗುಲಾಬಿ (4)

ಮೇಲಿಂದ ಕೆಳಕ್ಕೆ
1.ಈಕೆ ನಿರ್ಭಾಗ್ಯ ಹೆಂಗಸು (4)
2.ದುಸ್ತರದಲ್ಲೇ ಮಡಿಕೆಯನ್ನು ಹುಡುಕಿ! (2)
3.ಜಯವನ್ನು ಗಳಿಸಿರುವ ಒಡೆಯ (4)
7.ಭವ್ಯವಾದ ಸೌಧವಿದು (3)
8.ಕಳವಳಪಟ್ಟು ತಿಂದಿರುವ ತುತ್ತು (3)
9.ಸೀತೆಯ ತಂದೆ (3)
11.ಕರುವಿಗೆ ತೋರಿದ ದಯೆ (4)
13.ಎಲ್ಲೆಯ ಬಳಿ ತೋರಿದ ಅವಸರ (4)
15.ಉರಿಯುತ್ತಿರುವ ಇದ್ದಿಲು (2)



4965ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹರವಿ 3.ಉಪವಾಸ
5.ಕರ 6.ಅನುಮತಿ
8.ತಾತಾ 9.ಉಮೇದು
10.ವಧು 11.ವನವಾಸ
12.ಮಂಗ 14.ನದೀತೀರ
15.ರಗಡು

ಮೇಲಿಂದ ಕೆಳಕ್ಕೆ:
1.ಹಲ 2.ವಿಧುರ
4.ಸದ್ಗತಿ 5.ಕರತಾಡನ
6.ಆಮದು 7.ಮದುವಣಿಗ
9.ಉಬ್ಬಸ 11.ವದನ
12.ಮಂದಿರ 13.ಆಡು

ಸುಡೊಕು 5352

					1		2	6
8		7		3				9
		5			9		8	
	6			4		3		8
	7	4	1	8	3			
3						5		1
	8		3		4			5
		1		9		8		4
4			5			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5351 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

ಇಎಲ್‌ಎಸ್‌ಎಸ್ ಫಂಡ್ ಆಯ್ಕೆ ಹೇಗೆ?



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಆದಾಯ ತೆರಿಗೆ ಉಳಿಸಲು ಹಣಕಾಸು ವರ್ಷದ ಕೊನೆಯಲ್ಲಿ ತರಾತುರಿಯಲ್ಲಿ ಯಾವುದಾದರೊಂದು ಇಎಲ್‌ಎಸ್‌ಎಸ್ (ಈಕ್ವಿಟಿ ಲಿಂಕ್ಡ್ ಸೇವಿಂಗ್ಸ್ ಸ್ಕೀಂ) ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಬೇಕು ಎನ್ನುವ ಆಲೋಚನೆ ಅನೇಕರಲ್ಲಿ ಬರುವುದಿದೆ. ಆದರೆ ಹಣಕಾಸು ವರ್ಷದ ಆರಂಭದಲ್ಲೇ ಸರಿಯಾದ ಇಎಲ್‌ಎಸ್‌ಎಸ್ ಮ್ಯೂಚುಚಲ್ ಫಂಡ್ ಆಯ್ಕೆ ಮಾಡಿಕೊಂಡರೆ ಹೆಚ್ಚು ಲಾಭ ಗಳಿಸಲು ಸಾಧ್ಯ.

ಇಎಲ್‌ಎಸ್‌ಎಸ್ ಮ್ಯೂಚುವಲ್ ಫಂಡ್ ಅಂದರೆ ಏನು, ಇದರಲ್ಲಿ ಸಿಗುವ ಲಾಭವೇನು, ಒಳ್ಳೆಯ ಇಎಲ್‌ಎಸ್‌ಎಸ್ ಆಯ್ಕೆಗೆ ಮಾನದಂಡಗಳೇನು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಯತ್ನ ನಡೆಸೋಣ.

ಏನಿದು ಇಎಲ್‌ಎಸ್‌ಎಸ್?: ಇಎಲ್‌ಎಸ್‌ಎಸ್ ಮ್ಯೂಚುವಲ್ ಫಂಡ್ ಒಂದು ವೈವಿಧ್ಯಮಯ ಹೂಡಿಕೆ ಸಾಧನ. ಈ ಮ್ಯೂಚುವಲ್ ಫಂಡ್ ಯೋಜನೆಯು ಷೇರು ಮಾರುಕಟ್ಟೆಯಲ್ಲಿರುವ ದೊಡ್ಡ ಪ್ರಮಾಣದ (ಲಾರ್ಜ್ ಕ್ಯಾಪ್) ಕಂಪನಿಗಳು, ಮಧ್ಯಮ ಗಾತ್ರದ (ಮಿಡ್ ಕ್ಯಾಪ್) ಕಂಪನಿಗಳು, ಸಣ್ಣ ಪ್ರಮಾಣದ (ಸ್ಮಾಲ್ ಕ್ಯಾಪ್) ಕಂಪನಿಗಳು ಹೀಗೆ ಎಲ್ಲಿ ಹೆಚ್ಚು ಲಾಭದ ಸಾಧ್ಯತೆ ಇದೆಯೋ ಅಲ್ಲಿ ಹೂಡಿಕೆ ಮಾಡುತ್ತದೆ. ವಿಶೇಷ ಏನೆಂದರೆ ಈ ಫಂಡ್‌ನಲ್ಲಿ ₹ 1.5 ಲಕ್ಷದ ವರೆಗೆ ಹೂಡಿಕೆ ಮಾಡಿ ಆದಾಯ ತೆರಿಗೆಯ ಸೆಕ್ಷನ್ 80ಸಿ ಅಡಿಯಲ್ಲಿ ವಿನಾಯಿತಿ ಪಡೆಯಬಹುದು.

ಆದರೆ ಈ ಮ್ಯೂಚುವಲ್ ಫಂಡ್‌ನಲ್ಲಿ ಮೂರು ವರ್ಷಗಳ ಲಾಕಿನ್ ಅವಧಿ ಇರುತ್ತದೆ. ಅಂದರೆ ಹೂಡಿಕೆ ಮಾಡಿದ ಹಣವನ್ನು ಹೂಡಿಕೆ ಮಾಡಿದ ದಿನದಿಂದ ಮೂರು ವರ್ಷಗಳವರೆಗೆ ಹಿಂಪಡೆಯಲು (Withdrawal) ಸಾಧ್ಯವಿಲ್ಲ.

ಇಎಲ್‌ಎಸ್‌ಎಸ್ ಏಕೆ?: ಇಲ್ಲಿ ಏಕೆ ಹೂಡಿಕೆ ಮಾಡಬೇಕು ಎಂಬ ಪ್ರಶ್ನೆಗೆ ಹಲವು ಉತ್ತರಗಳಿವೆ.

1. ಶೇಕಡ 30ರ ಆದಾಯ ತೆರಿಗೆ ಮಿತಿಯಲ್ಲಿದ್ದು ಇಎಲ್‌ಎಸ್‌ಎಸ್ ಮ್ಯೂಚುವಲ್ ಫಂಡ್‌ನಲ್ಲಿ ₹ 1.5 ಲಕ್ಷದವರೆಗೆ ಹೂಡಿಕೆ ಮಾಡಿದರೆ ನಿಮಗೆ ₹ 46,800 ತೆರಿಗೆ ಉಳಿತಾಯವಾಗುತ್ತದೆ.

2. ದೊಡ್ಡ ಮೊತ್ತ ಇರುವವರು ಮಾತ್ರವೇ ಇದರಲ್ಲಿ ಹೂಡಿಕೆ ಮಾಡಬೇಕೆಂದಿಲ್ಲ. ₹ 500ರಿಂದಲೂ ಹೂಡಿಕೆ ಆರಂಭಿಸಲು ಸಾಧ್ಯ.

3. ಇಎಲ್‌ಎಸ್‌ಎಸ್‌ನಲ್ಲಿ ಐದು ವರ್ಷಗಳ ತೆರಿಗೆ ಉಳಿತಾಯದ ನಿಶ್ಚಿತ ಠೇವಣಿ (ಎಫ್.ಡಿ.), ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಮತ್ತು ರಾಷ್ಟ್ರೀಯ ಉಳಿತಾಯ ಪತ್ರಕ್ಕಿಂತ (ಎನ್‌ಎಸ್‌ಸಿ) ಹೆಚ್ಚು ಲಾಭಾಂಶ ಗಳಿಸಲು ಅವಕಾಶವಿದೆ.

4. ಪಿಪಿಎಫ್ ಹೂಡಿಕೆಗೆ 15 ವರ್ಷಗಳ ಲಾಕಿನ್ ಅವಧಿ ಇದೆ. ತೆರಿಗೆ ಉಳಿತಾಯದ ನಿಶ್ಚಿತ ಠೇವಣಿಯ ಲಾಕಿನ್ ಅವಧಿ ಐದು ವರ್ಷ. ಆದರೆ ಇಎಲ್‌ಎಸ್‌ಎಸ್ ಲಾಕಿನ್ ಅವಧಿ ಮೂರು ವರ್ಷ ಮಾತ್ರ.

ಉತ್ತಮ ಇಎಲ್‌ಎಸ್‌ಎಸ್ ಆಯ್ಕೆ:

1. ನಿರ್ದಿಷ್ಟ ಇಎಲ್‌ಎಸ್‌ಎಸ್ ಮ್ಯೂಚುವಲ್ ಫಂಡ್ ಐತಿಹಾಸಿಕವಾಗಿ ಎಷ್ಟು ಲಾಭಾಂಶ ನೀಡಿದೆ ಎಂಬುದನ್ನು ಗಮನಿಸಬೇಕು.

2. ನಿರ್ದಿಷ್ಟ ಫಂಡ್ ಅಡಿಯಲ್ಲಿ ಎಷ್ಟು ದೊಡ್ಡ ಮೊತ್ತದ ಹಣ ಹೂಡಿಕೆಯಾಗಿದೆ ಎನ್ನುವುದನ್ನು ಗಮನಿಸಬೇಕು. ಹೆಚ್ಚುಮಂದಿ ಆ ಫಂಡ್‌ನಲ್ಲಿ ಹೂಡಿಕೆ ಮಾಡಿದ್ದಾರೆ ಎಂದಾದರೆ ಅದು ಉತ್ತಮವಾಗಿದೆ ಎಂದು ಅಂದಾಜಿಸಿಕೊಳ್ಳಬಹುದು.

3. ನಿರ್ದಿಷ್ಟ ಇಎಲ್‌ಎಸ್‌ಎಸ್ ಮ್ಯೂಚುವಲ್ ಫಂಡ್‌ನ ನಿರ್ವಹಣಾ ಶುಲ್ಕ (ಎಕ್ಸ್‌ಪೆನ್ಸ್ ರೇಷಿಯೊ) ಎಷ್ಟಿದೆ ಎನ್ನುವುದನ್ನು ಅರಿಯಬೇಕು. ಕಡಿಮೆ ಶುಲ್ಕ ವಿಧಿಸುವ ಉತ್ತಮ ಇಎಲ್‌ಎಸ್‌ಎಸ್ ಮ್ಯೂಚುವಲ್ ಫಂಡ್ ಆಯ್ಕೆಗೆ ಸೂಕ್ತ.

4. ನಿರ್ದಿಷ್ಟ ಮ್ಯೂಚುವಲ್ ಫಂಡ್ ಯಾವ ಕಂಪನಿಗಳಲ್ಲಿ ಹೂಡಿಕೆ ಮಾಡಿದೆ ಎನ್ನುವುದನ್ನು ನೋಡಿಕೊಳ್ಳಬೇಕು.

ಯಾವ ಫಂಡ್ ಉತ್ತಮ ಹುಡುಕೋದು ಎಲ್ಲಿ: ವೈಯಕ್ತಿಕ ಹಣಕಾಸಿಗೆ ಸಂಬಂಧಿಸಿದ ಮಾಹಿತಿ ನೀಡುವ ವೆಬ್‌ಸೈಟ್‌ಗಳ ಮೂಲಕ ನೀವು ಉತ್ತಮ ಇಎಲ್‌ಎಸ್‌ಎಸ್ ಫಂಡ್ ಸುಲಭವಾಗಿ ಹುಡುಕಬಹುದು.

ಗೂಗಲ್ ಸರ್ಚ್ ಮೂಲಕ ಇಂತಹ ವೆಬ್‌ಸೈಟ್‌ಗೆ ಭೇಟಿ ನೀಡಿ, ಅಲ್ಲಿ ಲಾಗಿನ್ ಆಗಿರಿ. ಇಂತಹ ಬಹುತೇಕ ವೆಬ್‌ಸೈಟ್‌ಗಳಲ್ಲಿ ಮ್ಯೂಚುವಲ್ ಫಂಡ್‌ಗಳ ಪ್ರತ್ಯೇಕ ವಿಭಾಗವೊಂದು ಇರುತ್ತದೆ. ಅಲ್ಲಿ ಇಎಲ್‌ಎಸ್‌ಎಸ್ ಆಯ್ಕೆ ಮಾಡಿದರೆ, ದೊಡ್ಡ ಪಟ್ಟಿ ಬರುತ್ತದೆ. ಜನಪ್ರಿಯ ವೆಬ್‌ಸೈಟ್‌ಗಳು ಇಂತಹ ಫಂಡ್‌ಗಳಿಗೆ ವಿವಿಧ ಸಂಸ್ಥೆಗಳ ರೇಟಿಂಗ್ ವಿವರ ನೀಡಿರುತ್ತವೆ. ಅದರಲ್ಲಿ ನೀವು ಫೈವ್ ಸ್ಟಾರ್ ರೇಟಿಂಗ್ ಇರುವ ಫಂಡ್‌ಗಳನ್ನು ಆಯ್ಕೆಗೆ ಪರಿಗಣಿಸಬಹುದು.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಗಳಿಕೆ ಕಂಡ ಸೂಚ್ಯಂಕಗಳು



ಸತತ ಐದು ವಾರಗಳಿಂದ ಕುಸಿತದ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಅನಿಶ್ಚಿತತೆಯ ನಡುವೆಯೂ ಗಳಿಕೆ ದಾಖಲಿಸಿವೆ. ಮೇ 20ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಉತ್ತಮ ಗಳಿಕೆ ಕಂಡಿವೆ. 54,326 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 2.90ರಷ್ಟು ಹೆಚ್ಚಳ ಕಂಡಿದೆ. 16,266 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ–50 ಶೇ 3.06ರಷ್ಟು ಜಿಗಿದಿದೆ. ಬ್ಯಾಂಕ್ ಆಫ್ ಚೀನಾ 5 ವರ್ಷಗಳ ಸಾಲದ ಮೇಲಿನ ಬಡ್ಡಿ ದರವನ್ನು 15 ಮೂಲಾಂಶಗಳಷ್ಟು ಕಡಿತಗೊಳಿಸಿದ ಬಳಿಕ ವಾರಾಂತ್ಯದಲ್ಲಿ ಏಷ್ಯಾ ಮಾರುಕಟ್ಟೆಗಳಲ್ಲಿ ಸಕಾರಾತ್ಮಕತೆ ಕಂಡುಬಂತು.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಲೋಹ ವಲಯ ಶೇ 7.3ರಷ್ಟು ಜಿಗಿದಿದೆ. ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕ ಶೇ 5.3ರಷ್ಟು ಹೆಚ್ಚಳ ಕಂಡಿದೆ. ಎಫ್‌ಎಂಸಿಜಿ, ಆಟೊ, ರಿಯಲ್ ಎಸ್ಟೇಟ್ ಸೂಚ್ಯಂಕಗಳು ಶೇ 4-5ರಷ್ಟು ಸುಧಾರಿಸಿವೆ. ಆದರೆ ಐ.ಟಿ. ಸೂಚ್ಯಂಕ ಶೇ 2ರಷ್ಟು ಕುಸಿದಿದೆ.

ಏರಿಕೆ–ಇಳಿಕೆ: ಈ ವಾರ ಐಷರ್ ಶೇ 11.3ರಷ್ಟು, ಹಿಂಡಾಲ್ಕೊ ಶೇ 10.59ರಷ್ಟು, ಕೋಲ್ ಇಂಡಿಯಾ ಶೇ 10.23ರಷ್ಟು, ಎಚ್‌ಎಎಲ್ ಶೇ 16.38ರಷ್ಟು, ಬಿಎಚ್‌ಇಎಲ್ ಶೇ 14.69ರಷ್ಟು, ಗ್ರ್ಯಾನ್ಯುಯೆಲ್ಸ್ ಇಂಡಿಯಾ ಶೇ 13.43ರಷ್ಟು, ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಶೇ 11.82ರಷ್ಟು, ಬಾಲಕೃಷ್ಣ ಇಂಡಸ್ಟ್ರೀಸ್ ಶೇ 11.92ರಷ್ಟು ಜಿಗಿದಿವೆ. ಡಾ. ಲಾಲ್ ಪತ್ ಲ್ಯಾಬ್ಸ್ ಶೇ 14.09ರಷ್ಟು, ಮೆಟ್ರೊಪಾಲಿಸ್ ಹೆಲ್ತ್ ಶೇ 13.59ರಷ್ಟು, ಲುಪಿನ್ ಶೇ 8.32ರಷ್ಟು, ಹನಿವೆಲ್ ಶೇ 8.33ರಷ್ಟು, ಮಣಪ್ಪುರಂ ಫೈನಾನ್ಸ್ ಶೇ 5.65ರಷ್ಟು ಕುಸಿದಿವೆ.

ಮುನ್ನೋಟ: ಷೇರುಪೇಟೆಯಲ್ಲಿ ಅನಿಶ್ಚಿತೆಯ ಓಟ ಇನ್ನೂ ಕೆಲವು ವಾರ ಮುಂದುವರಿಯುವ ಸಾಧ್ಯತೆ ಇದೆ. ಜಾಗತಿಕವಾಗಿ ಪ್ರಮುಖ ದೇಶಗಳು ಬೆಲೆ ಏರಿಕೆ, ಬ್ಯಾಂಕ್ ಬಡ್ಡಿ ದರ ಹೆಚ್ಚಳ, ಭವಿಷ್ಯದ ಬೆಳವಣಿಗೆ ಮುನ್ನೋಟದ ಬಗ್ಗೆ ಅಸ್ಪಷ್ಟತೆ ಸೇರಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಸದ್ಯದ ಸ್ಥಿತಿಯಲ್ಲಿ ತ್ವರಿತ ಮತ್ತು ಹರಿತವಾದ ಏರಿಳಿತಗಳನ್ನು ನಿರೀಕ್ಷಿಸಬಹುದು.

ಎಕ್ಸೈಸ್ ಸುಂಕ ಇಳಿಕೆ ಕುರಿತು ಸ್ಪಷ್ಟನೆ

ರಾಜ್ಯಗಳ ತೆರಿಗೆ ಪಾಲು ಇಳಿಕೆ ಇಲ್ಲ: ನಿರ್ಮಲಾ

ನವದೆಹಲಿ (ಪಿಟಿಐ): ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ತಗ್ಗಿಸಿರುವುದರಿಂದ ಕೇಂದ್ರದ ತೆರಿಗೆಯಿಂದ ರಾಜ್ಯಗಳಿಗೆ ಸಿಗುವ ಮೊತ್ತ ಇಳಿಕೆಯಾಗುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟಪಡಿಸಿದ್ದಾರೆ.

ರಸ್ತೆ ಮತ್ತು ಮೂಲಸೌಕರ್ಯ ಸೆಸ್‌ನ ಪಾಲಿನಲ್ಲಿ ಈ ಕಡಿತವನ್ನು ಮಾಡಲಾಗಿದೆ. ಈ ಸೆಸ್ ಅಡಿಯಲ್ಲಿ ಸಂಗ್ರಹಿಸಲಾಗುವ ಮೊತ್ತವನ್ನು ಯಾವತ್ತಿಗೂ ರಾಜ್ಯಗಳ ಜೊತೆ ಹಂಚಿಕೊಳ್ಳುತ್ತಿರಲಿಲ್ಲ ಎಂದು ಅವರು ಹೇಳಿದ್ದಾರೆ. ಕೇಂದ್ರವು ಎಕ್ಸೈಸ್ ಸುಂಕ ಕಡಿಮೆ ಮಾಡಿರುವುದರ ಪರಿಣಾಮವಾಗಿ ಕೇಂದ್ರದ ತೆರಿಗೆಯಲ್ಲಿ ರಾಜ್ಯಗಳಿಗೆ ಸಿಗುವ ಪಾಲು ಇಳಿಕೆಯಾಗಲಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು.

‘ಮೂಲ ಎಕ್ಸೈಸ್ ಸುಂಕ (ಬಿಇಡಿ), ವಿಶೇಷ ಹೆಚ್ಚುವರಿ ಎಕ್ಸೈಸ್ ಸುಂಕ (ಎಸ್‌ಎಇಡಿ), ರಸ್ತೆ ಮತ್ತು ಮೂಲಸೌಕರ್ಯ ಸೆಸ್ (ಆರ್‌ಐಸಿ) ಹಾಗೂ ಕೃಷಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸೆಸ್ (ಎಐಡಿಸಿ) ಒಗ್ಗೂಡಿಸಿದಾಗ ಸಿಗುವ ಮೊತ್ತವೇ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ. ಬಿಇಡಿಯನ್ನು ರಾಜ್ಯಗಳ ಜೊತೆ ಹಂಚಿಕೊಳ್ಳಲಾಗುತ್ತದೆ. ಆದರೆ, ಎಸ್‌ಎಇಡಿ, ಆರ್‌ಐಸಿ ಮತ್ತು ಎಐಡಿಸಿಯನ್ನು ಹಂಚಿಕೊಳ್ಳುವುದಿಲ್ಲ’ ಎಂದು ನಿರ್ಮಲಾ ಅವರು ವಿವರಿಸಿದ್ದಾರೆ.

ಅಭಿವೃದ್ಧಿಗೆ ₹ 90 ಲಕ್ಷ ಕೋಟಿ ವೆಚ್ಚ

2014ರಿಂದ 2022ರವರೆಗಿನ ಅವಧಿಯಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಅಭಿವೃದ್ಧಿ ಯೋಜನೆಗಳಿಗೆ ಮಾಡಿದ ವೆಚ್ಚವು ₹ 90.9 ಲಕ್ಷ ಕೋಟಿ ಎಂದು ನಿರ್ಮಲಾ ಅವರು ಆರ್‌ಬಿಐ ಅಂಕಿ–ಅಂಶ ಆಧರಿಸಿ ಹೇಳಿದ್ದಾರೆ.

‘ಆದರೆ, 2004ರಿಂದ 2014ರವರೆಗಿನ ಅವಧಿಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಕೇವಲ ₹ 49.2 ಲಕ್ಷ ಕೋಟಿ ವೆಚ್ಚ ಮಾಡಲಾಗಿತ್ತು. ನಮ್ಮ ಸರ್ಕಾರದ ಅವಧಿಯಲ್ಲಿ ಇದುವರೆಗೆ ಆಹಾರ, ಇಂಧನ ಹಾಗೂ ರಸಗೊಬ್ಬರ ಮೇಲಿನ ಸಬ್ಸಿಡಿಗಾಗಿ ₹ 24.85 ಲಕ್ಷ ಕೋಟಿ ಖರ್ಚು ಮಾಡಲಾಗಿದೆ. ಬಂಡವಾಳ ಸೃಷ್ಟಿಗೆ ₹ 26.3 ಲಕ್ಷ ಕೋಟಿ ವೆಚ್ಚ ಮಾಡಲಾಗಿದೆ. ಯುಪಿಎ ಆಡಳಿತದ ಹತ್ತು ವರ್ಷಗಳಲ್ಲಿ ಸಬ್ಸಿಡಿಗಳಿಗಾಗಿ ₹ 13.9 ಲಕ್ಷ ಕೋಟಿ ಮಾತ್ರ ವಿನಿಯೋಗಿಸಲಾಗಿದೆ’ ಎಂದು ನಿರ್ಮಲಾ ಅವರು ಮಾಹಿತಿ ನೀಡಿದ್ದಾರೆ.

ಮುಖ್ಯಾಂಶಗಳು

- ರಸ್ತೆ, ಮೂಲಸೌಕರ್ಯ ಸೆಸ್‌ನಲ್ಲಿ ಕಡಿತ
- ವಿರೋಧ ಪಕ್ಷಗಳ ಆರೋಪಕ್ಕೆ ನಿರ್ಮಲಾ ಸ್ಪಷ್ಟನೆ

2021ರ ನವೆಂಬರ್‌ನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಇಳಿಕೆ ಮಾಡಿದಾಗ ಕೂಡ, ಆರ್‌ಐಸಿ ಸೆಸ್ ತಗ್ಗಿಸಲಾಗಿತ್ತು. ಆಗಲೂ ರಾಜ್ಯಗಳಿಗೆ ಸಿಗುವ ಪಾಲು ಇಳಿಕೆ ಆಗಿರಲಿಲ್ಲ ಎಂದು ಅವರು ಹೇಳಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವಿನ ತೆರಿಗೆ ಹಂಚಿಕೆ ಸೂತ್ರ ಅನ್ವಯ, ಕೇಂದ್ರ ಸಂಗ್ರಹಿಸುವ ತೆರಿಗೆಯಲ್ಲಿ ಶೇಕಡ 41ರಷ್ಟು ಪಾಲು ರಾಜ್ಯಗಳಿಗೆ ಸಂದಾಯವಾಗುತ್ತದೆ. ಆದರೆ, ಸೆಸ್ ಮೂಲಕ ಸಂಗ್ರಹವಾಗುವ ಮೊತ್ತವು ರಾಜ್ಯಗಳಿಗೆ ಹೋಗುವುದಿಲ್ಲ. ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ತೆರಿಗೆಯಲ್ಲಿ ಹೆಚ್ಚಿನ ಪಾಲು ಇರುವುದು ಸೆಸ್‌ನದ್ದು.


‘ಕೇಂದ್ರವು ಎಕ್ಸೈಸ್ ಸುಂಕವನ್ನು ₹ 1ರಷ್ಟು ಇಳಿಸಿದಾಗ, ರಾಜ್ಯಗಳಿಗೆ ಸಂದಾಯವಾಗುವ 41 ಪೈಸೆ ಕಡಿತವಾದಂತಾಗುತ್ತದೆ’ ಎಂದು ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಶನಿವಾರ ಹೇಳಿದ್ದರು. ನಂತರ ಅವರು ತಮ್ಮ ಹೇಳಿಕೆಯನ್ನು ಹಿಂಪಡೆದು, ‘ಸುಂಕ ಇಳಿಕೆಯ ಪೂರ್ತಿ ಹೊರೆಯು ಕೇಂದ್ರದ ಮೇಲೆಯೇ ಇದೆ’ ಎಂದು ಹೇಳಿದ್ದರು.



ಶೋಧ ಕಾರ್ಯ.... ಬಿಹಾರದ ಪಟ್ನಾದಲ್ಲಿನ ಪಹಲ್‌ವಾನ್ ಘಾಟ್ ಬಳಿ ಗಂಗಾ ನದಿಯಲ್ಲಿ ಸ್ನಾನ ಮಾಡುವಾಗ ಆರು ಯುವಕರು ಮುಳುಗಿದ್ದು, ಎಸ್‌ಡಿಆರ್‌ಎಫ್ ಸಿಬ್ಬಂದಿ ಭಾನುವಾರ ಶೋಧ ಕಾರ್ಯ ನಡೆಸಿದರು –ಪಿಟಿಐ ಚಿತ್ರ

ಕೇಂದ್ರದ ವಿರುದ್ಧ ತಮಿಳುನಾಡು ಹಣಕಾಸು ಸಚಿವ ತ್ಯಾಗರಾಜನ್ ಹೇಳಿಕೆ

ರಾಜ್ಯಗಳಿಂದ ದರ ಕಡಿತ ನಿರೀಕ್ಷೆ ಸರಿಯಲ್ಲ



ಚೆನ್ನೈ (ಪಿಟಿಐ): ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಯನ್ನು ಕೇಂದ್ರವು ಭಾಗಶಃ ಕಡಿಮೆ ಮಾಡಿದೆ ಎಂದು ತಮಿಳುನಾಡು ಸರ್ಕಾರ ಭಾನುವಾರ ಹೇಳಿದೆ. ರಾಜ್ಯಗಳು ಸಹ ತೆರಿಗೆ ಕಡಿಮೆ ಮಾಡಬೇಕೆಂದು ನಿರೀಕ್ಷಿಸುವುದು ಸಮಂಜಸವಲ್ಲ ಎಂದೂ ಹೇಳಿದೆ.

ತಮಿಳುನಾಡು ಹಣಕಾಸು ಸಚಿವ ಪಳನಿವೇಲ್ ತ್ಯಾಗರಾಜನ್ ಅವರು, ‘ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಗಳನ್ನು ಹೆಚ್ಚಿಸಿದಾಗ ಕೇಂದ್ರ ಸರ್ಕಾರವು ಎಂದಿಗೂ ರಾಜ್ಯಗಳೊಂದಿಗೆ ಸಮಾಲೋಚಿಸಲಿಲ್ಲ. ಈ ಹಿಂದೆ 2021ರ ನವೆಂಬರ್‌ನಲ್ಲಿ ಕೇಂದ್ರ ಸರ್ಕಾರವು ಘೋಷಿಸಿದ ತೆರಿಗೆ ಕಡಿತದಿಂದಾಗಿ ಈಗಾಗಲೇ ₹1,000 ಕೋಟಿ ನಷ್ಟವನ್ನು ಅನುಭವಿಸಲಾಗಿದೆ. ಶನಿವಾರ ಘೋಷಿಸಿದ ತೆರಿಗೆ ಕಡಿತದ ಹೊರತಾಗಿಯೂ, 2014 ಕ್ಕೆ ಹೋಲಿಸಿದರೆ ದರಗಳು ಇನ್ನೂ ಹೆಚ್ಚಿವೆ’ ಎಂದು ಹೇಳಿದ್ದಾರೆ.

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಹಲವು ಬಾರಿ ಹೆಚ್ಚಿಸಿದಾಗ ಕೇಂದ್ರ ಸರ್ಕಾರ ರಾಜ್ಯಗಳೊಂದಿಗೆ ಸಮಾಲೋಚಿಸಲಿಲ್ಲ. ಕೇಂದ್ರವು ತೆರಿಗೆಗಳಲ್ಲಿ ವಿಪರೀತ ಹೆಚ್ಚಳ ಮಾಡಿದ್ದು, ಈಗ ಕಡಿತದ ಮೂಲಕ ಭಾಗಶಃ ಕಡಿಮೆಯಾಗಿದೆ ಎಂದು ಹೇಳಿದ್ದಾರೆ.

ರಾಜ್ಯಗಳು ತೆರಿಗೆ ಕಡಿಮೆ ಮಾಡಬೇಕೆಂದು ನಿರೀಕ್ಷಿಸುವುದು ನ್ಯಾಯವಲ್ಲ, ಸಮಂಜಸವೂ ಅಲ್ಲ ಎಂದು ಪ್ರತಿಪಾದಿಸಿರುವ ಅವರು, ‘ಕೇಂದ್ರವು ತೆರಿಗೆಯನ್ನು ಕಡಿಮೆ ಮಾಡುವುದಕ್ಕೂ ಮೊದಲೇ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ನೇತೃತ್ವದ ಡಿಎಂಕೆ ಸರ್ಕಾರವು 2021ರ ಆಗಸ್ಟ್‌ನಲ್ಲಿ ಪೆಟ್ರೋಲ್ ದರವನ್ನು ಪ್ರತಿ ಲೀಟರ್‌ಗೆ ₹3 ಕಡಿತಗೊಳಿಸಿದೆ’ ಎಂದಿದ್ದಾರೆ.

ಮಹಾರಾಷ್ಟ್ರ, ಒಡಿಶಾ, ರಾಜಸ್ಥಾನದಿಂದ ತೆರಿಗೆ ಕಡಿತ

ಮುಂಬೈ/ಜೈಪುರ (ಪಿಟಿಐ): ಕೇಂದ್ರ ಸರ್ಕಾರ ಶನಿವಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕಡಿತಗೊಳಿಸಿದ ಬೆನ್ನಲ್ಲೇ ರಾಜಸ್ಥಾನ, ಒಡಿಶಾ ಮತ್ತು ಮಹಾರಾಷ್ಟ್ರ ಸರ್ಕಾರಗಳೂ ರಾಜ್ಯ ತೆರಿಗೆ ಮತ್ತು ವ್ಯಾಟ್ ತಗ್ಗಿಸಿವೆ.

ಈ ಬಗ್ಗೆ ಟ್ವೀಟ್ ಮಾಡಿರುವ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ‘ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಕಡಿತಗೊಳಿಸಿರುವುದರಿಂದ, ರಾಜ್ಯ ಸರ್ಕಾರವು ಪೆಟ್ರೋಲ್ ಮೇಲೆ ಲೀಟರ್‌ಗೆ ₹2.48 ಮತ್ತು ಡೀಸೆಲ್‌ಗೆ ₹1.16ರಷ್ಟು ವ್ಯಾಟ್ ಕಡಿತಗೊಳಿಸಿದೆ. ಇದರೊಂದಿಗೆ ರಾಜ್ಯದಲ್ಲಿ ಪೆಟ್ರೋಲ್ ₹10.48 ಮತ್ತು ಡೀಸೆಲ್ ಪ್ರತಿ ಲೀಟರ್‌ಗೆ ₹7.16 ಅಗ್ಗವಾಗಲಿದೆ’ ಎಂದು ತಿಳಿಸಿದರು.

ಮಹಾರಾಷ್ಟ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ವ್ಯಾಟ್ ಅನ್ನು ಭಾನುವಾರ ಕಡಿಮೆ ಮಾಡಿದೆ. ಪ್ರತಿ ಲೀಟರ್‌ಗೆ ಪೆಟ್ರೋಲ್‌ಗೆ ₹ 2.08 ಮತ್ತು ಡೀಸೆಲ್‌ಗೆ ₹ 1.44 ಕಡಿತ ಮಾಡಿದೆ.

ಒಡಿಶಾ ಸರ್ಕಾರವು ಪೆಟ್ರೋಲ್ ಮೇಲಿನ ವ್ಯಾಟ್ ಅನ್ನು ಲೀಟರಿಗೆ ₹ 2.23 ಮತ್ತು ಡೀಸೆಲ್ ಮೇಲಿನ ವ್ಯಾಟ್ ಅನ್ನು ಲೀಟರಿಗೆ ₹ 1.36 ಇಳಿಕೆ ಮಾಡಿದೆ.

‘ಜಿಎಸ್‌ಟಿಆರ್–3ಬಿ’ಯಲ್ಲಿ ಬದಲಾವಣೆ ಸಾಧ್ಯತೆ



ನವದೆಹಲಿ (ಪಿಟಿಐ): ಐಟಿಸಿ ವಂಚನೆ ತಡೆಯಲು ಮತ್ತು ಪ್ರಾಮಾಣಿಕರಿಗೆ ಐಟಿಸಿ ಸಿಗುವಂತೆ ಮಾಡುವ ಉದ್ದೇಶದಿಂದ ಜಿಎಸ್‌ಟಿ ಮಂಡಳಿಯು ಜಿಎಸ್‌ಟಿಆರ್–3ಬಿ ಅರ್ಜಿ ನಮೂನೆಯಲ್ಲಿ ಕೆಲವೊಂದಿಷ್ಟು ಬದಲಾವಣೆಗಳನ್ನು ತರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ತೆರಿಗೆದಾರರಿಗೆ ಬರಬೇಕಿರುವ ಐಟಿಸಿಯ ಸರಾಸರಿ ಮೊತ್ತ, ನಿರ್ದಿಷ್ಟ ತಿಂಗಳಿನಲ್ಲಿ ಕ್ಲೇಮ್ ಮಾಡಿರುವ ಮೊತ್ತ ಮತ್ತು ತೆರಿಗೆದಾರರ ಲೆಡ್ಜರ್‌ನಲ್ಲಿ ಉಳಿದಿರುವ ನಿವ್ವಳ ಮೊತ್ತದ ಬಗ್ಗೆ ವಿವರಗಳು ಪರಿಷ್ಕೃತ ಅರ್ಜಿ ನಮೂನೆಯಲ್ಲಿ ಇರಲಿವೆ.

ಜಿಎಸ್‌ಟಿ ಮಂಡಳಿಯ ಮುಂದಿನ ತಿಂಗಳು ಸಭೆ ಸೇರುವ ಸಾಧ್ಯತೆ ಇದೆ. ತಿಂಗಳ ತೆರಿಗೆ ಪಾವತಿಯ ಅರ್ಜಿ ನಮೂನೆ ಜಿಎಸ್‌ಟಿಆರ್–3ಬಿಯಲ್ಲಿ ಬದಲಾವಣೆ ಮಾಡುವುದರಿಂದ ಅನರ್ಹ ಐಟಿಸಿ ಸಲ್ಲಿಸುವವರನ್ನು ಪತ್ತೆ ಮಾಡಲು ನೆರವಾಗಲಿದೆ ಎಂದು ಎಎಂಆರ್‌ಜಿ ಆ್ಯಂಡ್ ಅಸೋಸಿಯೇಟ್ಸ್‌ನ ಹಿರಿಯ ಪಾಲುದಾರ ರಜತ್ ಮೋಹನ್ ಹೇಳಿದ್ದಾರೆ.

ಇನ್ಫೊಸಿಸ್ ಸಿಇಒ ಆಗಿ ಸಲೀಲ್ ಪಾರೇಖ್ ಮರು ನೇಮಕ



ಪಾರೇಖ್

ನವದೆಹಲಿ (ಪಿಟಿಐ): ಸಲೀಲ್ ಪಾರೇಖ್ ಅವರನ್ನು ಸಿಇಒ ಆಗಿ ಇನ್ನೂ ಐದು ವರ್ಷಗಳ ಅವಧಿಗೆ ಮರು ನೇಮಕ ಮಾಡಲು ಇನ್ಫೊಸಿಸ್ ಆಡಳಿತ ಮಂಡಳಿ ಒಪ್ಪಿಗೆ ನೀಡಿದೆ.

ಶನಿವಾರ ನಡೆದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ. ಸಲೀಲ್ ಅವರ ಅಧಿಕಾರ ಅವಧಿಯು ಈ ವರ್ಷದ ಜುಲೈ 1ರಿಂದ 2027ರ ಮಾರ್ಚ್ 31ರವರೆಗೆ ಇರಲಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಈ ನೇಮಕಕ್ಕೆ ಷೇರುದಾರರ ಒಪ್ಪಿಗೆ ದೊರೆಯಬೇಕಿದೆ.

ಹೆಚ್ಚುವರಿ ₹ 2 ಲಕ್ಷ ಕೋಟಿ ವೆಚ್ಚ?

ನವದೆಹಲಿ (ರಾಯಿಟರ್ಸ್): ಹಣದುಬ್ಬರ ನಿಯಂತ್ರಿಸಲು ಕೇಂದ್ರ ಸರ್ಕಾರವು 2022–23ರಲ್ಲಿ ಹೆಚ್ಚುವರಿಯಾಗಿ ₹ 2 ಲಕ್ಷ ಕೋಟಿ ಬಂಡವಾಳ ವೆಚ್ಚ ಮಾಡಲಿದೆ ಎಂದು ಸರ್ಕಾರದ ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

ಎಕ್ಸೈಸ್ ಸುಂಕ ಕಡಿತದಿಂದಾಗಿ ಸರ್ಕಾರದ ವರಮಾನದಲ್ಲಿ ₹ 1 ಲಕ್ಷ ಕೋಟಿ ನಷ್ಟ ಆಗಲಿದೆ ಎಂದು ತಿಳಿಸಿದ್ದಾರೆ. ಭಾರತದ ಚಿಲ್ಲರೆ ಹಣದುಬ್ಬರವು ಏಪ್ರಿಲ್‌ನಲ್ಲಿ ಎಂಟು ವರ್ಷಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ. ಸಗಟು ಹಣದುಬ್ಬರ ಕೂಡ ದಾಖಲೆಯ ಮಟ್ಟ ತಲುಪಿದೆ.

ಹಣದುಬ್ಬರ ಕಡಿಮೆ ಮಾಡುವುದರತ್ತ ಹೆಚ್ಚಿನ ಗಮನ ಹರಿಸಲಾಗಿದೆ. ರಷ್ಯಾ–ಉಕ್ರೇನ್ ಬಿಕ್ಕಟ್ಟು ನಿರೀಕ್ಷೆಗಿಂತಲೂ ಹೆಚ್ಚಿನ ಹಾನಿ ಉಂಟು ಮಾಡಿದೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಸಗೊಬ್ಬರ ಸಬ್ಸಿಡಿಗೆ ಇನ್ನೂ ₹ 50 ಸಾವಿರ ಕೋಟಿ ಹೆಚ್ಚುವರಿ ಹಣದ ಅಗತ್ಯ ಇದೆ ಎಂದು ತಿಳಿಸಿದ್ದಾರೆ.

ಒಂದೊಮ್ಮೆ ಕಚ್ಚಾ ತೈಲ ದರ ಏರಿಕೆ ಮುಂದುವರಿದಲ್ಲಿ ಕೇಂದ್ರ ಸರ್ಕಾರವು ಇನ್ನೊಂದು ಸುತ್ತಿನಲ್ಲಿ ತೆರಿಗೆ ಕಡಿತ ಮಾಡಬಹುದು. ಹೀಗಾದಲ್ಲಿ 2022–23ನೇ ಹಣಕಾಸು ವರ್ಷಕ್ಕೆ ವರಮಾನ ನಷ್ಟವು ₹ 1 ಲಕ್ಷ ಕೋಟಿಯಿಂದ ₹ 1.5 ಲಕ್ಷ ಕೋಟಿ ಏರಿಕೆ ಆಗಲಿದೆ.

ಫೆಬ್ರುವರಿಯಲ್ಲಿ ಮಂಡಿಸಿದ ಬಜೆಟ್ ಪ್ರಕಾರ, ಸರ್ಕಾರವು ಪ್ರಸಕ್ತ ಹಣಕಾಸು ವರ್ಷದಲ್ಲಿ ಮಾರುಕಟ್ಟೆಯಿಂದ ₹ 14.31 ಲಕ್ಷ ಕೋಟಿ ಸಾಲ ಪಡೆಯಲಿದೆ.

ಹಿಂದುತ್ವ ಬಟ್ಟೆ ತೊಳೆಯುವ ಪುಡಿಯೇ: ರಾಜ್ ಠಾಕ್ರೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ಮುಖ್ಯಮಂತ್ರಿ ಹಾಗೂ ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರ ಹಿಂದುತ್ವದ ಹೇಳಿಕೆಯ ವಿರುದ್ಧ ಮಹಾರಾಷ್ಟ್ರ ನವನಿರ್ಮಾಣ ಸೇನಾದ ಅಧ್ಯಕ್ಷ ರಾಜ್ ಠಾಕ್ರೆ ವಾಗ್ದಾಳಿ ನಡೆಸಿದ್ದು, ‘ಹಿಂದುತ್ವ ಬಟ್ಟೆ ತೊಳೆಯುವ ಪುಡಿಯೇ?’ ಎಂದು ಪ್ರಶ್ನೆ ಮಾಡಿದ್ದಾರೆ.

ಕೆಲವು ದಿನಗಳ ಹಿಂದೆ ನಡೆದ ರ‍್ಯಾಲಿಯೊಂದರಲ್ಲಿ ಉದ್ಧವ್ ಅವರು, ‘ಬಿಜೆಪಿಯವರದು ನಕಲಿ ಹಿಂದುತ್ವ. ನಮ್ಮದು ಅಸಲಿ ಹಿಂದುತ್ವ’ ಎಂದು ಹೇಳಿದ್ದರು.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ರಾಜ್ ಠಾಕ್ರೆ, ‘ನಾನು ಉದ್ಧವ್ ಅವರ ಭಾಷಣ ಕೇಳಿದ್ದೇನೆ. ಅವರು ನಮ್ಮದು ಅಸಲಿ ಹಿಂದುತ್ವ ಹಾಗೂ ಬಿಜೆಪಿಯವರದು ನಕಲಿ ಹಿಂದುತ್ವ ಎಂದು ಹೇಳಿದ್ದಾರೆ. ಆದರೆ ಹಿಂದುತ್ವ ಎಂಬುದು ಬಟ್ಟೆ ತೊಳೆಯುವ ಪುಡಿಯೇ? ಎಂದು ಕೇಳಿದ್ದಾರೆ.

ಅಯೋಧ್ಯೆ ಭೇಟಿ ಮುಂದೂಡಿಕೆ: ಜೂನ್ 5ರ ತಮ್ಮ ಉದ್ದೇಶಿತ ಅಯೋಧ್ಯೆಯ ಭೇಟಿಯ ಸುತ್ತ ರಾಜಕೀಯ ಬೆಳವಣಿಗೆಗಳಾಗುತ್ತಿದ್ದು, ಇವು ತಮ್ಮನ್ನು ಹಾಗೂ ತಮ್ಮ ಪಕ್ಷದ ಕಾರ್ಯಕರ್ತರನ್ನು ಕಾನೂನು ತೊಡಕುಗಳಲ್ಲಿ ಸಿಲುಕಿಸುವ ತಂತ್ರಗಳಾಗಿವೆ. ಈ ವಿವಾದಗಳಲ್ಲಿ ಸಿಕ್ಕಿಹಾಕಿಕೊಳ್ಳಬಾರದೆಂದು ಅಯೋಧ್ಯೆ ಭೇಟಿಯನ್ನು ಮುಂದೂಡಲು ನಿರ್ಧರಿಸಿದ್ದೇನೆ ಎಂದು ರಾಜ್ ಠಾಕ್ರೆ ತಿಳಿಸಿದ್ದಾರೆ.

ಭಾರತವನ್ನು ಹೊಗಳಿದ ಇಮ್ರಾನ್ ಖಾನ್

ಇಸ್ಲಾಮಾಬಾದ್ (ಪಿಟಿಐ): ಭಾರತದ ಸ್ವತಂತ್ರ ವಿದೇಶಾಂಗ ನೀತಿಗಳ ಬಗ್ಗೆ ಇತ್ತೀಚೆಗೆ ಮುಕ್ತ ಕಂಠದಿಂದ ಶ್ಲಾಘಿಸಿದ್ದ ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್, ಇಂಧನ ದರ ಇಳಿಸಿದ ಸರ್ಕಾರದ ಕ್ರಮವನ್ನು ಸಹ ಕೊಂಡಾಡಿದ್ದಾರೆ.

‘ಕ್ವಾಡ್ ಸದಸ್ಯ ರಾಷ್ಟ್ರವಾದರೂ ಅಮೆರಿಕದ ಒತ್ತಡಕ್ಕೆ ಮಣಿಯದ ಭಾರತವು ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಖರೀದಿಸುವ ಮೂಲಕ ಜನರಿಗೆ ನೆರವಾಗಿದೆ. ಸ್ವತಂತ್ರ ವಿದೇಶಾಂಗ ನೀತಿಯ ಮೂಲಕ ಇಂಥದ್ದೇ ಸಾಧನೆ ಮಾಡಬೇಕೆಂದು ನಮ್ಮ ಸರ್ಕಾರ ಉದ್ದೇಶಿಸಿತ್ತು’ ಎಂದು ಅವರು ಟ್ವೀಟ್ ಮಾಡಿದ್ದಾರೆ. ಭಾರತದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಇಳಿಕೆ ಕುರಿತ ವರದಿಯೊಂದರ ತುಣುಕನ್ನು ಟ್ವೀಟ್ ಜತೆಗೆ ಟ್ಯಾಗ್ ಮಾಡಿದ್ದಾರೆ.

‘ನಮ್ಮ ಸರ್ಕಾರಕ್ಕೆ ಪಾಕಿಸ್ತಾನದ ಹಿತಾಸಕ್ತಿಯೇ ಮುಖ್ಯವಾಗಿತ್ತು. ಆದರೆ ದುರದೃಷ್ಟವಶಾತ್, ಸ್ಥಳೀಯ ಮೀರ್ ಜಾಫರ್ ಮತ್ತು ಮೀರ್ ಸಾದಿಕ್ ಬಾಹ್ಯ ಒತ್ತಡದಿಂದ ಸರ್ಕಾರವನ್ನು ಬದಲಾಯಿಸುವ ಷಡ್ಯಂತ್ರ ಮಾಡಿದರು. ಈಗ ಅವರು ದೇಶದ ಆರ್ಥಿಕತೆಯನ್ನು ವಿನಾಶದ ಪ್ರಪಾತಕ್ಕೆ ದೂಡುತ್ತಿದ್ದಾರೆ’ ಎಂದು ಮತ್ತೊಂದು ಟ್ವೀಟ್‌ನಲ್ಲಿ ಪಾಕಿಸ್ತಾನ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೋವಿಡ್: ಪ್ರಕರಣಗಳು ಕೊಂಚ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಕೊಂಚ ಏರಿಕೆ ಕಂಡಿದ್ದು, ಭಾನುವಾರ 167 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. 10 ದಿನಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಮೇ 11 ರಂದು ರಾಜ್ಯದಲ್ಲಿ 167 ಪ್ರಕರಣಗಳು ವರದಿಯಾಗಿದ್ದವು. ಬಳಿಕ ಹೊಸ ಪ್ರಕರಣಗಳ ಸಂಖ್ಯೆ ನೂರರ ಗಡಿಯ ಆಸುಪಾಸಿನಲ್ಲಿತ್ತು. ಮೇ 20 ರಂದು 95 ಪ್ರಕರಣಗಳು ದೃಢಪಟ್ಟಿದ್ದವು. ಮೇ 21ರಂದು ಈ ಸಂಖ್ಯೆ 155ಕ್ಕೆ ಏರಿಕೆಯಾಗಿತ್ತು. ಭಾನುವಾರ ದೃಢಪಟ್ಟ ಪ್ರಕರಣಗಳಲ್ಲಿ 150 ಪ್ರಕರಣಗಳು ಬೆಂಗಳೂರಿನಲ್ಲಿಯೇ ವರದಿಯಾಗಿವೆ.

ತಮಿಳುನಾಡಿನಲ್ಲಿ ಒಮೈಕ್ರಾನ್ ಬಿಎ. 4 ಪ್ರಕರಣ

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ ಒಮೈಕ್ರಾನ್ ಬಿಎ.4 ರೂಪಾಂತರಿ ತಳಿಯ ಮೊದಲ ಪ್ರಕರಣ ವರದಿಯಾಗಿದೆ.

ರಾಜ್ಯದಲ್ಲಿ ಇತ್ತೀಚೆಗಷ್ಟೇ ಹದಿಹರೆಯದವರಲ್ಲಿ ಕೋವಿಡ್–19 ದೃಢಪಟ್ಟ ಬಳಿಕ ವರದಿಯಾದ ಮೊದಲ ಪ್ರಕರಣ ಇದಾಗಿದೆ.

‘19 ವರ್ಷದ ಯುವತಿಯಲ್ಲಿ ಹೊಸ ರೂಪಾಂತರಿ ತಳಿ ಪತ್ತೆಯಾಗಿದ್ದು, ರಾಜ್ಯದ ಉನ್ನತ ಮಟ್ಟದ ಆರೋಗ್ಯಾಧಿಕಾರಿಗಳು ಭೇಟಿ ಮಾಡಿದ್ದಾರೆ. ಯುವತಿ ಚೇತರಿಸಿಕೊಂಡಿದ್ದು, ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ’ ಎಂದು ತಮಿಳುನಾಡಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಸುಬ್ರಮಣಿಯನ್ ಹೇಳಿದ್ದಾರೆ.

2,226 ಪ್ರಕರಣಗಳು ಪತ್ತೆ: 65 ಸಾವು

ನವದೆಹಲಿ: 24 ಗಂಟೆಗಳ ಅವಧಿಯಲ್ಲಿ ಭಾರತ ಹೊಸದಾಗಿ 2,226 ಕೋವಿಡ್ ಪ್ರಕರಣಗಳನ್ನು ಕಂಡಿದೆ. ಇದರೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 4,31,36,371ಕ್ಕೆ ಏರಿಕೆಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 14,955ಕ್ಕೆ ಇಳಿದಿದೆ.

ಈ ಒಂದು ದಿನದ ಅವಧಿಯಲ್ಲಿ 65 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಇದರೊಂದಿಗೆ ಸಾವಿನ ಸಂಖ್ಯೆ 5,24,413ಕ್ಕೆ ಏರಿಕೆಯಾಗಿದೆ.

ದೇಶದ ದೈನಂದಿನ ಪಾಸಿಟಿವಿಟಿ ದರ ಶೇ 0.50 ರಷ್ಟು ಇದೆ.

ಕೊವೊವ್ಯಾಕ್ಸ್: 3ನೇ ಹಂತದ ಪರೀಕ್ಷೆಗೆ ಅನುಮತಿ ಕೋರಿಕೆ

ನವದೆಹಲಿ (ಪಿಟಿಐ): ಕೊವೊವ್ಯಾಕ್ಸ್ ಲಸಿಕೆಯಿಂದ ಎರಡರಿಂದ 18 ವರ್ಷದ ಮಕ್ಕಳಿಗೆ ರಕ್ಷಣೆ ಮತ್ತು ಅವರ ನಿರೋಧಕ ಶಕ್ತಿ ವೃದ್ಧಿ ಕುರಿತಂತೆ ಮೂರನೇ ಹಂತದ ಪ್ರಯೋಗ ನಡೆಸಲು ಅನುಮತಿ ನೀಡಬೇಕೆಂದು ಸೀರಂ ಇನ್‌ಸ್ಟಿಟ್ಯೂಟ್ ಸಂಸ್ಥೆಯು ಡಿಸಿಜಿಐ ಅನುಮತಿ ಕೋರಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹465



ಲೀಗ್ ಹಂತದ ಕೊನೆಯ ಹಣಾಹಣಿಯಲ್ಲಿ ಸನ್‌ರೈಸರ್ಸ್ ತಂಡಕ್ಕೆ ಸೋಲು

ಲಿಯಾಮ್ ಮಿಂಚು; ಪಂಜಾಬ್‌ಗೆ ಜಯ

ಮುಂಬೈ(ಪಿಟಿಐ): ಸ್ಫೋಟಕ ಬ್ಯಾಟಿಂಗ್ ಮಾಡಿದ ಲಿಯಾಮ್ ಲಿವಿಂಗ್‌ಸ್ಟೋನ್ ಒಂದು ರನ್‌ನಿಂದ ಅರ್ಧಶತಕ ತಪ್ಪಿಸಿಕೊಂಡರು. ಆದರೆ ಪಂಜಾಬ್ ಕಿಂಗ್ಸ್ ತಂಡಕ್ಕೆ ಭರ್ಜರಿ ಜಯದ ಕಾಣಿಕೆ ನೀಡುವಲ್ಲಿ ಅವರು ಯಶಸ್ವಿಯಾದರು.

ಭಾನುವಾರ ರಾತ್ರಿ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಪಂಜಾಬ್ 5 ವಿಕೆಟ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಜಯ ಗಳಿಸಿತು.

158 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಂಜಾಬ್ 16ನೇ ಓವರ್‌ನ ಮೊದಲ ಎಸೆತದಲ್ಲೇ ದಡ ಸೇರಿತು. 5ನೇ ಕ್ರಮಾಂಕದ ಲಿಯಾಮ್ ಲಿವಿಂಗ್‌ಸ್ಟೋನ್ 5 ಸಿಕ್ಸರ್ ಮತ್ತು 2 ಬೌಂಡರಿಗಳೊಂದಿಗೆ ಕೇವಲ 22 ಎಸೆತಗಳಲ್ಲಿ 49 ರನ್ ಗಳಿಸಿ ಔಟಾಗದೆ ಉಳಿದರು.

ಟಾಸ್ ಗೆದ್ದ ಸನ್‌ರೈಸರ್ಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನೇಥನ್ ಎಲ್ಲಿಸ್ ಮತ್ತು ಹರಪ್ರೀತ್ ಬ್ರಾರ್ ದಾಳಿಗೆ ಸನ್‌ರೈಸರ್ಸ್ ಬ್ಯಾಟರ್‌ಗಳು ನಲುಗಿದರು. ಹೀಗಾಗಿ 8 ವಿಕೆಟ್‌ಗಳಿಗೆ 157 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಅಭಿಷೇಕ್ ಶರ್ಮಾ (43; 32ಎ, 4X5, 6X2) ಒಬ್ಬರೇ ಮಿಂಚಿದರು.

ವೇಗಿ ಕಗಿಸೊ ರಬಾಡ ಮೂರನೇ ಓವರ್‌ನಲ್ಲಿಯೇ ಪ್ರಿಯಂ ಗರ್ಗ್ ವಿಕೆಟ್ ಗಳಿಸಿದರು. ಎಡಗೈ ಬೌಲರ್ ಹರ್‌ಪ್ರೀತ್ ಬ್ರಾರ್ (26ಕ್ಕೆ3) ಏಡನ್ ಮರ್ಕರಂ, ರಾಹುಲ್ ತ್ರಿಪಾಠಿ ಮತ್ತು ಅಭಿಷೇಕ್ ವರ್ಮಾ ಅವರ ವಿಕೆಟ್ ಕಬಳಿಸಿದರು. 100ರ ಗಡಿ ಮುಟ್ಟುವ ಮುನ್ನವೇ ತಂಡ 5 ವಿಕೆಟ್ ಕಳೆದುಕೊಂಡಿತು. ನಿಕೊಲಸ್ ಪೂರನ್ ಮತ್ತು ವಾಷಿಂಗ್ಟನ್ ಸುಂದರ್ ವಿಕೆಟ್‌ಗಳನ್ನು ಗಳಿಸಿದ ನೇಥನ್ ಎಲ್ಲಿಸ್ ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು.

ನೋಬಾಲ್– ರನೌಟ್: ನೇಥನ್ ಹಾಕಿದ ಇನಿಂಗ್ಸ್‌ನ ಕೊನೆಯ ಓವರ್‌ನ ಅಂತಿಮ ಎಸೆತವು ನೋಬಾಲ್ ಆಯಿತು. ಇದರಲ್ಲಿ ಒಂದು ರನ್ ಓಡಲು ಯತ್ನಿಸಿದ ಭುವನೇಶ್ವರ್ ಕುಮಾರ್ ಅವರನ್ನು ವಿಕೆಟ್‌ಕೀಪರ್ ಜಿತೇಶ್ ಶರ್ಮಾ ರನೌಟ್ ಮಾಡುವಲ್ಲಿ ಸಫಲರಾದರು. ಫ್ರೀ ಹಿಟ್‌ನಲ್ಲಿ ರನ್ ಗಳಿಸಲು ಉಮ್ರಾನ್ ಯಶಸ್ವಿಯಾಗಲಿಲ್ಲ.


ಲಿಯಾಮ್ ಲಿವಿಂಗ್‌ಸ್ಟೋನ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 8ಕ್ಕೆ 157 (20 ಓವರ್)

ಪ್ರಿಯಂ ಸಿ ಮಯಂಕ್ ಬಿ ರಬಾಡ 4 (7 ಎ), ಅಭಿಷೇಕ್ ಸಿ ಲಿವಿಂಗ್‌ಸ್ಟೋನ್ ಬಿ ಹರಪ್ರೀತ್ 43 (32 ಎ, 4x5, 6x2), ರಾಹುಲ್ ಸಿ ಶಿಖರ್ ಬಿ ಹರಪ್ರೀತ್ 20 (18 ಎ, 4x1, 6x1), ಮರ್ಕರಮ್ ಸ್ಟಂಪ್ಡ್ ಜಿತೇಶ್ ಬಿ ಹರಪ್ರೀತ್ 21 (17 ಎ, 4x2), ನಿಕೋಲಸ್ ಸಿ ಜಿತೇಶ್ ಬಿ ಎಲಿಸ್ 5 (10 ಎ), ವಾಷಿಂಗ್ಟನ್ ಸಿ ಶಿಖರ್ ಬಿ ಎಲಿಸ್ 25 (19 ಎ, 4x3, 6x1), ರೊಮಾರಿಯೊ ಔಟಾಗದೆ 26 (15 ಎ, 4x2, 6x2), ಸುಚಿತ್ ಸಿ ಮಂಕಡ್ ಬಿ ಎಲಿಸ್ 0 (1 ಎ), ಭುವನೇಶ್ವರ್ ರನ್ ಔಟ್ (ಜಿತೇಶ್) 1 (1 ಎ), ಉಮ್ರಾನ್ ಔಟಾಗದೆ 0 (1 ಎ)

ಇತರೆ (ಬೈ 2, ಲೆಗ್‌ಬೈ 1, ನೋಬಾಲ್ 1, ವೈಡ್ 8) 12

ವಿಕೆಟ್ ಪತನ: 1-14 (ಪ್ರಿಯಂ ಗರ್ಗ್, 2.4), 2-61 (ರಾಹುಲ್ ತ್ರಿಪಾಠಿ, 8.3), 3-76 (ಅಭಿಷೇಕ್ ಶರ್ಮಾ, 10.3), 4-87 (ನಿಕೋಲಸ್ ಪೂರನ್, 12.6), 5-96 (ಏಡನ್ ಮರ್ಕರಮ್, 14.4), 6-154 (ವಾಷಿಂಗ್ಟನ್ ಸುಂದರ್, 19.3), 7-154 (ಜಗದೀಶ ಸುಚಿತ್, 19.4), 8-156 (ಭುವನೇಶ್ವರ್ ಕುಮಾರ್, 19.5)

ಬೌಲಿಂಗ್: ಲಿಯಾಮ್ ಲಿವಿಂಗ್‌ಸ್ಟೋನ್ 4–0–25–0, ಅರ್ಷದೀಪ್ ಸಿಂಗ್ 4–0–25–0, ಕಗಿಸೊ ರಬಾಡ 4–0–38–1, ನೇಥನ್ ಎಲಿಸ್ 4–0–40–3, ಹರಪ್ರೀತ್ ಬ್ರಾರ್ 4–0–26–3

ಪಂಜಾಬ್ ಕಿಂಗ್ಸ್ 5ಕ್ಕೆ 160 (15.1 ಓವರ್)

ಬೆಸ್ಟೊ ಬಿ ಫಾರೂಖಿ 23 (15 ಎ, 4x5), ಶಿಖರ್ ಬಿ ಫಾರೂಖಿ 39 (32 ಎ, 4x2, 6x2), ಶಾರೂಖ್ ಸಿ ವಾಷಿಂಗ್ಟನ್ ಬಿ ಉಮ್ರಾನ್ 19 (10 ಎ, 4x2, 6x1), ಮಯಂಕ್ ಸಿ ಸುಚಿತ್ ಬಿ ವಾಷಿಂಗ್ಟನ್ 1 (4 ಎ), ಲಿವಿಂಗ್‌ಸ್ಟೋನ್ ಔಟಾಗದೆ 49 (22 ಎ, 4x2, 6x5), ಜಿತೇಶ್ ಸಿ ಗರ್ಗ್ ಬಿ ಸುಚಿತ್ 19 (7 ಎ, 4x3, 4x1), ಪ್ರೇರಕ್ ಔಟಾಗದೆ 4 (1 ಎ, 4x1)

ಇತರೆ (ಲೆಗ್‌ಬೈ 2, ವೈಡ್ 4) 6

ವಿಕೆಟ್ ಪತನ: 1-28 (ಜಾನಿ ಬೆಸ್ಟೊ, 2.6), 2-66 (ಶಾರೂಖ್ ಖಾನ್, 6.3), 3-71 (ಮಯಂಕ್ ಅಗರವಾಲ್, 7.5), 4-112 (ಶಿಖರ್ ಧವನ್, 12.3), 5-133 (ಜಿತೇಶ್ ಶರ್ಮಾ, 13.6)

ಬೌಲಿಂಗ್: ಭುವನೇಶ್ವರ್ ಕುಮಾರ್ 2–0–22–0, ವಾಷಿಂಗ್ಟನ್ ಸುಂದರ್ 2–0–19–1, ಫಜಲ್ ಹಕ್ ಫಾರೂಖಿ 4–0–32–2, ಜಗದೀಶ ಸುಚಿತ್ 4–0–38–1, ಉಮ್ರಾನ್ ಮಲಿಕ್ 2.1–0–24–1, ರೊಮಾರಿಯೊ ಶೆಫರ್ಡ್ 1–0–23–0

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 5 ವಿಕೆಟ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	14	10	4	0	0	20	0.316
ರಾಜಸ್ಥಾನ	14	9	5	0	0	18	0.298
ಲಖನೌ	14	9	5	0	0	18	0.251
ಬೆಂಗಳೂರು	14	8	6	0	0	16	-0.253
ಡೆಲ್ಲಿ	14	7	7	0	0	14	0.204
ಪಂಜಾಬ್	14	7	7	0	0	14	0.126
ಕೋಲ್ಕತ್ತ	14	6	8	0	0	12	0.146
ಹೈದರಾಬಾದ್	14	6	8	0	0	12	-0.379
ಚೆನ್ನೈ	14	4	10	0	0	8	-0.203
ಮುಂಬೈ	14	4	10	0	0	8	-0.506

* ಲೀಗ್ ಹಂತದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಮ್ಯಾಕ್ಸ್ ವರ್ಸ್ಟಾಪನ್‌ಗೆ ಸ್ಪ್ಯಾನಿಷ್ ಗ್ರ್ಯಾನ್‌ಪ್ರಿ ಪ್ರಶಸ್ತಿ ಸಂಭ್ರಮ

ಮಾಂಟ್‌ಮೆಲೊ, ಸ್ಪೇನ್ (ಎಎಫ್‌ಪಿ): ಬೆಲ್ಜಿಯಂ ದೇಶದ ಮ್ಯಾಕ್ಸ್ ವರ್ಸ್ಟಾಪನ್ ಭಾನುವಾರ ಇಲ್ಲಿ ನಡೆದ ಸ್ಪ್ಯಾನಿಷ್ ಗ್ರ್ಯಾನ್ ಪ್ರಿ ಪ್ರಶಸ್ತಿ ಗೆದ್ದರು. ಇದರೊಂದಿಗೆ ಫಾರ್ಮುಲಾ ಒನ್ ಚಾಲಕರ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರು.

ರೆಡ್ ಬುಲ್ ತಂಡದ ಇನ್ನೊಬ್ಬ ಡ್ರೈವರ್ ಸರ್ಗಿಯೊ ಪೆರೆಜ್ ಎರಡನೇ ಸ್ಥಾನ ಪಡೆದರು.

ಈ ರೇಸ್‌ನಲ್ಲಿ ಮ್ಯಾಕ್ಸ್ ಪ್ರತಿಸ್ಪರ್ಧಿ ಚಾರ್ಲ್ಸ್ ಲೆಕ್ಲರ್ಕ್‌ಗೆ ಅದೃಷ್ಟ ಕೈಕೊಟ್ಟಿತು. 23ನೇ ಲ್ಯಾಪ್‌ನವರೆಗೂ ಮುನ್ನಡೆಯಲ್ಲಿದ್ದ ಲೆಕ್ಲರ್ಕ್ ಅವರ ಫೆರಾರಿಯ ಪವರ್ ದಿಢೀರ್ ಕುಂಠಿತಗೊಂಡಿತು. ಈ ಅವಕಾಶವನ್ನು ಬಳಸಿಕೊಂಡ ಮ್ಯಾಕ್ಸ್ ಗುರಿಯತ್ತ ನುಗ್ಗಿದರು.

ಮ್ಯಾಕ್ಸ್ ಖಾತೆಯಲ್ಲಿ ಈಗ ಒಟ್ಟು 25 ಅಂಕಗಳಿವೆ. ಪೆರೆಜ್ (19), ಮರ್ಸಿಡಿಸ್‌ನ ರಸೆಲ್ (15), ಫೆರಾರಿ ತಂಡದ ಜೂನರ್ ಸೇಂಜ್ (12) ಮತ್ತು ಲೂಯಿಸ್ ಹ್ಯಾಮಿಲ್ಟನ್ (10) ಕ್ರಮವಾಗಿ ಎರಡರಿಂದ ಐದನೇ ಸ್ಥಾನಗಳಲ್ಲಿದ್ದಾರೆ.


ಪ್ರಶಸ್ತಿಯೊಂದಿಗೆ ಮ್ಯಾಕ್ಸ್ ವರ್ಸ್ಟಾಪನ್ –ಎಎಫ್‌ಪಿ ಚಿತ್ರ

‘ಧನ್ಯವಾದ ಮುಂಬೈ ಇಂಡಿಯನ್ಸ್’

ಡೆಲ್ಲಿ ಸೋಲಿಸಿದ ರೋಹಿತ್ ಬಳಗಕ್ಕೆ ಕೊಹ್ಲಿ ಕೃತಜ್ಞತೆ

ಮುಂಬೈ (ಪಿಟಿಐ): ‘ಧನ್ಯವಾದಗಳು ಮುಂಬೈ, ನಾವು ಇದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳುತ್ತೇವೆ’–

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ ರೋಹಿತ್ ಶರ್ಮಾ ನಾಯಕತ್ವದ ಮುಂಬೈ ಇಂಡಿಯನ್ಸ್‌ಗೆ ಸಲ್ಲಿಸಿದ ಕೃತಜ್ಞತೆ ಇದು.

ಶನಿವಾರ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಮುಂಬೈ ಇಂಡಿಯನ್ಸ್ ಜಯಿಸಿದ್ದರಿಂದ ಆರ್‌ಸಿಬಿಗೆ ಪ್ಲೇ ಆಫ್ ಪ್ರವೇಶದ ಅವಕಾಶ ದೊರೆತಿದೆ. ಇದು ಬೆಂಗಳೂರು ಬಳಗದಲ್ಲಿ ಸಂತಸಕ್ಕೆ ಕಾರಣವಾಗಿದೆ.

‘ನಮ್ಮ ತಂಡದಲ್ಲಿ ಸಂತಸದ ಹೊನಲು ಹರಿದಿದೆ. ಇದೊಂದು ಅಸಾಧಾರಣವಾದ ವಿಷಯ. ಧನ್ಯವಾದಗಳು ಮುಂಬೈ’ ಎಂದು ಕೊಹ್ಲಿ ತಿಳಿಸಿದ್ದಾರೆ.

ಲೀಗ್ ಹಂತದ ತನ್ನ ಕೊನೆಯ ಪಂದ್ಯದಲ್ಲಿ ಆರ್‌ಸಿಬಿಯು ಗುಜರಾತ್ ಟೈಟನ್ಸ್ ವಿರುದ್ಧ ಜಯಿಸಿತ್ತು. ಅದರೊಂದಿಗೆ ಒಟ್ಟು 16 ಅಂಕಗಳನ್ನು ಗಳಿಸಿತ್ತು. ಆದರೆ, ನೆಗೆಟಿವ್ ರನ್‌ರೇಟ್ ಹೊಂದಿತ್ತು. 14 ಅಂಕ ಗಳಿಸಿ ಪಾಸಿಟಿವ್ ರನ್‌ರೇಟ್ ಹೊಂದಿದ್ದ ಡೆಲ್ಲಿ ತಂಡವು ಶನಿವಾರ ಮುಂಬೈ ಎದುರು ಜಯಿಸಿದ್ದರೆ ಆರ್‌ಸಿಬಿಗೆ ಪ್ಲೇ ಆಫ್ ಅವಕಾಶ ಕೈಜಾರುತ್ತಿತ್ತು. ಆದ್ದರಿಂದ ತಂಡದ ಆಟಗಾರರು, ಅಭಿಮಾನಿಗಳು ಮುಂಬೈ ತಂಡದ ಜಯಕ್ಕಾಗಿ ಹಾರೈಸಿದ್ದರು.

ಇದೇ 25ರಂದು ಕೋಲ್ಕತ್ತ ಈಡನ್ ಗಾರ್ಡನ್‌ನಲ್ಲಿ ನಡೆಯಲಿರುವ ಎಲಿಮಿನೇಟರ್‌ನಲ್ಲಿ ಆರ್‌ಸಿಬಿಯು ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಆಡಲಿದೆ.

ಟಿಟ್ಮಸ್ ದಾಖಲೆ

ಅಡಿಲೇಡ್ (ಎಎಫ್‌ಪಿ): ಆಸ್ಟ್ರೇಲಿಯಾದ ಎರಿಯರ್ನ್ ಟಿಟ್ಮಸ್ ಮಹಿಳೆಯರ 400 ಮೀಟರ್ಸ್ ಫ್ರೀಸ್ಟೈಲ್ ಈಜು ಸ್ಪರ್ಧೆಯಲ್ಲಿ ವಿಶ್ವ ದಾಖಲೆ ನಿರ್ಮಿಸಿದರು.


ಟಿಟ್ಮಸ್

ಭಾನುವಾರ ನಡೆದ ಆಸ್ಟ್ರೇಲಿಯನ್ ಚಾಂಪಿಯನ್‌ಷಿಪ್‌ನಲ್ಲಿ ಟಿಟ್ಮಸ್ 3 ನಿಮಿಷ, 56.40 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಇದರೊಂದಿಗೆ ಅಮೆರಿಕದ ಕೇಟಿ ಲೆಡಕಿ ಅವರ ದಾಖಲೆಯನ್ನು ಹಿಂದಿಕ್ಕಿದರು.


ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿ ಗೆದ್ದ ಮ್ಯಾಂಚೆಸ್ಟರ್ ಸಿಟಿ ತಂಡದ ಸಂಭ್ರಮ. ಭಾನುವಾರ ನಡೆದ ಪಂದ್ಯದಲ್ಲಿ ಆ್ಯಸ್ಟನ್ ವಿಲ್ಲಾವನ್ನು ಮ್ಯಾಂಚೆಸ್ಟರ್ ಸಿಟಿ 3–2ರಲ್ಲಿ ಮಣಿಸಿ 93 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನ ಗಳಿಸಿತು. ಈ ಮೂಲಕ 5 ವರ್ಷದಲ್ಲಿ 4 ಬಾರಿ ಪ್ರಸಸ್ತಿ ಗೆದ್ದಿತು –ಎಎಫ್‌ಪಿ ಚಿತ್ರ

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	629
ರಾಹುಲ್	ಲಖನೌ	537
ಕ್ವಿಂಟನ್ ಡಿಕಾಕ್	ಲಖನೌ	502

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	26
ಹಸರಂಗ	ಬೆಂಗಳೂರು	24
ಕಗಿಸೊ	ಪಂಜಾಬ್	23

ಚೆಸ್: ಹರಿಕೃಷ್ಣನ್ ಚಾಂಪಿಯನ್

ಮೈಸೂರು: ತಮಿಳುನಾಡಿನ ಅಂತರರಾಷ್ಟ್ರೀಯ ಮಾಸ್ಟರ್ ಎ.ಆರ್.ಹರಿಕೃಷ್ಣನ್ ಅವರು ಮೈಸೂರಿನಲ್ಲಿ ಭಾನುವಾರ ಕೊನೆಗೊಂಡ ಆಲ್ ಇಂಡಿಯಾ ಓಪನ್ ರ‍್ಯಾಪಿಡ್ ಫಿಡೆ ರೇಟಿಂಗ್ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು.


ಹರಿಕೃಷ್ಣನ್

8 ಪಾಯಿಂಟ್ಸ್‌ಗಳೊಂದಿಗೆ ಅವರು ಅಗ್ರಸ್ಥಾನ ಪಡೆದುಕೊಂಡರು. ಆಂಧ್ರಪ್ರದೇಶದ ದುಲಿಪಲ್ಲ ಬಾಲಚಂದ್ರ ಪ್ರಸಾದ್ ‘ರನ್ನರ್ ಅಪ್’ ಆದರೆ, ಪಿ.ಶ್ಯಾಮ್‌ನಿಖಿಲ್ ಮೂರನೇ ಸ್ಥಾನ ಗಳಿಸಿದರು.

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಸ್ಲಾನ್ ಸ್ಟೀಫನ್ಸ್, ದಿಮಿಟ್ರೊವ್‌ಗೆ ಗೆಲುವು

ಸೊರಾನಾ ಗೆಲುವಿಗೆ ಇವಾನಿಸೆವಿಚ್ ಕಾಣಿಕೆ!

ಪ್ಯಾರಿಸ್ (ಎಎಫ್‌ಪಿ): ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ ಸರ್ಬಿಯಾದ ನೊವಾಕ್ ಜೊಕೊವಿಚ್ ಕೋಚ್ ಗೊರಾನ್ ಇವಾನಿಸೆವಿಚ್ ಅವರಿಂದಾಗಿ ರೊಮೇನಿಯಾದ ಸೊರಾನಾ ಸಿರ್‌ಸ್ಟಿಗೆ ಗೆಲುವು...!

ಭಾನುವಾರ ಆರಂಭಗೊಂಡ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಸೊರಾನಾ ಸಿರ್‌ಸ್ಟಿ 6–3, 6–3ರಲ್ಲಿ ಜರ್ಮನಿಯ ತಜಾನ ಮರಿಯಾ ವಿರುದ್ಧ ಜಯ ಗಳಿಸಿದರು. ಏಕಪಕ್ಷೀಯವಾದ ಈ ಗೆಲುವಿನ ಹಿಂದೆ ಇವಾನಿಸೆವಿಚ್ ಅವರ ಕಿವಿಮಾತಿನ ಬಲವಿದೆ ಎಂದು ಪಂದ್ಯದ ನಂತರ ಸೊರಾನ ಹೇಳಿದರು.

2001ರಲ್ಲಿ ವಿಂಬಲ್ಡನ್ ಚಾಂಪಿಯನ್ ಆಗಿದ್ದ ಇವಾನಿಸೆವಿಚ್ ರೊಲ್ಯಾಂಡ್ ಗ್ಯಾರೋಸ್ ಟೂರ್ನಿಯ ಹಾಲಿ ಚಾಂಪಿಯನ್ ನೊವಾಕ್ ಜೊಕೊವಿಚ್ ಜೊತೆ ಇಲ್ಲಿಗೆ ಬಂದಿದ್ದಾರೆ. ಜೊಕೊವಿಚ್ ಅವರಿಗೆ 21ನೇ ಗ್ರ್ಯಾನ್ ಸ್ಲಾಂ ಪ್ರಶಸ್ತಿ ಗೆಲ್ಲಿಸಿಕೊಡುವ ಭರವಸೆಯಲ್ಲಿದ್ದಾರೆ ಅವರು.

32 ವರ್ಷದ ಸೊರಾನ 2009ರ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು. ಈ ಬಾರಿ ಎರಡನೇ ಸುತ್ತಿನಲ್ಲಿ ಅವರು ಅಮೆರಿಕ ಓಪನ್‌ನ ಮಾಜಿ ಚಾಂಪಿಯನ್ ಸ್ಲಾನೆ ಸ್ಟೀಫನ್ಸ್ ವಿರುದ್ಧ ಸೆಣಸುವರು.

‘ಇಲ್ಲಿಗೆ ಬರುವಾಗ ಇವಾನಿಸೆವಿಚ್ ಅವರೊಂದಿಗೆ ಮಾತನಾಡುವ ಅವಕಾಶ ಲಭಿಸಿತ್ತು. ಸ್ವಲ್ಪ ಸಹಾಯ ಕೇಳಿದ್ದೆ. ಆದರೆ ಎರಡು ದಿನಗಳ ಹಿಂದೆ ಅವರು ಅಭ್ಯಾಸದ ಸಂದರ್ಭದಲ್ಲಿ ನನಗಾಗಿ ಒಂದು ತಾಸು ತೆಗೆದಿರಿಸಿದ್ದರು. ಇದರಿಂದ ತುಂಬ ಅನುಕೂಲವಾಯಿತು’ ಎಂದು 26ನೇ ಶ್ರೇಯಾಂಕದ ಸೊರಾನ ಹೇಳಿದರು. ಪುರುಷರ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಬಲ್ಗೇರಿಯಾದ ಗ್ರಿಗರ್ ದಿಮಿಟ್ರೊವ್ 6-1, 6-1, 6-1ರಲ್ಲಿ ಅಮೆರಿಕದ ಮಾರ್ಕೋಸ್ ಗಿರಾನ್ ವಿರುದ್ಧ ಗೆದ್ದರು. ಮಹಿಳೆಯರ ವಿಭಾಗದಲ್ಲಿ ಸ್ಲಾನೆ ಸ್ಟೀಫನ್ಸ್ ಜರ್ಮನಿಯ ಜೂಲ್ ನೀಮಿರ್ ವಿರುದ್ಧ 5-7, 6-4, 6-2ರಲ್ಲಿ ಗೆದ್ದರು.


ಸೊರಾನಾ ಸಿರ್‌ಸ್ಟಿಯಾ –ಎಎಫ್‌ಪಿ ಚಿತ್ರ


ಗ್ರಿಗರ್ ದಿಮಿಟ್ರೊವ್ –ಎಎಫ್‌ಪಿ ಚಿತ್ರ

ಮೊದಲ ಸುತ್ತಿನ ಫಲಿತಾಂಶಗಳು: ಪುರುಷರ ವಿಭಾಗ: ಬೊಲಿವಿಯದ ಹ್ಯೂಗೊ ಡಿಲೀನ್‌ಗೆ ಆಸ್ಟ್ರಿಯಾದ ಡಾಮಿನಿಕ್ ಥೀಮ್ ವಿರುದ್ಧ 6-3, 6-2, 6-4ರಲ್ಲಿ ಗೆಲುವು; ಸ್ಲೊವೇನಿಯಾದ ಅಲ್ಜಾಸ್ ಬೆಡಿನ್‌ಗೆ ಆಸ್ಟ್ರೇಲಿಯಾದ ಕ್ರಿಸ್ಟೋಫರ್ ಕಾನೆಲ್ ವಿರುದ್ಧ 6-2, 6-4, 6-7 (5/7), 6-1ರಲ್ಲಿ ಜಯ; ಬಲ್ಗೇರಿಯಾದ ಗ್ರಿಗರ್ ದಿಮಿಟ್ರೊವ್‌ಗೆ ಅಮೆರಿಕದ ಮಾರ್ಕೋಸ್ ಗಿರಾನ್ ಎದುರು 6-1, 6-1, 6-1ರಲ್ಲಿ ಜಯ; ಕ್ರೊವೇಷಿಯಾದ ಬೋರ್ನಾ ಕೋರಿಕ್‌ಗೆ ಸ್ಪೇನ್‌ನ ಕಾರ್ಲೋಸ್ ತಬೆರ್ನರ್ ವಿರುದ್ಧ 3-6, 6-2, 6-3, 6-1ರಲ್ಲಿ ಗೆಲುವು; ಸ್ಪೇನ್‌ನ ಜಾಮಿ ಮುನಾರ್‌ಗೆ ಜರ್ಮನಿಯ ಡ್ಯಾನಿಯಲ್ ಅಲ್ಟಮೀರ್ ವಿರುದ್ಧ 6-1, 6-3, 4-6, 6-3ರಲ್ಲಿ ಜಯ.

ಮಹಿಳೆಯರ ವಿಭಾಗ: ಅಮೆರಿಕದ ಸ್ಲಾನೆ ಸ್ಟೀಫನ್ಸ್‌ಗೆ ಜರ್ಮನಿಯ ಜೂಲ್ ನೀಮೀರ್ ವಿರುದ್ಧ 5-7, 6-4, 6-2ರಲ್ಲಿ, ರೊಮೇನಿಯಾದ ಸೊರಾನ ಸಿರ್‌ಸ್ಟಿಯಾಗೆ ಜರ್ಮನಿಯ ತಜಾನ ಮರಿಯಾ ವಿರುದ್ಧ 6-3, 6-3ರಲ್ಲಿ, ಪೋಲೆಂಡ್‌ನ ಮಗ್ದಾ ಲಿನೆಟಗೆ ಟುನೀಷಿಯಾದ ಒನ್ಸ್ ಜಬೆವುರ್ ವಿರುದ್ಧ 3-6, 7-6 (7/4), 7-5ರಲ್ಲಿ, ಕೊಲಂಬಿಯಾದ ಮರಿಯಾ ಕಮಿಲಾ ಒಸೋರಿಯೊಗೆ ಫ್ರಾನ್ಸ್‌ನ ಹಾರ್ಮನಿ ಟ್ಯಾನ್ ವಿರುದ್ಧ 6-4, 6-3ರಲ್ಲಿ, ಬ್ರೆಜಿಲ್‌ನ ಬೀಟ್ರಿಜ್ ಹದದ್ ಮಯಾಗೆ ಸ್ಪೇನ್‌ನ ಕ್ರಿಸ್ಟಿನಾ ಬೂಕ್ಸ ವಿರುದ್ಧ 6-3, 1-6, 6-2ರಲ್ಲಿ ಗೆಲುವು.

ಕ್ವಾಡ್ ಕೂಟದ ಸಭೆ: ಜಾಲ ರಚನೆಯ ಮೂಲಕ ಕಡಲಿನಲ್ಲಿ ಅಕ್ರಮ ಚಟುವಟಿಕೆ ತಡೆ ಯತ್ನ

ಸಾಗರ ನಿಗಾ ಕೇಂದ್ರ ಜೋಡಣೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಂದೂ ಮಹಾಸಾಗರ ಪ್ರದೇಶದ ಮೇಲೆ ನಿಗಾ ಇರಿಸುವ ಭಾರತದ ಇನ್‌ಫರ್ಮೇಶನ್ ಫ್ಯೂಶನ್ ಸೆಂಟರ್ (ಐಎಫ್‌ಸಿ) ಅನ್ನು ಇತರ ದೇಶಗಳ ಇಂತಹ ಕೇಂದ್ರಗಳ ಜತೆಗೆ ಜೋಡಿಸುವ ಸಾಧ್ಯತೆ ಇದೆ. ಈ ಪ್ರದೇಶದ ಮೇಲೆ ನಿಗಾ ಇರಿಸುವ ಜಾಲ ರೂಪಿಸುವುದು ಇದರ ಉದ್ದೇಶ. ಅಕ್ರಮ ಮೀನುಗಾರಿಕೆಯ ಮೇಲೆ ಕಣ್ಗಾವಲು ಇರಿಸುವುದು ಐಎಫ್‌ಸಿಯ ಮುಖ್ಯ ಕೆಲಸ. ಆದರೆ, ಹಿಂದೂ ಮಹಾಸಾಗರ ಪ್ರದೇಶದಲ್ಲಿ ಚೀನಾದ ಸೇನಾ ಚಟುವಟಿಕೆಗಳ ಮೇಲೆ ನಿಗಾ ಇರಿಸುವ ಸಾಮರ್ಥ್ಯವೂ ಈ ಕೇಂದ್ರಕ್ಕೆ ಇದೆ.

ಭಾರತ, ಆಸ್ಟ್ರೇಲಿಯಾ, ಜಪಾನ್ ಮತ್ತು ಅಮೆರಿಕದ ನಾಯಕರು ಕ್ವಾಡ್‌ನ (ಈ ನಾಲ್ಕು ದೇಶಗಳ ಕೂಟ) ಎರಡನೇ ಮುಖಾಮುಖಿ ಸಭೆಯನ್ನು ಟೋಕಿಯೊದಲ್ಲಿ ಮಂಗಳವಾರ ನಡೆಸಲಿದ್ದಾರೆ. ಹಿಂದೂ ಮಹಾಸಾಗರ ಪ್ರದೇಶದ ಮೇಲೆ ನಿಗಾ ಇರಿಸಲು ಉಪಗ್ರಹ ಸಂಪರ್ಕಿತ ಜಾಲವನ್ನು ಜೋಡಿಸುವ ಪ್ರಸ್ತಾವದ ಬಗ್ಗೆ ಚರ್ಚೆ ನಡೆಯಲಿದೆ.

ಪ್ರಧಾನಿ ನರೇಂದ್ರ ಮೋದಿ, ಅಮೆರಿಕ ಅಧ್ಯಕ್ಷ ಜೋ ಬೈಡನ್, ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಅಲ್ಬನೀಸ್, ಜಪಾನ್ ಪ್ರಧಾನಿ ಫುಮಿಯೊ ಕಿಶಿಡಾ ಅವರ ನಡುವೆ ಕ್ವಾಡ್ ಶೃಂಗ ಸಭೆ ನಡೆಯಲಿದೆ.

ಭಾರತದ ನೌಕಾಪಡೆಯ ಐಎಫ್‌ಸಿಯನ್ನು ಗುರುಗ್ರಾಮದಲ್ಲಿ ಸ್ಥಾಪಿಸಲಾಗಿದೆ. ಕಡಲ್ಗಳ್ಳತನ, ದರೋಡೆ, ಕಳ್ಳ ಸಾಗಾಟ, ಅಕ್ರಮ ಮೀನುಗಾರಿಕೆ, ಅಸಹಜ ಮಾನವ ಸಂಚಾರ ಮತ್ತು ಇತರ ಸಾಗರ ಸವಾಲುಗಳ ಮೇಲೆ ಈ ಕೇಂದ್ರವು ನಿಗಾ ಇರಿಸುತ್ತದೆ. 2021ರಲ್ಲಿ ಅಕ್ರಮ ಮೀನುಗಾರಿಕೆಯ 399 ಪ್ರಕರಣಗಳನ್ನು ಈ ಕೇಂದ್ರವು ಗುರುತಿಸಿತ್ತು. ಕಳೆದ ತಿಂಗಳು ಇಂತಹ 40 ಪ್ರಕರಣಗಳು ನಡೆದಿದ್ದವು.

ಪ್ರಸ್ತಾವಿತ ಜಾಲವು ಮಹತ್ವದ್ದಾಗಿದೆ. ಕ್ವಾಡ್ ಸದಸ್ಯ ರಾಷ್ಟ್ರಗಳ ನಡುವೆ ಇಂತಹುದೊಂದು ಜಾಲ ರಚನೆಯಾದರೆ, ಹಿಂದೂ ಮಹಾಸಾಗರದಲ್ಲಿ ನಡೆಯುವ ಅಕ್ರಮಗಳಿಗೆ ಕಡಿವಾಣ ಹಾಕುವುದು ಸಾಧ್ಯ ಎಂದು ಮೂಲಗಳು ಹೇಳಿವೆ.

ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ಚೀನಾದ ಆಕ್ರಮಣಶೀಲತೆಯನ್ನು ತಡೆಯುವುದಕ್ಕಾಗಿ ಭಾರತ, ಜಪಾನ್, ಆಸ್ಟ್ರೇಲಿಯಾ ಮತ್ತು ಅಮೆರಿಕ ಜತೆಯಾಗಿ ಕ್ವಾಡ್ ಕೂಟವನ್ನು ರಚಿಸಿಕೊಂಡಿವೆ.

‘ಉಪಕ್ರಮಗಳ ಪರಿಶೀಲನೆಗೆ ಕ್ವಾಡ್ ಶೃಂಗಸಭೆ ಉತ್ತಮ ಅವಕಾಶ’

ನವದೆಹಲಿ (ಪಿಟಿಐ): ಜಪಾನ್‌ನಲ್ಲಿ ಮೇ 24 ರಂದು ನಡೆಯುವ ಕ್ವಾಡ್ ನಾಯಕರ ಶೃಂಗಸಭೆಯು ನಾಲ್ಕು ದೇಶಗಳ ನಾಯಕರಿಗೆ ಈವರೆಗಿನ ಉಪಕ್ರಮಗಳ ಪ್ರಗತಿಯನ್ನು ಪರಿಶೀಲಿಸಲು ಮತ್ತು ಇಂಡೋ-ಪೆಸಿಫಿಕ್‌ನಲ್ಲಿನ ಬೆಳವಣಿಗೆಗಳು ಹಾಗೂ ಪರಸ್ಪರ ಹಿತಾಸಕ್ತಿ ಕುರಿತ ಜಾಗತಿಕ ವಿಷಯಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲು ಅವಕಾಶ ಒದಗಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ.


ನರೇಂದ್ರ ಮೋದಿ

ಮೋದಿ ಅವರು ಮೇ 23 ಹಾಗೂ 24 ರಂದು ಜಪಾನ್‌ಗೆ ಭೇಟಿ ನೀಡಲಿದ್ದು, ಇದಕ್ಕೂ ಮುನ್ನ ಹೇಳಿಕೆ ನೀಡಿದ್ದಾರೆ.

ಭೇಟಿಯ ಸಂದರ್ಭದಲ್ಲಿ ಅವರು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಬಳಿಕ ದ್ವಿಪಕ್ಷೀಯ ಸಂಬಂಧಗಳ ಮತ್ತಷ್ಟು ಬಲವರ್ಧನೆಗೊಳಿಸುವ ನಿಟ್ಟಿನಲ್ಲಿ ಚರ್ಚಿಸಲಿದ್ದಾರೆ.

‘ಪ್ರಾದೇಶಿಕ ಅಭಿವೃದ್ಧಿ ಮತ್ತು ಸಮಕಾಲೀನ ಜಾಗತಿಕ ಸಮಸ್ಯೆಗಳ ಕುರಿತು ಮಾತುಕತೆ ಮುಂದುವರಿಸುತ್ತೇವೆ’ ಎಂದೂ ನರೇಂದ್ರ ಮೋದಿ ಅವರು ಹೇಳಿದ್ದಾರೆ.

‘ಜಪಾನ್ ಪ್ರಧಾನಿ ಫ್ಯೂಮಿಯೊ ಕಿಶಿಡಾ ಅವರ ಆಹ್ವಾನದ ಮೇರೆಗೆ ಟೋಕಿಯೊಗೆ ಭೇಟಿ ನೀಡಲಿದ್ದೇನೆ. ಭೇಟಿಯ ಸಂದರ್ಭದಲ್ಲಿ ಭಾರತ-ಜಪಾನ್ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆಯನ್ನು ಬಲಪಡಿಸುವ ಗುರಿಯೊಂದಿಗೆ ಮಾತುಕತೆಯನ್ನು ಮತ್ತಷ್ಟು ಮುಂದುವರಿಸಲು ಎದುರು ನೋಡುತ್ತಿದ್ದೇನೆ’ ಎಂದು ಮೋದಿ ಹೇಳಿದ್ದಾರೆ.

ಶ್ರೀಲಂಕಾಗೆ ಭಾರತದಿಂದ ₹200 ಕೋಟಿ ಪರಿಹಾರ ಸಾಮಗ್ರಿ

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಶ್ರೀಲಂಕಾಗೆ ನೆರವಾಗಲು ಭಾರತ ಕಳುಹಿಸಿದ ₹200 ಕೋಟಿ ಮೌಲ್ಯದ ಪರಿಹಾರ ಸಾಮಗ್ರಿಗಳು ಭಾನುವಾರ ರಾಜಧಾನಿ ಕೊಲಂಬೊ ತಲುಪಿದವು.

2 ಹಡಗಿನಲ್ಲಿದ್ದ ಅಕ್ಕಿ, ಔಷಧ, ಹಾಲಿನ ಪುಡಿ ಒಳಗೊಂಡ ಸಾಮಗ್ರಿಗಳನ್ನು ಭಾರತೀಯ ಹೈ ಕಮಿಷನರ್ ಗೋಪಾಲ್ ಬಾಗ್ಲೆ ಅವರು ಶ್ರೀಲಂಕಾ ಸರ್ಕಾರಕ್ಕೆ ಹಸ್ತಾಂತರಿಸಿದರು.

ಶ್ರೀಲಂಕಾಗೆ 40,000 ಟನ್ ಅಕ್ಕಿ, 500 ಟನ್ ಹಾಲಿನ ಪುಡಿ ಮತ್ತು ವೈದ್ಯಕೀಯ ಸಾಮಗ್ರಿ ನೀಡುವುದಾಗಿ ತಮಿಳುನಾಡು ಸರ್ಕಾರ ಭರವಸೆ ನೀಡಿದೆ. ಇದರ ಮೊದಲ ಭಾಗವಾಗಿ 9,000 ಟನ್ ಅಕ್ಕಿ, 50 ಟನ್ ಹಾಲಿನ ಪುಡಿ ಮತ್ತು 25 ಟನ್‌ಗೂ ಹೆಚ್ಚಿನ ವೈದ್ಯಕೀಯ ಸಾಮಗ್ರಿಗಳನ್ನು ಕಳುಹಿಸಿಕೊಡಲಾಗಿದೆ.

ಈ ಕುರಿತು ಟ್ವೀಟ್ ಮಾಡಿರುವ ಶ್ರೀಲಂಕಾ ಪ್ರಧಾನಿ ರಾನಿಲ್ ವಿಕ್ರಮಸಿಂಘೆ, ‘ಭಾರತದ ₹200 ಕೋಟಿ ಮೌಲ್ಯದ ಮಾನವೀಯ ನೆರವನ್ನು ಶ್ರೀಲಂಕಾ ಸ್ವೀಕರಿಸಿದೆ. ಭಾರತದ ಜನತೆ ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರಿಗೆ ಧನ್ಯವಾದ’ ಎಂದು ತಿಳಿಸಿದ್ದಾರೆ.

ಶ್ರೀಲಂಕಾದಲ್ಲಿರುವ ಭಾರತೀಯ ಹೈಕಮಿಷನ್ ಸಹ ಟ್ವೀಟ್ ಮಾಡಿ, ‘ಭಾರತದ ಪ್ರಜೆಗಳು ಶ್ರೀಲಂಕಾ ಪ್ರಜೆಗಳಿಗೆ ರವಾನಿಸುತ್ತಿರುವ ಕಾಳಜಿಯ ಸಂದೇಶ ಇದು! ಇನ್ನೂ ಹೆಚ್ಚಿನ ಪರಿಹಾರ ಸಾಮಗ್ರಿಗಳು ಶ್ರೀಲಂಕಾಗೆ ರವಾನೆಯಾಗಲಿವೆ’ ಎಂದು ಹೇಳಿದೆ.


ಭಾರತ ಶ್ರೀಲಂಕಾಗೆ ಕಳುಹಿಸಿದ ಪರಿಹಾರ ಸಾಮಗ್ರಿಗಳು –ಎಪಿ/ಪಿಟಿಐ ಚಿತ್ರ

ದೆಹಲಿ: ವಿಷಾನಿಲ ಸೇವಿಸಿ ತಾಯಿ, ಮಕ್ಕಳು ಆತ್ಮಹತ್ಯೆ

ನವದೆಹಲಿ: ಇಲ್ಲಿನ ವಸಂತ್ ವಿಹಾರ್ ಅಪಾರ್ಟ್‌ಮೆಂಟ್‌ನಲ್ಲಿ ಮೂವರು ಮಹಿಳೆಯರು ವಿಷಾನಿಲ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಭಾನುವಾರ ನಡೆದಿದೆ.

ಮಂಜು ಶ್ರೀವಾಸ್ತವ (55) ಅವರ ಪುತ್ರಿಯರಾದ ಅಂಕಿತಾ (30) ಮತ್ತು ಅಂಶುತಾ (26) ಸಾವಿಗೀಡಾದವರು. ಮೂವರೂ ಒಂದೇ ಕೋಣೆಯಲ್ಲಿ ಸಾವಿಗೀಡಾಗಿದ್ದು, ಮೃತದೇಹಗಳ ಬಳಿ ಮರಣ ಪತ್ರ (ಡೆತ್ ನೋಟ್) ಪತ್ತೆಯಾಗಿದೆ. ಆತ್ಮಹತ್ಯೆಗೆ ಕೆಲ ತಿಂಗಳ ಹಿಂದೆಯೇ ತಾಯಿ– ಮಕ್ಕಳು ಯೋಜನೆ ರೂಪಿಸಿರಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ಆತ್ಮಹತ್ಯೆಗಾಗಿಯೇ ಅವರು ಆನ್‌ಲೈನ್ ಮೂಲಕ ಅಗ್ನಿಕುಂಡ ಹಾಗೂ ಕಲ್ಲಿದ್ದಲು ತರಿಸಿದ್ದರು ಎಂದು ಪೊಲೀಸರು ಹೇಳಿದ್ದಾರೆ. ದೂರು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಸ್ವಂತ ಫ್ಲಾಟ್ ಹೊಂದಿದ್ದ ಮಂಜು ಅವರ ಪತಿ ಉಮೇಶ್ ಚಂದ್ರ ಶ್ರೀವಾಸ್ತವ ಅವರು ಕಳೆದ ವರ್ಷ ಕೋವಿಡ್‌ನಿಂದಾಗಿ ಮೃತಪಟ್ಟಿದ್ದರು. ಇದರಿಂದ ಮಂಜು ಮತ್ತು ಅವರ ಪುತ್ರಿಯರು ಖಿನ್ನತೆಗೊಳಗಾಗಿದ್ದರು. ಮಂಜು ಅವರು ಎರಡು ತಿಂಗಳಿಂದ ಹಾಸಿಗೆ ಹಿಡಿದಿದ್ದರು ಎಂದು ನೆರೆಹೊರೆಯವರು ಮಾಹಿತಿ ನೀಡಿದ್ದಾರೆ.

ಸಿಲಿಂಡರ್ ಲೀಕ್: ತಾಯಿ– ಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳಲು ಯೋಜನೆ ರೂಪಿಸಿಕೊಂಡಿದ್ದರು. ಇದಕ್ಕಾಗಿ ಅವರು ಅಡುಗೆ ಅನಿಲ ಸಿಲಿಂಡರ್ (ಎಲ್‌ಪಿಜಿ) ಅನ್ನು ಆನ್ ಮಾಡಿಟ್ಟು, ಕಿಟಕಿ– ಬಾಗಿಲುಗಳಿಗೆ ಟೇಪ್ ಅಂಟಿಸಿದ್ದರು. ಇದರ ಜತೆಗೆ ಅಗ್ನಿಕುಂಡದಲ್ಲಿ ವಿಷಾನಿಲ ಹೊರಹೊಮ್ಮುವ ಪದಾರ್ಥಗಳು ಹಾಗೂ ಕಲ್ಲಿದ್ದಲನ್ನು ಉರಿಸಿದ್ದರು. ಮನೆಯ ತುಂಬಾ ಕಾರ್ಬನ್ ಮಾನಾಕ್ಸೈಡ್ ತುಂಬಿಕೊಂಡಿದ್ದರ ಪರಿಣಾಮ ವಿಷಾನಿಲ ಸೇವಿಸಿ ತಾಯಿ– ಮಕ್ಕಳು ಸಾವಿಗೀಡಾಗಿದ್ದಾರೆ.

ಲೈಟರ್ ಬಳಸಬೇಡಿ: ‘ನೆರೆಹೊರೆಯವರು ಮತ್ತು ಪೊಲೀಸರು, ಮನೆಯೊಳಗೆ ಪ್ರವೇಶಿಸಿದಾಗ ವಿಷಾನಿಲ ಹಬ್ಬಿಕೊಂಡಿರುವುದರಿಂದ ಬೆಂಕಿಕಡ್ಡಿ ಅಥವಾ ಲೈಟರ್‌ಗಳನ್ನು ಬಳಸಬೇಡಿ’ ಎಂದೂ ಡೆತ್‌ನೋಟ್‌ನಲ್ಲಿ ಬರೆಯಲಾಗಿತ್ತು.

ಅಸ್ಸಾಂನಲ್ಲಿ ಠಾಣೆಗೆ ಬೆಂಕಿ: ಶೀಘ್ರ ಎಸ್‌ಐಟಿ ರಚನೆ

ನಾಗಾಂವ್ (ಪಿಟಿಐ): ವ್ಯಕ್ತಿಯೊಬ್ಬರು ಪೊಲೀಸ್ ಕಸ್ಟಡಿಯಲ್ಲಿ ಮೃತಪಟ್ಟಿದ್ದಾರೆ ಎಂದು ಆರೋಪಿಸಿ ಉದ್ರಿಕ್ತರ ಗುಂಪೊಂದು ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದ ಘಟನೆ ಅಸ್ಸಾಂನ ನಾಗಾಂವ್ ಜಿಲ್ಲೆಯ ಬಟಾದ್ರವ ಎಂಬಲ್ಲಿ ಶನಿವಾರ ನಡೆದಿದೆ.

ಘಟನೆಗೆ ಸಂಬಂಧಿಸಿ ಐವರನ್ನು ಬಂಧಿಸಲಾಗಿದೆ. ಈ ಸಂಬಂಧ ಬಟಾದ್ರವ ಠಾಣೆಯ ಪ್ರಭಾರ ಅಧಿಕಾರಿಯನ್ನು ಅಮಾನತು ಮಾಡಲಾಗಿದೆ. ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದ ಘಟನೆ ತನಿಖೆಗೆ ವಿಶೇಷ ತನಿಖಾ ದಳ ರಚಿಸಲಾಗುತ್ತದೆ. ಪೊಲೀಸ್ ಠಾಣೆಯಲ್ಲಿ ವ್ಯಕ್ತಿ ಮೃತಪಟ್ಟಿದ್ದಾರೆ ಎಂಬ ಘಟನೆ ಬಗ್ಗೆ ಪ್ರತ್ಯೇಕವಾಗಿ ತನಿಖೆಗೆ ಆದೇಶಿಸಲಾಗುತ್ತದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಘಟನೆ ಬಗ್ಗೆ ಭಾನುವಾರ ಪ್ರತಿಕ್ರಿಯಿಸಿದ ಮಹಾಂತ ಅವರು, 'ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದವರು ಯಾರೂ ಸಹ ಸಾವಿಗೀಡಾದ ವ್ಯಕ್ತಿಯ ಸಂಬಂಧಿಗಳಲ್ಲ. ಅವರೆಲ್ಲ ಅಪರಾಧ ಚಟುವಟಿಕೆಗಳ ಹಿನ್ನೆಲೆಯುಳ್ಳವರಾಗಿದ್ದಾರೆ. ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇವೆ' ಎಂದರು.

ಮೀನು ವ್ಯಾಪಾರಿಯೊಬ್ಬರನ್ನು ಶುಕ್ರವಾರ ರಾತ್ರಿ ಪೊಲೀಸರು ವಶಕ್ಕೆ ಪಡೆದಿದ್ದರು. ಆ ವ್ಯಕ್ತಿ ಪೊಲೀಸ್ ಕಸ್ಟಡಿಯಲ್ಲಿ ಮೃತಪಟ್ಟಿದ್ದಾನೆ ಎಂದು ಆರೋಪಿಸಿದ ಉದ್ರಿಕ್ತ ಗುಂಪು, ಠಾಣೆಗೆ ಬೆಂಕಿ ಹಚ್ಚಿದೆ. ಈ ಘಟನೆಯಲ್ಲಿ ಇಬ್ಬರು ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದು, ದ್ವಿಚಕ್ರ ವಾಹನಗಳು ಬೆಂಕಿಗೆ ಆಹುತಿಯಾಗಿವೆ.

ಬಂಧಿತರನ್ನು ಬಿಡಿಸಿಕೊಂಡು ಬರಲೆಂದು ಪೊಲೀಸ್ ಠಾಣೆಗೆ ತೆರಳಿದ್ದಾಗ ಪೊಲೀಸರು ₹10,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಶನಿವಾರ ಬೆಳಿಗ್ಗೆ ಬಂಧಿತ ವ್ಯಕ್ತಿಯ ಪತ್ನಿ ಹಣ ತೆಗೆದುಕೊಂಡು ಠಾಣೆಗೆ ಹೋಗಿದ್ದರು. ಆದರೆ, ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂಬ ಮಾಹಿತಿ ದೊರೆಯಿತು. ಅಲ್ಲಿಗೆ ತಲುಪುವಷ್ಟರಲ್ಲಿ ಅವರು ಮೃತಪಟ್ಟಿರುವುದು ತಿಳಿಯಿತು ಎಂದು ವ್ಯಾಪಾರಿಯ ಕುಟುಂಬದವರು ಆರೋಪಿಸಿದ್ದಾರೆ.

ಚೋಕ್ಸಿ ವಿರುದ್ಧದ ಪ್ರಕರಣ ಕೈಬಿಟ್ಟ ಡೊಮಿನಿಕಾ

ನವದೆಹಲಿ(ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ₹13,500 ಕೋಟಿ ವಂಚನೆ ಎಸಗಿದ ಆರೋಪ ಎದುರಿಸುತ್ತಿರುವ ವಜ್ರೋದ್ಯಮಿ ಮೆಹುಲ್ ಚೋಕ್ಸಿ ಅವರು ಆಂಟಿಗುವಾ ಮತ್ತು ಬಾರ್ಬುಡಾದಿಂದ ಅಕ್ರಮವಾಗಿ ದೇಶ ಪ್ರವೇಶಿಸಿದ್ದಾರೆ ಎಂಬ ಕುರಿತ ಪ್ರಕರಣಗಳನ್ನು ಡೊಮಿನಿಕಾ ಸರ್ಕಾರವು ಮೇ 20ರಂದು ಕೈಬಿಟ್ಟಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಆಂಟಿಗುವಾ ಮತ್ತು ಬಾರ್ಬುಡಾದಿಂದ ನಾಪತ್ತೆಯಾಗಿದ್ದ ಚೋಕ್ಸಿ ಅವರನ್ನು ಮೇ ತಿಂಗಳಲ್ಲಿ ಡೊಮಿನಿಕಾ ಪೊಲೀಸರು ಅಕ್ರಮವಾಗಿ ದೇಶ ನುಸುಳಿದ ಆರೋಪದ ಮೇರೆಗೆ ವಶಕ್ಕೆ ಪಡೆದಿದ್ದರು. 51 ದಿನಗಳ ಬಳಿಕ ಜಾಮೀನಿನ ಮೇರೆಗೆ ಬಿಡುಗಡೆಯಾಗಿದ್ದರು. ಈ ಹಂತದಲ್ಲಿ ಚೋಕ್ಸಿ ಅವರನ್ನು ಖಾಸಗಿ ಜೆಟ್ ಮೂಲಕ ಭಾರತಕ್ಕೆ ಕರೆತರಲು ಸಿಬಿಐ ತಂಡ ಮುಂದಾಗಿತ್ತು. ಆದರೆ ಅದು ಸಾಧ್ಯವಾಗಿರಲಿಲ್ಲ.


ಮೆಹುಲ್ ಚೋಕ್ಸಿ

ಆಂಟಿಗುವಾ ಪ್ರಜೆಯಾದ ಮೆಹುಲ್ ಚೋಕ್ಸಿ ಅವರನ್ನು ಭಾರತೀಯರಂತೆ ಕಂಡುಬಂದ ವ್ಯಕ್ತಿಗಳು ಅಪಹರಿಸಿ, ಡೊಮಿನಿಕಾಗೆ ಕರೆತಂದಿದ್ದರು ಎಂದು ಚೋಕ್ಸಿ ವಕೀಲರು ವಾದಿಸಿದ್ದರು.

ಡಾನ್‌ಬಾಸ್‌ನತ್ತ ರಷ್ಯಾ ಚಿತ್ತ

ದಾವೋಸ್ ಶೃಂಗಸಭೆಯಲ್ಲಿ ರಷ್ಯಾ ಕ್ರಮಕ್ಕೆ ಖಂಡನೆ ನಿರೀಕ್ಷೆ

ಕೀವ್(ಎಎಫ್‌ಪಿ): ದಾವೋಸ್‌ನಲ್ಲಿ ನಡೆಯಲಿರುವ ವಿಶ್ವ ವ್ಯಾಪಾರ ಮತ್ತು ರಾಜಕೀಯ ಗಣ್ಯರ ಸಭೆಯನ್ನು ರಷ್ಯಾದ ವಿರುದ್ಧ ವೇದಿಕೆಯಾಗಿಸಿಕೊಳ್ಳಲು ಉಕ್ರೇನ್ ಮುಂದಾಗಿರುವ ಬೆನ್ನಲ್ಲೇ, ರಷ್ಯಾ ಪಡೆಗಳು ಭಾನುವಾರ ಉಕ್ರೇನ್‌ನ ಮುಂಚೂಣಿಯಲ್ಲಿರುವ ನಗರಗಳ ಮೇಲೆ ತನ್ನ ಬಾಂಬ್ ದಾಳಿಯನ್ನು ಮುಂದುವರಿಸಿದೆ.

ದಾವೋಸ್ ಆರ್ಥಿಕ ಶೃಂಗಸಭೆಯನ್ನು ಉದ್ದೇಶಿಸಿ ಸೋಮವಾರ ಸಂಜೆ, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಭಾಷಣ ಮಾಡಲಿದ್ದಾರೆ.

ಹಾರ್ಕೀವ್‌ನ ಉತ್ತರ, ಮೈಕೋಲೇವ್ ಮತ್ತು ಝುಪೊರಿಝ್ಝಿ ಸೇರಿದಂತೆ ಇನ್ನಿತರ ಪ್ರದೇಶದಲ್ಲಿ ಕ್ಷಿಪಣಿ ಮತ್ತು ಶೆಲ್ ದಾಳಿ ನಡೆಸುತ್ತಿರುವ ರಷ್ಯಾ, ಡಾನ್‌ಬಾಸ್‌ನಲ್ಲಿ ಎಂಟು ಮಂದಿ ನಾಗರಿಕರನ್ನು ಹತ್ಯೆ ಮಾಡಿದೆ. ಈ ಮೂಲಕ ಡಾನ್‌ಬಾಸ್ ಪ್ರಾಂತ್ಯವನ್ನು ವಶಕ್ಕೆ ಪಡೆಯುವುದಕ್ಕೆ ರಷ್ಯಾ ಚಿತ್ತ ಹರಿಸಿದೆ. ಈ ನಡುವೆ, ಉಕ್ರೇನ್ ರಷ್ಯಾ ಸೇನೆಯನ್ನು ಎದುರಿಸಲು ಪಾಶ್ಚಿಮಾತ್ಯ ಮತ್ತು ಅಂತರರಾಷ್ಟ್ರೀಯ ನೆರವು ಪಡೆಯಲು ಯತ್ನ ನಡೆಸುತ್ತಿದೆ. ಅಲ್ಲದೆ, ರಷ್ಯಾದ ಮೇಲೆ ಹಲವು ನಿರ್ಬಂಧಗಳನ್ನು ಹೇರಿರುವ ಯುರೋಪ್ ದೇಶಗಳು, ಉಕ್ರೇನ್‌ಗೆ ಬೆಂಬಲ ನೀಡುತ್ತಿವೆ.

ರಷ್ಯಾ ಯುದ್ಧ ಸಾರಿದಾಗಿನಿಂದ ಉಕ್ರೇನ್‌ನ 174 ವಿಮಾನಗಳು, 125 ಹೆಲಿಕಾಪ್ಟರ್‌ಗಳು, 977 ಮಾನವರಹಿತ ವೈಮಾನಿಕ ವಾಹನಗಳು, 317 ವಿಮಾನ ವಿರೋಧಿ ಕ್ಷಿಪಣಿ ವ್ಯವಸ್ಥೆ ಹಾಗೂ 3,198 ಟ್ಯಾಂಕ್‌ಗಳು, 408 ರಾಕೆಟ್ ಲಾಂಚರ್‌ಗಳನ್ನು ನಾಶ ಮಾಡಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ತಿಳಿಸಿದೆ.

ಲಂಕಾ: ಅಧಿಕಾರ ಮೊಟಕಿಗೆ ಶಿಫಾರಸು

ಕೊಲಂಬೊ(ಪಿಟಿಐ): ಶ್ರೀಲಂಕಾದ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರಿಗೆ ಇರುವ ಅನಿರ್ಬಂಧ ಅಧಿಕಾರಗಳ ಮೇಲೆ ನಿಯಂತ್ರಣಕ್ಕೆ ಅವಕಾಶ ನೀಡುವ ಸಂವಿಧಾನದ 21ನೇ ತಿದ್ದುಪಡಿ ಪ್ರಸ್ತಾವನೆಯ ಅನುಮೋದನೆಗಾಗಿ ಸೋಮವಾರ ಸಂಪುಟಕ್ಕೆ ಶಿಫಾರಸು ಮಾಡಲಾಗುತ್ತದೆ ಎಂದು ಸಚಿವರೊಬ್ಬರು ತಿಳಿಸಿದ್ದಾರೆ.

ಅಸ್ಸಾಂ ಪ್ರವಾಹ: 24 ಸಾವು

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಭಾನುವಾರ ಪ್ರವಾಹ ಪರಿಸ್ಥಿತಿ ಹದಗೆಟ್ಟಿದ್ದು, ಇಬ್ಬರು ಮಕ್ಕಳು ಸೇರಿದಂತೆ ಆರು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಇದರಿಂದ ಪ್ರವಾಹದಲ್ಲಿ ಸಾವಿಗೀಡಾದವರ ಒಟ್ಟು ಸಂಖ್ಯೆ 24ಕ್ಕೆ ಏರಿದೆ.

ರಾಜ್ಯದ 22 ಜಿಲ್ಲೆಗಳಲ್ಲಿ ಸುಮಾರು 7.2 ಲಕ್ಷ ಜನರು ಪ್ರವಾಹದಿಂದ ಸಂಕಷ್ಟಕ್ಕೊಳಗಾಗಿದ್ದಾರೆ.

ಪ್ರಸ್ತುತ ರಾಜ್ಯದಲ್ಲಿ 1,413 ಗ್ರಾಮಗಳು ಜಲಾವೃತವಾಗಿವೆ. ನಾಗಾಂವ್ ಜಿಲ್ಲೆ ಅತಿ ಹೆಚ್ಚು ಎಂದು ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪ್ರವಾಹದಿಂದ ರಾಜ್ಯದಲ್ಲಿ 46,160 ಹೆಕ್ಟೇರ್ ಬೆಳೆ ಪ್ರದೇಶ ಮುಳುಗಡೆಯಾಗಿದೆ. ಹಲವೆಡೆ ಭೂಕುಸಿತ ಸಂಭವಿಸಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ರಾಜ್ಯದ 14 ಜಿಲ್ಲೆಗಳಲ್ಲಿ 248 ಪರಿಹಾರ ಶಿಬಿರಗಳನ್ನು ನಡೆಸಲಾಗುತ್ತಿದ್ದು, ಅಲ್ಲಿ 6,911 ಮಕ್ಕಳು ಸೇರಿದಂತೆ 48,304 ಜನರು ಆಶ್ರಯ ಪಡೆದಿದ್ದಾರೆ.

ಮಿನಿ ಒಲಿಂಪಿಕ್ಸ್: ಬಾಲಕಿಯರ ವಿಭಾಗದಲ್ಲಿ ಬೆಳಗಾವಿ ತಂಡ ರನ್ನರ್ ಅಪ್

ಹಾಕಿ: ಕೊಡಗು, ಹಾಸನ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು ಮತ್ತು ಹಾಸನ ಜಿಲ್ಲಾ ತಂಡಗಳು ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಸಹಯೋಗದಲ್ಲಿ ಆಯೋಜಿಸಿದ್ದ ರಾಜ್ಯ ಮಿನಿ ಒಲಿಂಪಿಕ್ಸ್‌ನ ಹಾಕಿಯಲ್ಲಿ ಕ್ರಮವಾಗಿ ಬಾಲಕ ಮತ್ತು ಬಾಲಕಿಯರ ವಿಭಾಗದ ಚಾಂಪಿಯನ್ ಪಟ್ಟ ತಮ್ಮದಾಗಿಸಿಕೊಂಡವು.

ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಕೊಡಗು ತಂಡ ಹಾಸನವನ್ನು 3–0ಯಿಂದ ಮಣಿಸಿತು. ದೀಕ್ಷಿತ್ ಎಚ್.ಎನ್ ಎರಡು ಗೋಲುಗಳೊಂದಿಗೆ ಮಿಂಚಿದರೆ ಜಶನ್ ತಿಮ್ಮಯ್ಯ ಒಂದು ಗೋಲು ಗಳಿಸಿದರು.

ಬಾಲಕಿಯರ ವಿಭಾಗದ ರೌಂಡ್ ರಾಬಿನ್ ಮಾದರಿಯಲ್ಲಿ ಗರಿಷ್ಠ ಪಾಯಿಂಟ್ ಗಳಿಸಿದ ಹಾಸನ ತಂಡವನ್ನು ವಿಜಯಿ ಎಂದು ಘೋಷಿಸಲಾಯಿತು. ಬೆಳಗಾವಿ ಜಿಲ್ಲಾ ತಂಡ ರನ್ನರ್ ಅಪ್ ಆಯಿತು. ಹಾಸನ 15 ಮತ್ತು ಬೆಳಗಾವಿ 12 ಪಾಯಿಂಟ್ ಕಲೆ ಹಾಕಿತು. ರೌಂಡ್ ರಾಬಿನ್ ಹಂತದ ಕೊನೆಯ ಪಂದ್ಯದಲ್ಲಿ ಹಾಸನ 5–0ಯಿಂದ ಕೊಡಗು ವಿರುದ್ಧ ಜಯ ಗಳಿಸಿತ್ತು. ಯಶಸ್ವಿನಿ, ಪ್ರಣೀತ, ಅಕ್ಷಿತ, ಯಶಸ್ವಿ ಮತ್ತು ಭಾವನ ಗೋಲು ಗಳಿಸಿದರು. ಬೆಳಗಾವಿ ತಂಡ ಕೊನೆಯ ತನ್ನ ಕೊನೆಯ ಪಂದ್ಯದಲ್ಲಿ ಬಳ್ಳಾರಿ ವಿರುದ್ಧ 11–0ಯಿಂದ ಜಯ ಗಳಿಸಿತು. ವೈಷ್ಣವಿ 5 ಗೋಲುಗಳೊಂದಿಗೆ ಮಿಂಚಿದರೆ ಮಾಯವ್ವ 3 ಗೋಲು ಗಳಸಿದರು. ತೃಪ್ತಿ ಕಾಂಬ್ಳೆ 2 ಮತ್ತು ಚೈತ್ರ 1 ಗೋಲು ಗಳಿಸಿದರು.


ಅಥ್ಲೆಟಿಕ್ಸ್‌ನಲ್ಲಿ ಬಾಲಕರ ಮತ್ತು ಬಾಲಕಿಯರ ವಿಭಾಗದ ಉತ್ತಮ ಕ್ರೀಡಾಪಟುಗಳಾಗಿ ಆಯ್ಕೆಯಾದ ಉಡುಪಿ ಜಿಲ್ಲೆಯ ಅನುರಾಗ್ ಜಿ (ಎಡ) ಮತ್ತು ಬೆಳಗಾವಿ ಜಿಲ್ಲೆಯ ಸ್ವರ ಸಂತೋಷ್ ಶಿಂಧೆ –ಪ್ರಜಾವಾಣಿ ಚಿತ್ರ

ಹಾವೇರಿ, ತುಮಕೂರು ತಂಡಗಳಿಗೆ ಪ್ರಶಸ್ತಿ: ಬಾಲಕರ ಹ್ಯಾಂಡ್‌ಬಾಲ್ ಫೈನಲ್‌ನಲ್ಲಿ ಹಾವೇರಿ ತಂಡ ಚಿಕ್ಕಮಗಳೂರು ವಿರುದ್ಧ ಜಯ ಗಳಿಸಿತು. ಬಾಲಕಿಯರ ವಿಭಾಗದಲ್ಲಿ ತುಮಕೂರು ತಂಡ ದಾವಣಗೆರೆ ವಿರುದ್ಧ ಜಯ ಗಳಿಸಿತು. ಬಾಲಕರ ವಿಭಾಗದಲ್ಲಿ ಚಿತ್ರದುರ್ಗ ಮತ್ತು ಬಾಲಕಿಯರ ವಿಭಾಗದಲ್ಲಿ ಬೆಳಗಾವಿ ಮೂರನೇ ಸ್ಥಾನ ಗಳಿಸಿತು.

ಸಮಾರೋಪ ಸಮಾರಂಭ: ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ ನಾರಾಯಣಗೌಡ ಪ್ರಶಸ್ತಿಗಳನ್ನು ವಿತರಿಸಿದರು. ಸಚಿವ ಮುನಿರತ್ನ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ. ಗೋವಿಂದರಾಜ್, ಸರ್ಕಾರದ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯ, ಕ್ರೀಡಾ ಇಲಾಖೆ ಆಯುಕ್ತ ಗೋಪಾಲಕೃಷ್ಣ ಮತ್ತಿತರರು ಇದ್ದರು.

ಭಾರತ ಟಿ20 ತಂಡಕ್ಕೆ ರಾಹುಲ್ ನಾಯಕ

ಬೆಂಗಳೂರು: ಕನ್ನಡಿಗ ಕೆ.ಎಲ್. ರಾಹುಲ್ ಮುಂದಿನ ತಿಂಗಳು ನಡೆಯಲಿರುವ ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿಯಲ್ಲಿ ಆಡುವ ಭಾರತ ತಂಡದ ನಾಯಕತ್ವ ವಹಿಸುವರು.

ಈ ಸರಣಿಯಿಂದ ರೋಹಿತ್ ಶರ್ಮಾ ಅವರಿಗೆ ವಿಶ್ರಾಂತಿ ನೀಡಿರುವುದರಿಂದ ರಾಹುಲ್‌ಗೆ ಹೊಣೆ ವಹಿಸಲಾಗಿದೆ. ರಿಷಭ್ ಪಂತ್ ಉಪನಾಯಕರಾಗಿದ್ದಾರೆ. ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಮಿಂಚುತ್ತಿರುವ ಅನುಭವಿ ವಿಕೆಟ್‌ಕೀಪರ್–ಬ್ಯಾಟರ್ ದಿನೇಶ್ ಕಾರ್ತಿಕ್ ಕೂಡ ಸ್ಥಾನ ಗಳಿಸಿದ್ದಾರೆ. ಸರಣಿಯಲ್ಲಿ ಜೂನ್ 9ರಿಂದ 19ರವರೆಗೆ ಐದು ಪಂದ್ಯಗಳು ನಡೆಯಲಿವೆ. ಕಾಶ್ಮೀರದ ಪ್ರತಿಭೆ, ವೇಗಿ ಉಮ್ರನ್ ಮಲೀಕ್ ತಂಡದಲ್ಲಿದ್ದಾರೆ.


ಕೆ.ಎಲ್. ರಾಹುಲ್ –ಪಿಟಿಐ ಚಿತ್ರ

ಟಿ20: ಕೆ.ಎಲ್. ರಾಹುಲ್ (ನಾಯಕ), ಋತುರಾಜ್ ಗಾಯಕವಾಡ, ಇಶಾನ್ ಕಿಶನ್, ದೀಪಕ್ ಹೂಡಾ, ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ಉಪನಾಯಕ/ವಿಕೆಟ್‌ಕೀಪರ್), ದಿನೇಶ್ ಕಾರ್ತಿಕ್ (ವಿಕೆಟ್‌ಕೀಪರ್–ಬ್ಯಾಟರ್), ಹಾರ್ದಿಕ್ ಪಾಂಡ್ಯ, ವೆಂಕಟೇಶ್ ಅಯ್ಯರ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ರವಿ ಬಿಷ್ಣೋಯಿ, ಭುವನೇಶ್ವರ್ ಕುಮಾರ್, ಹರ್ಷಲ್ ಪಟೇಲ್, ಆವೇಶ್ ಖಾನ್, ಅರ್ಷದೀಪ್ ಸಿಂಗ್, ಉಮ್ರಾನ್ ಮಲಿಕ್.

ಟೆಸ್ಟ್ : ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್ (ಉಪನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಹನುಮವಿಹಾರಿ, ಚೇತೇಶ್ವರ್ ಪೂಜಾರ, ರಿಷಭ್ ಪಂತ್ (ವಿಕೆಟ್‌ಕೀಪರ್), ಕೆ.ಎಸ್. ಭರತ್ (ವಿಕೆಟ್‌ಕೀಪರ್), ರವೀಂದ್ರ ಜಡೇಜ, ಆರ್. ಅಶ್ವಿನ್, ಶಾರ್ದೂಲ್ ಠಾಕೂರ್, ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಉಮೇಶ್ ಯಾದವ್, ಪ್ರಸಿದ್ಧಕೃಷ್ಣ.


ಥಾಮಸ್ ಕಪ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತ ಬ್ಯಾಡ್ಮಿಂಟನ್ ತಂಡವನ್ನು ಭಾನುವಾರ ನವದೆಹಲಿಯಲ್ಲಿ ಅಭಿನಂದಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯ ಕೋಚ್ ಪುಲ್ಲೇಲ ಗೋಪಿಚಂದ್ ಜೊತೆ ಸಂವಾದ ನಡೆಸಿದರು –ಪಿಟಿಐ ಚಿತ್ರ

ಸಿಡಬ್ಲ್ಯುಜಿ: ಆಸ್ಟ್ರೇಲಿಯಾ ತಂಡ ಪ್ರಕಟ

ಮುಂಬೈ: ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆದ ತಂಡವನ್ನೇ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಕಣಕ್ಕೆ ಇಳಿಸಲು ಆಸ್ಟ್ರೇಲಿಯಾ ಕ್ರಿಕೆಟ್ ನಿರ್ಧರಿಸಿದೆ. **ತಂಡ:** ಮೆಗ್‌ಲ್ಯಾನಿಂಗ್ (ನಾಯಕಿ), ರಾಚೆಲ್ ಹೇನ್ಸ್, ಡಾರ್ಸಿ ಬ್ರೌನ್, ನಿಕೋಲಾ ಕ್ಯಾರಿ, ಆ್ಯಶ್ಲಿ ಗಾರ್ಡನರ್, ಗ್ರೇಸ್ ಹ್ಯಾರಿಸ್, ಅಲಿಸಾ ಹೀಲಿ, ಜೆಸ್, ಅಲಾನಾ ಕಿಂಗ್, ತಹಿಲಿಯಾ ಮೆಗ್ರಾ, ಬೇತ್ ಮೂನಿ, ಎಲಿಸಾ ಪೆರಿ, ಮೇಗನ್ ಶುಟ್, ಅನಾಬೆಲ್ ಸೂಥರ್ಲೆಂಡ್, ಅಮಾಂಡ ಜೇಡ್.